# ಅಪರಂಜಿ

ತಿಳಿನಗೆಯ ಕಾರಂಜಿ



ಮಾರ್ಚ್ - 2014





# ಅಪರಂಜಿ

ತಿಳಿನಗೆಯ ಕಾರಂಜಿ





ಸಂಪುಟ 31
ಸಂಚಿಕೆ - 6
ಮಾರ್ಚ್ - 2014

**ಸಂಪಾದಕ ಮಂಡಳಿ**

*ಸಂಪಾದಕರು*
ಶ್ರೀ ಎಂ. ಶಿವಕುಮಾರ್

*ಉಪ ಸಂಪಾದಕರು*
ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಟ್ರಸ್ಟಿಗಳು**
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ ರಾವ್

**ವಿಶೇಷ ಆಹ್ವಾನಿತರು**
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

**ಗೌರವ ಸಲಹೆಗಾರರು**
ಶ್ರೀ ಅ.ರಾ.ಸೇ.

**ಚಂದಾ ವಿವರ:**
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

## *ಈ ಸಂಚಿಕೆಯಲ್ಲಿ.....*

| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ವಜ್ರದ ಪದಕ ಪ್ರಸಂಗ | **ವತ್ಸನ** | 3 |
| ನಕ್ಕರೆ ಏನೇನಾದೀತು? | **ಅ ರಾ ಮಿತ್ರ** | 9 |
| ಬರಹಗಾರನ ಬವಣೆ | **ಎಚ್.ಆರ್. ಹನುಮಂತ ರಾವ್** | 12 |
| ಅರವತ್ತರ ನಂತರ...... | **ಸುಕೇಶವ** | 17 |
| ಮಂಗಳ ಬೇಡ, ಶನಿ ಇರಲಿ | **ಪ್ರಶಾಂತ ಕೆ. ಅಡೂರ** | 20 |
| ಕೊರವಂಜಿ ಪದಬಂಧ | **ವಿದ್ಯಾ ವಿ. ಹಾಲಭಾವಿ** | 22 |
| ಆಟೋ ಫೇರ್ ಗ್ರಾಫ್ | **ರಮ್ಯ** | 23 |
| ಮೂಗು | **ಜಿ.ಬಿ. ಕೋಟೆ ಅನಂತ** | 26 |
| ತುಂತುರು | **ದಂನಾಆ** | 28 |
| ಸ್ಯಾಂಕಿತೀರದ ವಾಕಥಾನ್.. | **ದೀಪಾ ಫಡ್ಕೆ** | 29 |
| ನೋವು ಹಾಗೂ ಹಾಸ್ಯಪ್ರಜ್ಞೆ | **ಶೋಭಾ ಪ್ರಮೋದ್** | 33 |
| ಹುರುಳಿಕಟ್ಟು | **ಎಚ್. ಗೋಪಾಲಕೃಷ್ಣ** | 35 |
| ಶುದ್ಧ ಅಸುದ್ದಿ | **ಎಚ್ಚೆನ್ಎ** | 38 |

**ಮುಖಪುಟ ವ್ಯಂಗ್ಯಚಿತ್ರ - ಗುಜ್ಜಾರ್**

*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*
ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanji42@hotmail.com

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

# ಅಪರಂಜಿ ಕಿಡಿ

● ಪ್ರಕಾಶ್



ಹನ್ನೊಂದು ಪಕ್ಷಗಳ ವೇದಿಕೆ ಅಸ್ತಿತ್ವಕ್ಕೆ – ದೆಹಲಿ ಸುದ್ದಿ

**● ಕ್ರಿಕೆಟ್ ಸುದ್ದಿಯಂತಿದೆಯಲ್ಲ !!**

★★★

ನಾದೆಲ್ಲ ವೇತನ 112 ಕೋಟಿ – ಸುದ್ದಿ

**● ನಾದೆ, ಎಲ್ಲ ಅಂತ ಅವರು ನಕ್ಕರಂತೆ !!**

★★★

ಪೋಲೀಸರ ಬಗ್ಗೆ ಸಿ.ಎಂ. ಹೇಳಿಕೆಗೆ ಬಿ.ಎಸ್.ವೈ. ಕಿಡಿ – ಸುದ್ದಿ

**● ಇದ್ದದ್ದು ಇದ್ದ ಹಾಗೆ ಹೇಳಿದರೆ.... !!**

★★★

ಪಾಕ್ ಸರ್ಕಾರ – ತಾಲಿಬಾನ್ ಮಾತು-ಕತೆ – ಪತ್ರಿಕೆ

**● ಮಾತಿಗಿಂತ ಕತೆಯೇ ಜಾಸ್ತಿ !!**

★★★

ಕಳಂಕಿತ ಸಚಿವರ ಕೈ-ಬಿಡಿ – ಶೀರ್ಷಿಕೆ

**● 'ಇತರ' ರೂ ಇದ್ದಾರೆಯೇ ?!**

★★★

ಬಿ.ಜೆ.ಪಿ.ಯಲ್ಲಿ ಟಿಕೆಟ್‌ಗೆ ಕಲಹ – ಸುದ್ದಿ

**● ದೇಶ ಸೇವೆಗಾಗಿ ಮುನ್ನುಗ್ಗುತ್ತಿದ್ದಾರೆ !!**

★★★

'ಮಹಿಳೆ ನಾಯಕತ್ವ ಗುಣ ಬೆಳೆಸಿಕೊಳ್ಳಲಿ' – ಹೇಳಿಕೆ

**● ಇದನ್ನೇ ಸೋನಿಯಾಗೆ ಹೇಳಬೇಕು !!**

★★★

'ಕೇಜ್ರಿವಾಲ್ ರಾಜೀನಾಮೆ' – ಸುದ್ದಿ

**● ಕ್ರೇಜಿ – ವಾಲ್ ಅನ್ನಬಹುದು ಈಗ !!**

★★★

ವಿಧಾನ ಸಭೆಯಲ್ಲಿ ಅಂಬರೀಷ್ ನಿದ್ದೆ – ಸುದ್ದಿ

**● ಅದು ಅವರ ಅಭಿಪ್ರಾಯ ಅಷ್ಟೆ !!**

★★★



# ವಜ್ರದ ಪದಕ ಪ್ರಸಂಗ

**- ವತ್ಸನ**

**ಚಿ**ಕ್ಕಂದಿನಲ್ಲಿ ನಾವೆಲ್ಲಾ ಆಡುತ್ತಿದ್ದ ಒಂದು ಆಟ, ''ನಾ ಕಾಣೆ''. ಈ ಆಟದಲ್ಲಿ ಒಬ್ಬ ಹುಡುಗ ಇನ್ನೊಬ್ಬನನ್ನು ಕುರಿತು, ''ಒಬ್ಬ ದಾರಿಹೋಕ ಹತ್ತಿರದಲ್ಲಿ ಕುಳಿತಿದ್ದ ಹಣ್ಣು ಮಾರುವವನನ್ನು ಕುರಿತು, ''ತುಮಕೂರಿಗೆ ದಾರಿ ಯಾವುದು?'' ಅಂತ ಕೇಳುತ್ತಾನೆ. ಅದೇ ಸಮಯಕ್ಕೆ ಇನ್ನೊಬ್ಬಾತ ಅಲ್ಲಿಗೆ ಬಂದು ''ಬಾಳೇಹಣ್ಣಿಗೆ ಎಷ್ಟಣ್ಣಾ ಬೆಲೆ?'' ಅಂತ ಕೇಳುತ್ತಾನೆ. ಆ ಹಣ್ಣು ಮಾರುವವ ಇಬ್ಬರಿಗೂ ಒಂದೇ ಉತ್ತರ ಕೊಡುತ್ತಾನೆ. ಆ ಉತ್ತರ ಯಾವುದು?'' ಅಂತ ಕೇಳುತ್ತಾನೆ. ಆ ಇನ್ನೊಬ್ಬ ಹುಡುಗ ಗೆದ್ದ ಸಂಭ್ರಮದಿಂದ ''ನಾ ಕಾಣೆ'' ಅಂತ ಕೂಗಿದರೆ ಅದನು ಗೆದ್ದಂತೆ. ಉತ್ತರ ತಿಳಿಯದಿದ್ದರೆ ಅವನು ಇನ್ನೊಂದು ಪ್ರಶ್ನೆಗೆ ಸಿದ್ಧನಾಗಬೇಕಾಗುತ್ತದೆ. ಯಾಕೆ ಹೇಳುಕ್ಕೆ ಬಂದೆ ಅಂದರೆ ಮೊನ್ನೆ, ಶರಲೇಖ ಮತ್ತು ನಾನು ಟಿ.ವಿ.ಯಲ್ಲಿ ಅರುಣಾಬ್ ಗೋಸ್ವಾಮಿ ಕಾಂಗ್ರೆಸ್‌ನ ಯುವ ನೇತಾ ರಾಹುಲ್ ಗಾಂಧಿಯ ಸಂದರ್ಶನ ನಡೆಸಿದ್ದನ್ನು ನೋಡುತ್ತಿದ್ದೆವು. ಅರುಣಾಬ್ ಯಾವ ಪ್ರಶ್ನೆ ಕೇಳಿದರೂ ರಾಹುಲನದು ಒಂದೇ ಉತ್ತರ, ''ಮಹಿಳೆಯರ ಸಬಲೀಕರಣ''. ಉದಾಹರಣೆಗೆ,

ಪ್ರಶ್ನೆ : ''ರಾಹುಲ್ ನಿಮ್ಮ ಪಕ್ಷದ ಮೇಲೆ ವಂಶಪಾರಂಪರ್ಯವಾಗಿ ಧುರೀಣರನ್ನು ಆರಿಸುವ ಅಪವಾದವಿದೆ. ಈ ಬಗ್ಗೆ ಏನಂತೀರ?''

ಉತ್ತರ : ''ಮಹಿಳಾ ಸಬಲೀಕರಣ''

ಪ್ರಶ್ನೆ : ''ನರೇಂದ್ರ ಮೋದಿ ಬಗ್ಗೆ ನಿಮ್ಮ ಅಭಿಪ್ರಾಯ ಏನು?''

ಉತ್ತರ : ''ಮಹಿಳಾ ಸಬಲೀಕರಣ''

ಪ್ರಶ್ನೆ : ''ಎಂಭತ್ತನಾಲ್ಕರಲ್ಲಿ..........''

ಉತ್ತರ : ''ಮಹಿಳಾ ಸಬಲೀಕರಣ''

ಇದನ್ನು ಸಹಿಸುವುದಕ್ಕಾಗದೇ ಶರಲೇಖ ಟಿ.ವಿ.ಯನ್ನು ಆರಿಸಿ, ''ಟಿ.ವಿ.ಯನ್ನು ಏಕೆ ಇಡಿಯಟ್ ಬಾಕ್ಸ್ ಎನ್ನುತ್ತಾರೆ ಎಂಬುದು ಇಂದು ತಿಳಿಯಿತು'' ಅಂತ ಉದ್ಗರಿಸಿ ಕಾಫಿಕಾಯಿಸಲು ಒಳಕ್ಕೆ ತೆರಳಿದ. ಆ ಕ್ಷಣವೇ ನನ್ನ ಮೊಬೈಲ್ ಕಿಣಿಕಿಣಿಸಿತು. ಆ ಬದಿಯಿಂದ ''ರಾಹುಲ್ ಮಾತಾಡ್ತಾ ಇರೋದು'' ಎಂಬ ದನಿ ಕೇಳಿ ಒಂದು ಕ್ಷಣ ನನ್ನ ಎದೆ ಧಸಕ್ಕೆಂದಿದ್ದು ನಿಜ. ಬಳಿಕ ಸಾವರಿಸಿಕೊಂಡು, ''ರಾಹುಲ್ ಯಾರು?'' ಅಂತ ಕೇಳಿದೆ. ಆ ಬದಿಯಿಂದ

---

**ಅಪರಂಜಿಯ 30 ರ ಸಂಭ್ರಮದ ಹಬ್ಬ ಶನಿವಾರ 5.4.2014**

**ವಿವರಗಳು ಪುಟ 11 ರಲ್ಲಿ**

''ಛೇ ಅಷ್ಟೂ ತಿಳಿಯಲಿಲ್ಲವೇನೋ ನಾನು ರಾಹುಲ್ ಗುಪ್ತ. ನಿನ್ನ ಕಾಲೇಜ್ ಸಹಪಾಠಿ. ಅರ್ಜೆಂಟಾಗಿ ನಿನ್ನ ಗೆಳೆಯನ್ನ ನೋಡಬೇಕಾಗಿತ್ತು. ಅರ್ಧ ಗಂಟೇಲಿ ಬರ್ತೀನಿ. ಮನೇಲೇ ಇರ್ತೀಯ?'' ಅಂದ ಅವ. ನಾನು ''ಅಗತ್ಯವಾಗಿ ಬಾ'' ಅಂತ ಹೇಳಿ ಫೋನ್ ಇಟ್ಟೆ.

ಈ ರಾಹುಲ್ ಆಗರ್ಭ ಶ್ರೀಮಂತ. ಮುತ್ತಾತನ ಕಾಲದಿಂದ ಚಿನ್ನದ ಒಡವೆ ಆಭರಣಗಳ ವಹಿವಾಟಿನ ಮನೆತನ ಇವನದ್ದು. ಈತನ ಪೂರ್ವಜರು ಟಿಪ್ಪು ಸುಲ್ತಾನನ ರಾಣಿಯರಿಗೆ ಒಡವೆಗಳನ್ನ ಮಾಡಿಕೊಡುತ್ತಿದ್ದರಂತೆ. ಇವನ ಮುತ್ತಾತ ರಾಮಭದ್ರ ಶ್ರೇಷ್ಠಿ ಶ್ರೀರಂಗಪಟ್ಟಣದಿಂದ ಬೆಂಗಳೂರಿಗೆ ವಲಸೆ ಬಂದು ಇಲ್ಲಿ ನೆಲೆಸಿದರಂತೆ. ಈಗ ರಾಮಭದ್ರ ಜಿವೆಲ್ಲರ್ಸ್ ಬೆಂಗಳೂರಿನ ಹೆಸರಾಂತ ಆಭರಣಗಳ ಮಳಿಗೆ ಎಂದರೆ ಅದು ಖಂಡಿತ ಅತಿಶಯೋಕ್ತಿ ಅಲ್ಲ.

ರಾಹುಲ್ ತನ್ನ ಜೊತೆಯಲ್ಲಿ ಮಳಿಗೆಯ ಮ್ಯಾನೇಜರ್ ಐಯ್ಯರ್ ಅವರನ್ನೂ ಕರೆತಂದಿದ್ದ. ಶರಲೇಖನಿಗೆ ಅವರಿಬ್ಬರನ್ನೂ ಪರಿಚಯಿಸಿದ ನಂತರ, ರಾಹುಲ್ ತನ್ನ ಸಮಸ್ಯೆಯನ್ನು ನಮ್ಮ ಮುಂದಿಟ್ಟ.

''ನಮ್ಮ ಅಂಗಡಿಯಿಂದ ಒಂದು ಅಮೂಲ್ಯವಾದ ವಜ್ರದ ಪದಕ ಕಳುವಾಗಿದೆ. ಅದನ್ನು ಪತ್ತೆಹಚ್ಚಲು ಸಹಾಯಕೋರಿ ನಿಮ್ಮ ಬಳಿ ಬಂದಿದ್ದೇನೆ'' ಅಂತ ಚಿಕ್ಕದಾಗಿ ಚೊಕ್ಕವಾಗಿ ತನ್ನ ಅಹವಾಲನ್ನು ಮಂಡಿಸಿದ ರಾಹುಲ್.

''ನನ್ನ ಬಳಿಗೆ ಬರುವುದಕ್ಕಿಂತ ಪೋಲೀಸರ ಮೊರೆ ಹೋಗುವುದು ಸೂಕ್ತ ಅಂತ ಅನ್ನಿಸಲಿಲ್ಲವೇ ನಿಮಗೆ?'' ಅಂತ ಕೇಳಿದ ಶರಲೇಖ.

''ಕಳುವಾದ ಸಂದರ್ಭ, ಪರಿಸ್ಥಿತಿ ಇವುಗಳನ್ನು ನಿಮಗೆ ವಿವರಿಸಿದ ನಂತರ ನಾನು ನಿಮ್ಮ ಬಳಿ ಬಂದಿರುವುದರ ಕಾರಣ ನಿಮಗೇ ತಿಳಿಯುತ್ತೆ. ಕಳುವಿನ ಪ್ರತ್ಯಕ್ಷದರ್ಶಿಗಳು ನಮ್ಮ ಮ್ಯಾನೇಜರ್ ಐಯ್ಯರ್ ಅವರು. ಅವರೇ ಕಳವಿನ ವಿವರಗಳನ್ನು ನಿಮಗೆ ಕೊಡುತ್ತಾರೆ'' ಎಂದು ಹೇಳಿ ರಾಹುಲ್ ಐಯ್ಯರ್ ಅವರ ಕಡೆ ನೋಡಿದ.

ಶುಭ್ರವಾದ ಬಿಳಿಯ ಪಂಚೆ ಜುಬ್ಬಾ ಧರಿಸಿ ಹಣೆಯಲ್ಲಿ ವಿಭೂತಿ ಹಚ್ಚಿಕೊಂಡಿದ್ದ ಐಯ್ಯರ್ ತಮ್ಮ ವಿವರಣೆಯನ್ನು ಪ್ರಾರಂಭಿಸಿದರು. ಈಚಿನ ಘಟನೆ ಅವರನ್ನು ಕಂಗಾಲಾಗುವಂತೆ ಮಾಡಿದ್ದನ್ನು ಅವರ ದನಿಯಲ್ಲೇ ಗುರುತಿಸಬಹುದಾಗಿತ್ತು.

''ಸ್ವಾಮಿ, ನಾನು ಏನು ಹೇಳಬೇಕೆಂಬುದೇ ತಿಳಿಯುತ್ತಿಲ್ಲ. ಕಳೆದ ನಲವತ್ತು ವರ್ಷಗಳಿಂದ ಧಣಿಗಳ ಸೇವೆಯನ್ನು ಬಹು ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಮಾಡಿದ್ದೇನೆ. ನಮ್ಮ ಮುತ್ತಾತನ ಕಾಲದಿಂದ ನಮ್ಮ ವಂಶಜರೆಲ್ಲರೂ ಈ ಸಂಸ್ಥೆಗೇ ದುಡಿದಿದ್ದವರು. ಮುಂದಿನ ವಾರ ನಾನು ನಿವೃತ್ತಿಯಾಗುವುದು ನಿಶ್ಚಿತವಾಗಿತ್ತು. ನನ್ನ ಸೇವೆಯ ಈ ಕೊನೆಯ ಹಂತದಲ್ಲಿ ಈ ಒಂದು ಕಳಂಕ ನನ್ನ ಮೇಲೆ ಬಂತಲ್ಲಾ ಎಂಬುದೇ ನನ್ನ ಕೊರಗು.'' ಆಗಿದ್ದು ಇಷ್ಟು, ನಿನ್ನೆ ಬೆಳಗ್ಗೆ ಹನ್ನೊಂದಕ್ಕೆ ಒಬ್ಬ ಮಹಿಳೆ ನಮ್ಮ ಮಳಿಗೆಗೆ ಬಂದಳು. ನೋಡುವುದಕ್ಕೆ ಶ್ರೀಮಂತಳಂತೆ ಕಾಣುತ್ತಿದ್ದ ಅವಳನ್ನು ನಾನೇ ಸ್ವಾಗತಿಸಿದೆ. ''ನಮ್ಮ ಮದುವೆಯ ವಾರ್ಷಿಕೋತ್ಸವಕ್ಕೆ ಒಂದು ಒಳ್ಳೆಯ ಉಡುಗೊರೆ ಖರೀದಿಸಲು ಬಂದಿದ್ದೇನೆ'' ಅಂತ ಆಕೆ

ಹೇಳಿದಳು. ಅಷ್ಟುಹೊತ್ತಿಗೆ ನಮ್ಮ ಷೋಕೇಸಿನಲ್ಲಿದ್ದ ಅತ್ಯಮೂಲ್ಯ ವಜ್ರದ ಪದಕ ಅವಳ ಕಣ್ಣಿಗೆ ಬಿತ್ತು. ''ಆಹಾ ಎಷ್ಟು ಚೆನ್ನಾಗಿದೆ ಈ ಪದಕ, ಅದನ್ನ ತೆಗೆದು ತೋರಿಸುತ್ತೀರಾ?'' ಅಂತ ಕೇಳಿದಳು. ''ಅದು ಸ್ವಲ್ಪ ದುಬಾರಿ ಬೆಲೆಯದಮ್ಮಾ, ಹದಿನೈದು ಲಕ್ಷ ಆಗುತ್ತೆ'' ಅಂತ ಸೂಚ್ಯವಾಗಿ ಹೇಳಿದೆ. ಆಕೆ, ''ಖ್ಯಾತ ನರರೋಗ ತಜ್ಞ ಡಾ॥ ಶಾರದೇಂದು ಹೆಸರು ಕೇಳಿದ್ದೀರಾ?'' ಅಂತ ಪ್ರಶ್ನಿಸಿದಳು. ಡಾ॥ ಶಾರದೇಂದು ಅತ್ಯಂತ ಹೆಸರುವಾಸಿ ಡಾಕ್ಟರು. ಪದ್ಮಶ್ರೀ ಪ್ರಶಸ್ತಿ ಪಡೆದ ಅವರು ರೆಸಿಡೆನ್ಸಿ ರಸ್ತೆಯಲ್ಲಿನ ತಮ್ಮ ಮನೆಯಲ್ಲಿ ಕನ್ಸಲ್ಟಿಂಗ್ ಕ್ಲಿನಿಕ್ ಇಟ್ಟುಕೊಂಡಿರುವುದು ನನಗೆ ತಿಳಿದಿತ್ತು. ''ಡಾ॥ ಶಾರದೇಂದು ಅವರ ಪರಿಚಯ ಇಲ್ಲದವರಾರು? ಅವರು ನಿಮಗೇನಾಗಬೇಕು?'' ಅಂತ ಕೇಳಿದೆ. ಆಕೆ ನಸುನಕ್ಕು ನಾನು ಅವರ ಪತ್ನಿ. ನಮ್ಮ ಮದುವೆ ವಾರ್ಷಿಕೋತ್ಸವಕ್ಕೆ ನೀನೇ ಏನಾದರೂ ಆರಿಸು. ನಾನು ಅದನ್ನ ಕೊಳ್ಳುತ್ತೇನೆ ಅಂತ ಹೇಳಿದ್ದಾರೆ'' ಅಂತ ಹೇಳಿದಳು. ಅವಳ ಮಾತನ್ನ ಕೇಳಿ ಒಂದು ಒಳ್ಳೆಯ ವ್ಯಾಪಾರವನ್ನು ನಿವೃತ್ತಿಗೆ ಮುಂಚೆ ಕುದುರಿಸಿ ಹೋಗಬಹುದಲ್ಲಾ ಎಂದು ಸಂತೋಷವಾಯಿತು. ''ಡಾಕ್ಟರು ಇಲ್ಲಿಗೆ ಯಾವಾಗ ಬರುತ್ತಾರೆ?'' ಅಂತ ಕೇಳಿದೆ.

ಅದಕ್ಕೆ ಆಕೆ, ''ಅವರು ಇವತ್ತು ಬಹಳ ತುರ್ತಿನ ಕೆಲಸಗಳಲ್ಲಿದ್ದಾರೆ. ಮಧ್ಯಾಹ್ನ ಎರಡು ಗಂಟೆಗೆ ಸರಿಯಾಗಿ ನೀವೇ ಅವರ ಕ್ಲಿನಿಕ್ಕಿಗೆ ಪದಕದೊಂದಿಗೆ ಬಂದರೆ ಅಲ್ಲೇ ಅವರು ಹಣ ಪಾವತಿ ಮಾಡಿ ಪದಕ ಖರೀದಿಸುತ್ತಾರೆ. ಮಧ್ಯಾಹ್ನ ಎರಡು ಗಂಟೆಗೆ ನಾನೇ ನಿಮ್ಮನ್ನು ಕ್ಲಿನಿಕ್ಕಿನ ಸ್ವಾಗತ ಕೋಣೆಯಲ್ಲಿ ನಿರೀಕ್ಷಿಸುತ್ತಿರುತ್ತೇನೆ'' ಎಂದು ಹೇಳಿ ಬಹಳ ಗತ್ತಿನಿಂದ ನಡೆದು ಹೋದಳು.

ವಾರಕ್ಕೆ ಹದಿನೈದು ಲಕ್ಷ ಸಂಪಾದಿಸುತ್ತಿರುವರೆಂಬ ಪ್ರತೀತಿ ಇರುವ ಡಾಕ್ಟರಿಗೆ ಈ ಪದಕದ ಬೆಲೆ ಜುಜುಬಿ. ಈ ವ್ಯಾಪಾರ ಕುದುರಿಸಿದ ನಂತರ ಈ ಬಗ್ಗೆ ರಾಹುಲ್‌ಗೆ ಹೇಳಿದಾಗ ಆತನಿಗಾಗುವ ಆನಂದವನ್ನು ಊಹಿಸಿಕೊಂಡೇ ಖುಷಿಪಡುತ್ತಾ ಮಧ್ಯಾಹ್ನದವರೆಗೆ ಕಾಲಕಳೆದೆ.

ಮಧ್ಯಾಹ್ನ ಎರಡು ಗಂಟೆಗೆ ಸರಿಯಾಗಿ ರೆಸಿಡೆನ್ಸಿ ರಸ್ತೆಯಲ್ಲಿನ ಡಾ॥ ಶಾರದೇಂದು ಅವರ ಭವ್ಯವಾದ ಗೃಹ ಹಾಗೂ ಕ್ಲಿನಿಕ್ಕಿನ ಸ್ವಾಗತ ಹಜಾರದಲ್ಲಿದ್ದೆ. ಪಾಪ, ಡಾಕ್ಟರರ ಪತ್ನಿ ನನಗಾಗಿ ಅಲ್ಲೇ ಸೋಫಾದ ಮೇಲೆ ಕಾಯುತ್ತಿದ್ದರು. ನನ್ನನ್ನು ಕಂಡೊಡನೆಯೇ ''ಸರಿಯಾದ ಸಮಯಕ್ಕೆ ಬಂದಿರಿ. ಇನ್ನು ಹತ್ತು ನಿಮಿಷ ತಡವಾಗಿದ್ದರೆ ಡಾಕ್ಟರು ವಿಸಿಟ್‌ಗೆ ಹೋಗಿಬಿಡುತ್ತಿದ್ದರು, ಎಲ್ಲಿ ಪದಕ ಕೊಡಿ. ಡಾಕ್ಟರಿಗೆ ತೋರಿಸಿದ ನಂತರ ಅವರೇ ಬಂದು ನಿಮ್ಮ ಹಣ ಪಾವತಿ ಮಾಡುತ್ತಾರೆ. ಬಿಲ್ ತಂದಿದೀರ ತಾನೇ?'' ಎಂದು ಕೇಳಿ ಬಹು ಸೌಜನ್ಯದಿಂದ ಪದಕ, ಬಿಲ್ಲು ಎರಡನ್ನೂ ತೆಗೆದುಕೊಂಡು ಪಕ್ಕದ ಕೋಣೆಯ ಬಾಗಿಲನ್ನು ತೆರೆದು ಒಳಕ್ಕೆ ಹೋದಳು. ನಾನು ಡಾಕ್ಟರಿಗೆ ಕಾಯುತ್ತಾ ಕುಳಿತೆ. ಅರ್ಧ ಗಂಟೆ ಆದಮೇಲೆ ಡಾಕ್ಟರು ಹೊರಗಿನಿಂದ ಒಳಕ್ಕೆ ಬಂದು ನನ್ನನ್ನು ನೋಡಿ ''ಏನು ಬೇಕಾಗಿತ್ತು?'' ಎಂದು ಪ್ರಶ್ನಿಸಿದರು. ನಾನು ''ನಿಮ್ಮ ಪತ್ನಿ ನನ್ನನ್ನು ಇಲ್ಲಿಗೆ ಬರಹೇಳಿದರು....'' ಅಂತ ಶುರುಮಾಡಿದಾಗಲೇ ಆತ, ''ನನ್ನ ಪತ್ನಿ ಊರಿನಲ್ಲೇ ಇಲ್ಲವಲ್ಲಾ, ಅಮೆರಿಕಾಕ್ಕೆ ತನ್ನ

ತಂಗಿಯನ್ನು ನೋಡಲು ಹೋಗಿ ಎರಡುವಾರ ಆಯಿತು'' ಅಂದಾಗ ನಾನು ಮೋಸ ಹೋದದ್ದು ಗೊತ್ತಾಯಿತು. ''ಮತ್ತೆ ಆಕೆ ಆ ಬಾಗಿಲಿನಿಂದ ಒಳಕ್ಕೆ ಹೋದರಲ್ಲಾ?''

ಅಂತ ನಾನು ಕೇಳಿದಾಗ, ಡಾಕ್ಟರು ಆ ಬಾಗಿಲನ್ನು ಪೂರ್ತಿ ತೆಗೆದು ನನ್ನನ್ನು ಕರೆದರು. ಆ ಬಾಗಿಲು ಹೊರತೋಟಕ್ಕೆ ಸಂಪರ್ಕಿಸುವ ಬಾಗಿಲಾಗಿತ್ತು.

ಆಗ ನನಗಾದ ಗಾಬರಿಯಲ್ಲಿ ನಾನು ಪುನಃ ಮಳಿಗೆಯನ್ನು ಸೇರಿದ್ದೇ ಹೆಚ್ಚು. ಆದದ್ದನ್ನೆಲ್ಲಾ ರಾಹುಲ್‌ಗೆ ಹೇಳಿದೆ. ''ನನ್ನ ಗ್ರಾಚುಯಿಟಿ, ಪ್ರಾವಿಡೆಂಟ್ ಫಂಡ್ ಎಲ್ಲಾ ಸೇರಿದರೂ ಹತ್ತು ಲಕ್ಷ ಆಗುತ್ತದೆ. ಮಿಕ್ಕ ಐದನ್ನು ಎಲ್ಲಿಂದ ತರಲಿ?'' ಎಂದು ಐಯ್ಯರ್ ಹಲುಬಿದರು.

ರಾಹುಲ್ ಮಧ್ಯ ಬಾಯಿ ಹಾಕಿ ''ಅಂಕಲ್ ಹುಚ್ಚು ಹುಚ್ಚಾಗಿ ಮಾತನಾಡಬೇಡಿ. ಇದರಲ್ಲಿ ನಿಮ್ಮದೇನೂ ತಪ್ಪಿಲ್ಲ. ನಿಮ್ಮ ಜಾಗದಲ್ಲಿ ನಾನಿದ್ದರೂ ಹಾಗೇ ಮಾಡುತ್ತಿದ್ದೆ. ನೀವು ಈ ಹಣವನ್ನು ಪೂರೈಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಹೇಗಿದ್ದರೂ ವಿಮೆ ಇದೆ. ಸಂಸ್ಥೆಗೆ ಹಣ ದೊರಕುತ್ತದೆ. ನಾವು ಇಲ್ಲಿಗೆ ಬಂದಿರುವುದು, ಈ ಕಳುವನ್ನು ಪತ್ತೆಹಚ್ಚಲು ನಮ್ಮ ಈ ಖ್ಯಾತ ಪತ್ತೇದಾರರಿಂದ ಸಾಧ್ಯವೇ ಎಂದು ತಿಳಿಯಲು ಮಾತ್ರ.'' ಶರಲೇಖ ಅವರೇ, ಐಯ್ಯರ್ ರವರು ನಮ್ಮ ಅತ್ಯಂತ ಹಿರಿಯ ನಿಷ್ಠ ಉದ್ಯೋಗಿ. ನೀವು ದಯಮಾಡಿ ಈ ಕಳುವನ್ನು ಪತ್ತೆ ಹಚ್ಚಿದರೆ ಅವರ ಮನಸ್ಸು ಸ್ಥಿಮಿತಕ್ಕೆ ಬರುತ್ತೆ. ''ಏನಾದರೂ ಮಾಡಲು ಸಾಧ್ಯವೇ?'' ಅಂತ ನಮ್ರತೆಯಿಂದ ಕೇಳಿದ.

ಎಲ್ಲವನ್ನೂ ಸಾವಧಾನದಿಂದ ಕೇಳುತ್ತಿದ್ದ ಶರಲೇಖ, ರಾಹುಲ್‌ನನ್ನು ಕುರಿತು ''ಈ ಸಂಜೆ ನಿಮ್ಮ ಮಳಿಗೆಗೆ ಬರುತ್ತೇನೆ. ಅಲ್ಲಿನ ಎಲ್ಲ ಉದ್ಯೋಗಿಗಳನ್ನೂ ಪ್ರಶ್ನಿಸಬೇಕಾಗುತ್ತೆ. ನಿಮ್ಮ ಒಪ್ಪಿಗೆ ಇದೆ ತಾನೆ?'' ಎಂದು ಕೇಳಿ, ರಾಹುಲ್‌ನ ಒಪ್ಪಿಗೆ ಪಡೆದು, ಸಂಜೆಯ ಭೇಟಿ ನಿಗದಿಸಿ, ಅವರನ್ನ ಕಳುಹಿಸಿಕೊಟ್ಟ.

ಆ ಸಂಜೆ ನಾವಿಬ್ಬರೂ ರಾಮಭದ್ರ ಜಿವೆಲ್ಲರ್ಸ್ ಮಳಿಗೆಗೆ ಹೋದೆವು. ಶರಲೇಖ ಅಲ್ಲಿನ ಆರು ಉದ್ಯೋಗಿಗಳನ್ನು ಸಂದರ್ಶಿಸಿ ಮಾಹಿತಿ ಪಡೆದುಕೊಂಡ. ದುರಾದೃಷ್ಟವೆಂದರೆ ಆ ಮಹಿಳೆ ಮಳಿಗೆಗೆ ಭೇಟಿ ನೀಡಿದಾಗ ಹೊರಗಿನ ಸೆಕ್ಯೂರಿಟಿಯವನನ್ನು ಬಿಟ್ಟರೆ ಇನ್ನಾರೂ ಮಳಿಗೆಯ ಹಜಾರದಲ್ಲಿ ಇರಲಿಲ್ಲ.

ಮಾರನೆಯ ಎರಡು ದಿನ ಶರಲೇಖ ಬಿರುಸಿನ ಓಡಾಟದಲ್ಲಿ ಮಗ್ನನಾಗಿದ್ದ. ಊರಿನಲ್ಲಿ ನಡೆಯುತ್ತಿದ್ದ ನಾಟಕೋತ್ಸವಕ್ಕೆ ಸೀಜನ್ ಟಿಕೆಟ್ ಖರೀದಿಸಿದ್ದರಿಂದ ನಾನು ನಾಟಕ ನೋಡುವುದು ಅನಿವಾರ್ಯವಾಯಿತು.

ಮೂರನೆಯ ದಿನ ಬೆಳಗ್ಗೆ ಉಪಹಾರಕ್ಕೆಂದು ಶರಲೇಖನೊಂದಿಗೆ ಕುಳಿತಾಗ, ಈ ಕೇಸಿನ ಬಗ್ಗೆ ಏನಾದರೂ ಪ್ರಗತಿಯಾಗಿದೆಯೇ ಎಂದು ಕೇಳಲು ತುಂಬಾ ಉತ್ಸುಕನಾಗಿದ್ದರೂ, ಹೇಳುವುದಿದ್ದರೆ ಶರಲೇಖ ತಾನಾಗಿಯೇ ಹೇಳುತ್ತಾನೆಂಬುದು ತಿಳಿದದ್ದರಿಂದ ಸುಮ್ಮನಾದೆ.

ಉಪಹಾರ ಮುಗಿಸಿದ ಮೇಲೆ ಶರಲೇಖ ನನ್ನನ್ನು ಕುರಿತು, ''ನಿನ್ನ ಗೆಳೆಯ ರಾಹುಲ್‌ಗೆ ಫೋನ್ ಮಾಡಿ ನನಗೆ ಕೊಡು. ಅವನ ಸಮಸ್ಯೆ ಬಗ್ಗೆ ಅವನೊಂದಿಗೆ ಸ್ವಲ್ಪ

ಮಾತನಾಡುವುದಿದೆ'' ಅಂದ. ನಾನು ತಕ್ಷಣ ರಾಹುಲ್‌ಗೆ ಫೋನ್ ಮಾಡಿ ಶರಲೇಖನಿಗೆ ಕೊಟ್ಟೆ.

''ರಾಹುಲ್, ನಿನ್ನೆ ಮತ್ತು ಮೊನ್ನೆ ಅನೇಕ ಕಡೆ ಓಡಾಡಿ ನಿಮ್ಮ ಮಳಿಗೆಯ ಕಳುವಿನ ಬಗ್ಗೆ ಸುಳಿವೇನಾದರೂ ಸಿಗುತ್ತದೆಯಾ ಅಂತ ಶಕ್ತಿ ಮೀರಿ ಪ್ರಯತ್ನಿಸಿದೆ. ಏನೂ ಫಲ ಸಿಗಲಿಲ್ಲ. ಹೇಗಿದ್ದರೂ ವಿಮಾ ಹಣ ನಿಮಗೆ ಸಿಗುತ್ತದೆ. ಐಯ್ಯರ್ ಅವರಿಗೆ ನನ್ನ ವಿಫಲತೆಯನ್ನು ತಿಳಿಸಿಬಿಡಿ. ನಿಮಗೆ ಹೆಚ್ಚು ಸಹಾಯ ಮಾಡಲಾಗದಿದ್ದಕ್ಕೆ ಕ್ಷಮೆ ಕೋರುವೆ'' ಅಂದ ಶರಲೇಖ. ನನಗಂತೂ ಆಶ್ಚರ್ಯವೋ ಆಶ್ಚರ್ಯ. ಇಷ್ಟು ಸುಲಭವಾಗಿ ತನ್ನ ಸೋಲನ್ನು ಒಪ್ಪಿಕೊಂಡದ್ದನ್ನು ನಾನು ನನ್ನ ಜೀವನದಲ್ಲೇ ನೋಡಿರಲಿಲ್ಲ.

ಇನ್ನು ಈ ಬಗ್ಗೆ ಶರಲೇಖನನ್ನು ಪ್ರಶ್ನಿಸುವುದು ಹುಚ್ಚುತನವಾದೀತೆಂದು ನಾನೂ ಸುಮ್ಮನಾದೆ. ಆ ಸಂಜೆ ನಾವಿಬ್ಬರೂ ನಾಟಕೋತ್ಸವದ ಅಂಗವಾಗಿ ಏರ್ಪಡಿಸಿದ್ದ ಹ್ಯಾಮ್ಲೆಟ್ ನಾಟಕಕ್ಕೆ ಹೋದೆವು. ನಾಟಕ ಬಹು ಚೆನ್ನಾಗಿ ಮೂಡಿಬಂದಿತ್ತು. ಮನೆಗೆ ಹಿಂತಿರುಗುತ್ತಿರುವಾಗ ಶರಲೇಖ ಬಾಸ್ಕಿನ್ ರಾಬಿನ್ಸ್‌ನಲ್ಲಿ ಐಸ್‌ಕ್ರೀಮ್ ತಿಂದು ಹೋಗೋಣ ಎಂದು ಹೇಳಿದ್ದರಿಂದ ಅಲ್ಲಿಗೆ ಹೋಗಿ ಕುಳಿತೆವು. ಬೆಳಗಿನಿಂದ ಮೌನವ್ರತ ಆಚರಿಸುತ್ತಿದ್ದ ಶರಲೇಖ ಐಸ್‌ಕ್ರೀಮ್ ತಿನ್ನುತ್ತಾ, ''ಈ ನಾಟಕದಲ್ಲಿ ಹ್ಯಾಮ್ಲೆಟ್‌ಗೆ ಒದಗಿದ ದ್ವಂದ್ವ, ಡಿಲೆಮಾ, ಎಲ್ಲ ಜನರಿಗೂ ತಮ್ಮ ಜೀವನದಲ್ಲಿ ಒಮ್ಮೆಯಾದರೂ ಒದಗುತ್ತದೆ ಎಂಬುದು ನನ್ನ ಭಾವನೆ'' ಎಂದ.

''ಸ್ವಲ್ಪ ವಿವರಿಸು'' ಅಂತ ಕೇಳಿದೆ.

ಆತ ಶುರು ಮಾಡಿದ.

''ನಿನ್ನೆ ರಾಮಭದ್ರ ಜಿವೆಲ್ಲರ್ಸ್ ಮಳಿಗೆಯಲ್ಲಿ ಪರಿಶೀಲನೆ ನಡೆಸಿದಾಗ ಅವರಲ್ಲಿ ಅಳವಡಿಸಿರುವ ಸಿ.ಸಿ.ಟಿ.ವಿ.ಯನ್ನು ಆ ಮಹಿಳೆ ಬಂದ ಸಮಯಕ್ಕೆ ಸರಿಯಾಗಿ ಸ್ವಿಚ್ ಆಫ್ ಮಾಡಿದ್ದನ್ನು ಗಮನಿಸಿದೆ. ಸರಿ, ಇದು ಒಳಗಿನ ಸಂಚಿನಿಂದ ನಡೆದ ಕಳವು ಎಂಬುದು ಖಾತರಿಯಾಯಿತು. ಇನ್ನು ಆ ಮಹಿಳೆಯ ಚಹರೆಯನ್ನು ಹುಡುಕುವುದಾದರೂ ಹೇಗೆ? ಒಮ್ಮೆಲೆ ಒಂದು ಐಡಿಯಾ ಹೊಳೆಯಿತು. ಇನ್‌ಸ್ಪೆಕ್ಟರ್ ಉಳ್ಳಾಗಡ್ಡಿಯ ಸಹಾಯ ಪಡೆದು ಡಾ|| ಶಾರದೇಂದು ಕ್ಲಿನಿಕ್ಕಿನ ಸ್ವಾಗತ ಹಜಾರದಲ್ಲಿದ್ದ ಸಿ.ಸಿ.ಟಿ.ವಿ. ತುಣುಕನ್ನು ಪಡೆದುಕೊಂಡೆ. ಅದರಲ್ಲಿ ಆ ಮಹಿಳೆ ಐಯ್ಯರ್‌ರವರಿಂದ ಪದಕವನ್ನು ಪಡೆದದ್ದು, ಇನ್ನೊಂದು ಬಾಗಿಲಿನಿಂದ ಹೊರಟುಹೋಗಿದ್ದು ಎಲ್ಲವೂ ಸ್ಪಷ್ಟವಾಗಿತ್ತು. ಆ ಮಹಿಳೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಆಕೆ ಪದಕವನ್ನು ತೆಗೆದುಕೊಳ್ಳುವಾಗ, ಬಾಗಿಲನ್ನು ನೂಕುವಾಗ ಎಲ್ಲ ಸಮಯದಲ್ಲೂ ಎಡಗೈಯನ್ನೇ ಪ್ರಧಾನವಾಗಿ ಬಳಸುತ್ತಿದ್ದುದನ್ನು ಗಮನಿಸಿದೆ. ಇನ್ನೊಂದು ಮುಖ್ಯ ಅಂಶ ಎಂದರೆ ಆಕೆ ಐಯ್ಯರ್ ಹತ್ತಿರ ಮಾತನಾಡುತ್ತಿದ್ದಾಗ ಆಕೆಯ ಬಲ ಹುಬ್ಬು ಅನೇಕ ಬಾರಿ ಅದುರಿದ್ದು ಕಂಡಿತು. ಈ ಎರಡೂ ಅಂಶಗಳು ನನಗೆ ಮನದಟ್ಟಾದವು.

ಕಳ್ಳತನ ಒಳಗಿನಿಂದಲೇ ಆಗಿದ್ದರೆ ಈ ಮಹಿಳೆ ಯಾರೋ ಒಬ್ಬರು ಒಳಗಿನವರಿಗೆ ಷಾಮೀಲಾಗಿರಬೇಕು ಅಂತ ನಿರ್ಧರಿಸಿದೆ. ಅನಂತರ ರಾಹುಲ್‌ನನ್ನು ಕೇಳಿ ಎಲ್ಲ

ಉದ್ಯೋಗಿಗಳ ಸಂಬಂಧಿಕರ ಪಟ್ಟಿಯನ್ನು ಪಡೆದೆ. ಯಾರಿಗೂ ಇಂತಹ ನಡು ವಯಸ್ಸಿನ ಸಂಬಂಧಿ ಇದ್ದಹಾಗೆ ಕಾಣಲಿಲ್ಲ. ಒಂದೇ ಒಂದು ಅಪವಾದವೆಂದರೆ ಐಯ್ಯರ್. ಅವರಿಗೆ ಒಬ್ಬ ಮಲ್ಲಿಕಾ ಎಂಬ ಮೂವತ್ತು ವಯಸ್ಸಿನ ಮಗಳಿರುವುದಾಗಿ ತಿಳಿಯಿತು. ಆಕೆ ಮಂಗಳೂರಿನಲ್ಲಿ ಹೆಣ್ಣುಮಕ್ಕಳ ಶಾಲೆಯೊಂದರ ಮುಖ್ಯೋಪಾಧ್ಯಾಯಿನಿ ಯಾಗಿರುವುದನ್ನೂ ತಿಳಿದುಕೊಂಡೆ. ಆಕೆಗೆ ಈ ಕಳುವಿನಲ್ಲಿ ಯಾವ ಪಾತ್ರವೂ ಇಲ್ಲ ಎಂಬುದನ್ನು ಖಾತರಿಪಡಿಸಿಕೊಳ್ಳಲು ನಾನು ಮೊನ್ನೆ ರಾತ್ರಿ ಬಸ್ಸಿನಲ್ಲಿ ಮಂಗಳೂರಿಗೆ ಹೋಗಿ ಆಕೆಯನ್ನು ಭೇಟಿ ಮಾಡಿದೆ. ನಾನು ಆಕೆಯನ್ನು ನೋಡಿದಾಗ ಆಕೆ ಯಾವುದೋ ನೋಟ್ಸನ್ನು ಬರೆಯುತ್ತಿದ್ದಳು. ಬರಹ ಎಡಗೈಯಿಂದ ಸಾಗಿತ್ತು. ಅವಳೊಂದಿಗೆ ಮಾತನಾಡುವಾಗ ಆಕೆಯ ಬಲಹುಬ್ಬು ಎರಡು ಬಾರಿ ಹಾರಿದ್ದನ್ನು ಗಮನಿಸಿದೆ. ಸಿ.ಸಿ.ಟಿ.ವಿ.ಯಲ್ಲಿದ್ದ ಮಹಿಳೆಯದೇ ಆದ ಮೈಕಟ್ಟು, ಆ ಮಹಿಳೆ ಗಾಢವಾಗಿ ಮೇಕಪ್ ಮಾಡಿಕೊಂಡಿದ್ದು ಈ ಮಲ್ಲಿಕಾ ಯಾವ ವಿಧವಾದ ಮೇಕಪ್ ಇಲ್ಲದೇ ಸಾಧಾರಣವಾಗಿದ್ದಳು. ಮಲ್ಲಿಕಾಳೇ ಐಯ್ಯರ್ ಜೊತೆ ಸೇರಿ ಈ ಪದಕ ಕದ್ದಿರುವುದು ನನಗೆ ಖಚಿತವಾಯಿತು. ನೇರವಾಗಿ ಆಕೆಗೆ ಇದ್ದ ವಿಷಯ ತಿಳಿಸಿದೆ. ಮಲ್ಲಿಕಾ ತನ್ನ ಧೈರ್ಯವನ್ನೆಲ್ಲಾ ಕಳೆದುಕೊಂಡು ಜೋರಾಗಿ ಅಳಲು ಪ್ರಾರಂಭಿಸಿದಳು. ಅನಂತರ ಯಾವುದನ್ನೂ ಮರೆಮಾಚದೆ ಎಲ್ಲವನ್ನೂ ವಿವರವಾಗಿ ತಿಳಿಸಿದಳು. ಮಲ್ಲಿಕಾ ಮಂಗಳೂರಿನಲ್ಲಿ ಒಂದು ಫ್ಲಾಟ್ ಕೊಳ್ಳುವ ಉದ್ದೇಶದಿಂದ ಬ್ಯಾಂಕ್ ಸಾಲ ಪಡೆದು ಫ್ಲಾಟಿಗೆ ಹಣವನ್ನು ಮುಂಗಡವಾಗಿ ಕೊಟ್ಟಿದ್ದಳಂತೆ. ಬ್ಯಾಂಕಿನ ಸಾಲಕ್ಕೆ ತನ್ನ ತಾತನ ಕಾಲದ ಪುಟ್ಟ ಮನೆಯೊಂದನ್ನು ಆಧಾರವಾಗಿಟ್ಟಿದ್ದಳಂತೆ. ಮುಗಿಯುವ ಹಂತದಲ್ಲಿದ್ದ ಫ್ಲಾಟ್ ಒಂದು ದಿನ ಅನಾಮತ್ತಾಗಿ ಕುಸಿದು ಬಿದ್ದಿತಂತೆ. ಫ್ಲಾಟಿನೊಂದಿಗೆ ಮಲ್ಲಿಕಾಳ ಭವಿಷ್ಯವೂ ಕುಸಿದಂತೆ ಅವಳಿಗೆ ಭಾಸವಾಯಿತಂತೆ. ಬ್ಯಾಂಕಿನವರು ಇರುವ ಪುಟ್ಟಮನೆಯನ್ನೂ ಮಟ್ಟುಗೋಲು ಹಾಕಿಕೊಳ್ಳುವ ಮೊದಲೇ ಅವರ ಸಾಲವನ್ನು ತೀರಿಸಿಬಿಡುವ ಅಗತ್ಯ ಮೂಡಿ ತಂದೆ ಮಗಳು ಬೇರೆ ಯಾವ ಮಾರ್ಗವೂ ಕಾಣದೇ ಈ ದುಸ್ಸಾಹಸವನ್ನ ಕೈಗೊಂಡರಂತೆ.

ಇಷ್ಟು ಹೇಳಿ ಮಲ್ಲಿಕಾ ''ನಿಮಗೆ ಎಲ್ಲಾ ತಿಳಿಸಿದ್ದೇನೆ. ನಮ್ಮ ತಂದೆ ನನಗೋಸ್ಕರ ಈ ಕಳುವಿನಲ್ಲಿ ಭಾಗಿಯಾದರು. ಅವರೇ ಸಿ.ಸಿ.ಟಿ.ವಿ. ಆಫ್ ಮಾಡಿದ್ದೂ ಕೂಡ. ಹೇಗಾದರೂ ಮಾಡಿ ಅಪವಾದ ನನ್ನ ಮೇಲೆ ಮಾತ್ರ ಬರುವಂತೆ ಮಾಡುಕ್ಕಾಗುತ್ತದೆಯೇ?'' ಅಂತ ನನ್ನೊಂದಿಗೆ ಅಂಗಲಾಚಿಕೊಂಡಳು.

ಹ್ಯಾಮ್ಲೆಟ್ಟಿಗೆ ಇರುವುದೋ, ಇಲ್ಲದಿರುವುದೋ ಎಂಬ ದ್ವಂದ್ವ. ನನಗೆ ಹೇಳುವುದೋ ಹೇಳದಿರುವುದೋ ಎಂಬ ದ್ವಂದ್ವ. ಕೊನೆಗೆ ನಾನು ಪೋಲೀಸ್ ಅಧಿಕಾರಿಯೂ ಅಲ್ಲ, ನ್ಯಾಯಾಧೀಶನೂ ಅಲ್ಲ, ಕೇವಲ ಒಬ್ಬ ಸಂವೇದನಾಶೀಲ ಪ್ರಜೆ ಅಂತ ನಿರ್ಧರಿಸಿ ಈ ಪ್ರಕರಣದಿಂದ ಕೈತೊಳೆದುಕೊಂಡೆ. ''ಅಂತ ಶರಲೇಖ ತನ್ನ ಸುಧೀರ್ಘ ವಿವರಣೆಯನ್ನು ಮುಗಿಸಿದ.''

ಶರಲೇಖನ ತೀಕ್ಷ್ಣಮತಿಗಿಂತ ಅವನ ಹೃದಯವಂತಿಕೆ ನನಗೆ ಖುಷಿ ನೀಡಿತು.

❖

# ನಕ್ಕರೆ ಏನೇನಾದೀತು?

**- ಅ ರಾ ಮಿತ್ರ**

**ನ**ಗು ಪರಮಾರೋಗ್ಯ ಲಕ್ಷಣ ಎಂದು ಎಲ್ಲರೂ ಹೇಳುತ್ತಾರೆ. ಉಲ್ಲಾಸ, ಕ್ರಿಯಾಶೀಲತೆ, ಚುರುಕುತನ, ಸಾಮಾಜಿಕತೆ ಇವೆಲ್ಲ ನಗುವಿನ ಸತ್ಫಲ ಎಂದೂ ಹೇಳಿದವರುಂಟು. ಮನಸ್ಸು ಪ್ರಸನ್ನವಾಗುತ್ತದೆ ಎಂಬ ನಂಬಿಕೆಯೂ ಇಲ್ಲದಿಲ್ಲ. ನಗೆ ಎಂಬುದು ಔಷಧದಂತೆ ನಮ್ಮ ಮೇಲೆ ಉತ್ತಮ ಪರಿಣಾಮ ಬೀರುತ್ತದೆ ಎಂದು ಹಾಸ್ಯಗಾರರು ಸಾರಿ ಹೇಳುತ್ತಾರೆ.

ಈಚೆಗೆ ಇಂಗ್ಲೆಂಡಿನ ಬರ್ಮಿಂಗ್ಹ್ಯಾಂ ಮತ್ತು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಗಳ ಸಂಶೋಧಕರು ನಗೆಯ ಅರ್ಥ ಮತ್ತು ಅನರ್ಥಗಳೆರಡನ್ನೂ ಅಧ್ಯಯನ ಮಾಡಿ ಕೆಲವು ಮಿಶ್ರಭಾವಗಳನ್ನು ಹೊರಗೆಡಹಿದ್ದಾರೆ. ಇವರ ಪ್ರಕಾರ ನಗೆ ಎಲ್ಲ ಕಾಲಗಳಲ್ಲೂ ಶುಭ ಫಲಿತಗಳನ್ನು ನೀಡುತ್ತವೆಂಬ ಭರವಸೆಯಿಲ್ಲ. 1946 ರಿಂದ 2013ರ ವರೆಗಿನ ನಗೆಭಾವಗಳನ್ನು ವಿಶ್ಲೇಷಿಸಿ ಈ ಸಂಶೋಧಕ ತಂಡವು ನಗೆಯ ಲಾಭ ನಷ್ಟಗಳೆರಡನ್ನೂ ಸಕಾರಾತ್ಮಕ ನಕಾರಾತ್ಮಕ ಅಂಶಗಳಾಗಿ ವಿಭಜಿಸಿ ಫಲಿತ ನೀಡಿದೆ:

> **ನಗುವುದು ಒಂದು ಯೋಗ,**
> **ನಗಿಸುವುದು ಒಂದು ಭೋಗ,**
> **ನಗದಿರುವುದು ಒಂದು ರೋಗ**

1. ತಾನಾಗಿ ಬರುವ ನಗೆ ಕೆಲವು ಸಮಯಗಳಲ್ಲಿ ಯಾತನೆಯನ್ನು ಸೈರಿಸುವ ಶಕ್ತಿಯನ್ನು ಹೆಚ್ಚಿಸುತ್ತದೆ. ಆದರೆ ಲಘು ಶಸ್ತ್ರಚಿಕಿತ್ಸೆಗೆ ಒಳಗಾದವರ ಮೇಲೆ ಅಂಥ ಪ್ರಭಾವವೇನೂ ಆಗಿಲ್ಲ.
2. ರಕ್ತನಾಳಗಳ ಗೋಡೆಗಳು ಗಟ್ಟಿಗೊಳ್ಳುವುದನ್ನು ಮತ್ತು ಎದೆನೋವನ್ನು ನಗೆ ತಗ್ಗಿಸುತ್ತದೆ. ಒತ್ತಡದಿಂದ ಉಪಶಮನವನ್ನು ಮಾಡುತ್ತದೆ.
3. ಶ್ವಾಸಕೋಶದ ಸಮಸ್ಯೆ ಬಹುಕಾಲದಿಂದ ಕಾಡುತ್ತಿರುವ ಜನಕ್ಕೆ ನಗೆ ಶ್ವಾಸಕೋಶದ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ.
4. 2000 ಕೆಲರಿಗಳಷ್ಟು ಖರ್ಚಾಗುವಂತೆ ಮಾಡಿ ಉಪಕರಿಸುತ್ತದೆ.
5. ಸಕ್ಕರೆ ಕಾಯಿಲೆಯವರಿಗೆ ರಕ್ತದ ಗ್ಲುಕೋಸ್ ಪ್ರಮಾಣವನ್ನು ತಗ್ಗಿಸುತ್ತದೆ.
6. ಸ್ತ್ರೀಯರಲ್ಲಿ ಐವಿಎಫ್ ಚಿಕಿತ್ಸೆಯ ನಂತರ ಸಂತಾನ ಸಾಮರ್ಥ್ಯವನ್ನು ಶೇ. 36ರಷ್ಟು ಹೆಚ್ಚಿಸುತ್ತದೆ.

   ನಷ್ಟಗಳು: ನಗೆಯ ಕಾಲ ಮತ್ತು ಪ್ರಮಾಣ ಹೆಚ್ಚಿದರೆ ಅಪಾಯ. ಬಹಳ ಹೊತ್ತು ಜೋರಾಗಿ ನಕ್ಕ ಒಬ್ಬಳು ಕೆಳಗೆ ಬಿದ್ದು ಸತ್ತಳೆಂಬ ಸುದ್ದಿ ಪ್ರಕಟವಾಗಿದೆ.
7. ತುಂಬಾ ಹೊತ್ತು ನಕ್ಕು ಆಮೇಲೆ ಶ್ವಾಸ ತೆಗೆದುಕೊಂಡರೆ ಕೆಲವರಿಗೆ ಹರ್ನಿಯ ಬರುವ ಸಾಧ್ಯತೆಯಿದೆ.

ಈಚಿನ ಸಂಶೋಧನೆಯಿಂದ ಸಂತೋಷವಾಗಿರಲು 15 ಸೂತ್ರಗಳಿವೆ. ಮುಖ್ಯವಾದವು ಐದು:

1 ನಿಯಂತ್ರಣ ಜೀವಿತ

2 ಆಶಾವಾದಿತ್ವ

3 (ಹೊರಗಿನವರಿಗೆ ಕಾಣಿಸಿಕೊಳ್ಳುವ) ಭಂಗಿ

4 ಸಮಾಜದಲ್ಲಿ ಹೊಂದಾಣಿಕೆ

5 ಆರೋಗ್ಯ

ಸಂತೋಷವಾಗಿ ಆಲೋಚಿಸುವುದರಿಂದ ನಮ್ಮ ರೋಗ ನಿರೋಧಕ ವ್ಯವಸ್ಥೆ ಬಲಪಡುತ್ತದೆ. ಹಿತವಾದ ಬೆಳಕು ಕೂಡ ಸಂತೋಷಕ್ಕೆ ಕಾರಣ ಎನ್ನುತ್ತಾರೆ ಒಬ್ಬ ವೈದ್ಯರು.

**ತೆಲುಗು ಸಾಹಿತಿ ಜಂಘಾಲರ ಪ್ರಕಾರ**

*ನಗುವುದು ಒಂದು ಯೋಗ*

*ನಗಿಸುವುದು ಒಂದು ಭೋಗ*

*ನಗದಿರುವುದು ಒಂದು ರೋಗ*

ಇನ್ನೊಬ್ಬರ ಸೂತ್ರ ಇದು: ಯಾವ ಸೂತ್ರವನ್ನೂ ನಂಬಬೇಡಿ. ಇತರರನ್ನು ಸಂತೋಷಪಡಿಸುವುದಕ್ಕೆ ನೀವೇನು ಲೈಸೆನ್ಸ್ ಪರ್ಮಿಟ್ ತೆಗೆದುಕೊಳ್ಳಬೇಕಾಗಿಲ್ಲ. ನೀವೂ ಅವರಿವರನ್ನು ಕೇಳಿ ನಗಬೇಡಿ. ನಗುಬಂದರೆ ತಡೆಯಬೇಡಿ. ಹಾಗೆಂದು ಹುಚ್ಚುಹುಚ್ಚಾಗಿ ನಗಲು ಪ್ರಯತ್ನಿಸಬೇಡಿ. ನಾನೊಮ್ಮೆ ಗದಗಿನ ಕುಮಾರವ್ಯಾಸನ ಊರು ಎಂದು ಹೇಳಲಾಗುವ ಕೋಳಿವಾಡದಲ್ಲಿ ಕೋಳಿಯಂತೆ ನಗೆಯ ಹರಳುಗಳನ್ನು ಕುಕ್ಕಿದೆ. ಪರಿಣಾಮ ಏನು ಗೊತ್ತೆ? ನಾನು ಮಾತಾಡಿ ನಗಿಸುತ್ತಿರುವಾಗಲೇ ವೇದಿಕೆಯ ಮೇಲೆ ಆರಾಮವಾಗಿ ಕುಳಿತಿದ್ದ ಮೂವರು ಮಹಿಳಾ ಗಮಕಿಗಳು (ಅವರು ಮೈಸೂರಿನಿಂದ ವಿಶೇಷ ಆಹ್ವಾನಿತರಾಗಿ ಬಂದಿದ್ದವರು) ನಗೆಯ ಭಾರವನ್ನು ತಡೆಯಲಾಗದೆ ಹಾಗೇ ಕುರ್ಚಿಗಳಿಂದ ಒಟ್ಟಿಗೇ ಕುರ್ಚಿ ಸಮೇತ ಧಬಕ್ ಎಂದು ನೆಲಕ್ಕೆ ಬಿದ್ದರು. ಕೂಡಲೇ ವ್ಯವಸ್ಥಾಪಕರು ಕುರ್ಚಿಗಳ ನಾಡಿ ಮಿಡಿದು ಸದ್ಯ ಏನೂ ಆಗಿಲ್ಲ ಎಂದು ಸಮಾಧಾನಗೊಂಡರು. ಆಮೇಲೆ ಮಹಿಳಾ ಗಮಕಿಗಳ ಬಳಿಗೆ ಬಂದರೆ ಆ ಮೂವರೂ ನೆಲಕ್ಕೆ ಬಿದ್ದರೂ ನಗುವುದನ್ನು ನಿಲ್ಲಿಸಿರಲಿಲ್ಲ ಎಂದು ಕಂಡುಕೊಂಡು ನಿರಾಶೆಯಿಂದ ಹಿಂದಿರುಗಿದರು. ಇದರಿಂದ ಹೊರಡುವ ಸತ್ಯ ಏನು ಗೊತ್ತೆ? ಕುಮಾರವ್ಯಾಸ ಹಾಸ್ಯಜೀವಿಯಾಗಲು ಅವನ ನೆಲದ ಅಂದರೆ ಕೋಳಿವಾಡದ ಮಣ್ಣಿನ ಗುಣವೇ ಕಾರಣ ಎಂಬ ತೀರ್ಮಾನಕ್ಕೆ ನಾನು ಬಂದೆ. ಮನುಷ್ಯರಿರಲಿ ಕುರ್ಚಿಗಳೂ ನಗುತ್ತಾ ನರ್ತಿಸುತ್ತಿದ್ದುದು ಒಂದು ಅಪೂರ್ವ ಘಟನೆ. ಅಲ್ಲಿಯ ಕಲ್ಲು ಮರಗಳಿಗೂ ಕುಮಾರವ್ಯಾಸನ ಹಾಸ್ಯದ ಮನೋಧರ್ಮ ಒಗ್ಗೂಡಿದೆ.

*ನಗೆಯ ತೋಟದಿ ನಡೆದು ಸಾಗಿರಿ*

*ಬಗೆದು ಹಾಕಿರಿ ಕಳೆಯ ರಾಶಿಯ*

*ಬಗೆ ಬಗೆಯ ನಗೆ ಹೂಗಳರಳಲಿ ಜನರ ಮುಖಗಳಲಿ*

*ಮೊಗೆದು ಕುಡಿಯರಿ ಹಾಸ್ಯ ಜಲವನು*

*ಸಿಗಲಿ ಸುಖ ಸಂಪದವು*

*ಜಗವೆ ನಗುವಿನ ಕುಸುಮ ಕಂಪಿದೆಸೆಯೆನ್ನುವೆವು.*

❖

---

# ಕೊರವಂಜಿ ಅಪರಂಜಿ ಟ್ರಸ್ಟ್

**ಬೆಂಗಳೂರು**

## ಅಪರಂಜಿಗೆ 30 ರ ಸಂಭ್ರಮ

**ಶನಿವಾರ 5.4.2014 ಬೆಳಗ್ಗೆ 10 ಗಂಟೆಯಿಂದ**

**ಅಪರಂಜಿ ವಿಶೇಷಾಂಕ ಬಿಡುಗಡೆ ಮತ್ತು**

**ವೈವಿಧ್ಯಮಯ ಹಾಸ್ಯ ಕಾರ್ಯಕ್ರಮಗಳು**

**ಭಾರತೀಯ ವಿದ್ಯಾಭವನ, ರೇಸ್ ಕೋರ್ಸ್ ರಸ್ತೆ**

**ಬೆಂಗಳೂರು – 560 001**

## ಎಲ್ಲರಿಗೂ ಸುಸ್ವಾಗತ

# ಬರಹಗಾರನ ಬವಣೆ

**- ಎಚ್.ಆರ್. ಹನುಮಂತ ರಾವ್**

**ನಾನೇಕೆ ಬರೆಯಬೇಕಿತ್ತು?**

ನನ್ನ ಬರಹಗಳ ಬಗ್ಗೆ ಈ ಪ್ರಶ್ನೆ ಓದುಗರಿಗೆ ಮಾತ್ರವಲ್ಲದೆ ನನಗೂ ಅನೇಕ ಬಾರಿ ಕಾಡಿರುವುದುಂಟು. ಇದೀಗ, ಏನಾದರೂ ಸರಿ, ಉತ್ತರ ಕಂಡುಕೊಳ್ಳಲೇಬೇಕೆಂಬ ನಿರ್ಧಾರ ಈ ಮತ್ತೊಂದು ಬರಹಕ್ಕೆ ಕಾರಣವಾಯಿತು. ಜೀವಮಾನದ ಅನೇಕ ಹಂತಗಳನ್ನು ದಾಟಿ, ವಿಶ್ರಾಂತ ಜೀವನದ ಆಸುಪಾಸಿನಲ್ಲಿರುವ ನಾನು ಯಾವುದೋ ತುಡಿತಕ್ಕೆ ಒಳಗಾಗಿ, ಬರೆಯಬೇಕೆಂಬ ಹಠಕ್ಕೆ ಬಿದ್ದುದು ನಿಜವೆ. ಇದಕ್ಕಾಗಿ ಓದುಗನ ಕ್ಷಮೆವಿರಲಿ. ಬರೆದದ್ದನ್ನು ಕೊನೆಗೆ ಮನೆಮಂದಿಯಾದರೂ ಓದಿಯಾರೆಂಬ ಆಶೆಯಿಂದ, ಲೇಖನಗಳನ್ನು ಬರೆದೆ. ಮನೆಯವರುಗಳು, ತಮ್ಮ ತಂಟೆಗೆ ಬರದಿದ್ದರೆ ಸಾಕೆಂಬ ಪೂರ್ವಪ್ರಜ್ಞೆಯಿಂದಲೋ, ಅಥವಾ ರಕ್ತ ಸಂಬಂಧಿಯೆಂಬ ಒಂದೇ ಕಾರಣಕ್ಕೋ, ಓದಿಯೋ, ಓದೆದಯೋ ಉತ್ತೇಜಿಸಿದ ಫಲವಾಗಿ, ಪತ್ರಿಕೆಗಳಿಗೆ ಕಳಿಸುವ ಧೈರ್ಯ ಮಾಡಿದೆ. ದಪ್ಪ ದಪ್ಪ ಲಕೋಟೆಗಳಲ್ಲಿ ಅವನ್ನು ತುಂಬಿ ಅಂಚೆಯ ಮೂಲಕ ರವಾನಿಸಿದೆ. ಹಲವಾರು ಸಂಪಾದಕರು, ಉಪಸಂಪಾದಕರುಗಳು, ತಮ್ಮ ಕೈ ಸೇರಿದಾಗ, ಇವುಗಳನ್ನು ಒಪ್ಪವಾಗಿ ಜೋಡಿಸಿ, ಕಸದ ಬುಟ್ಟಿಯ ಕಡೆಗೆ ದೃಷ್ಟಿ ಬೀರಿದ್ದೇ ಆಗಿದ್ದರೆ, ಅವರನ್ನು ನಿಂದಿಸುವ ಹಕ್ಕು ನನಗಿಲ್ಲ. ಅವರುಗಳ ಮಾನಸಿಕ ಪರಿಸ್ಥಿತಿಯನ್ನು ಗ್ರಹಿಸಬಲ್ಲೆ. ಕ.ಬು. ಕೂಡ ಆಗಲೇ ತುಂಬಿ, ಅವರುಗಳಲ್ಲಿ ನಿರ್ವಿಣ್ಣತೆಯ ಛಾಯೆ ಮೂಡಿದ್ದೇ ಆದರೆ, ನನಗೆ ನಿರಾಶೆಯಾದರೂ, ಅವುರುಗಳ ಬಗ್ಗೆ ಅಪಾರ ಅನುಕಂಪವಿದೆ. ಮಾನವ ಪರಿಸ್ಥಿತಿಯ ಶಿಶು ಎಂಬುದನ್ನು ಅರಿತಾಗ, ಹೇಗೋ ಹಲವಾರು ಬರಹಗಳು, ಸಾಹಿತಿಗಳ ಕ್ಲೀಷಾ ಭಾಷೆಯಲ್ಲಿ ಹೇಳಬೇಕೆಂದರೆ - ನನ್ನ ಸಾಹಿತ್ಯ ರಚನೆ/ಕೃತಿಗಳು - ಅಚ್ಚಿಗೆ ಹೋಗಿ, ಪ್ರಕಟವಾಗಿದ್ದೇ ಆದ್ದರೆ, ಅವನ್ನು ಓದುವ, ಓದಿ, ತಮ್ಮ ಹಣೆಬರಹವನ್ನು ಹಳಿದುಕೊಳ್ಳುವ, ಕಣ್ಣೀರ್ಗರೆವ ವಾಚಕರ ಬಗ್ಗೆ ತುಂಬು ಸಹಾನುಭೂತಿಯಿದೆ. ನನ್ನ (ಹಣೆ) ಬರಹ ಹೇಗಾದರೂ ಇರಲಿ, ಓದುಗನ ಹಣೆ ಬರಹವಂತೂ ಭಾರತೀಯ ಕರ್ಮಸಿದ್ಧಾಂತದ 'ಆ ಜನ್ಮ ಕೃತ ಪಾಪ ಕರ್ಮಾಣಾಂ' ರೀತ್ಯ ಹಾಗೂ ಫಲಾಫಲಗಳನ್ನು ಗೀತೆಯಲ್ಲಿ ಹೇಳುವಂತೆ 'ಸುಖದುಃಖೇ ಸಮಾಕೃತ್ವಾ, ಲಾಭಾಲಾಭೌ, ಜಯಾಜಯೌ' ಸಮಸಮವಾಗಿ ಸ್ವೀಕರಿಸಬೇಕಾಗುವುದಷ್ಟೆ. ಇಲ್ಲಿ ಇನ್ನೊಂದು ಸ್ವಾರಸ್ಯವೂ ಇದೆ. ಒಬ್ಬರು ಕೊರಗುವಾಗ ಮತ್ತೊಬ್ಬರು ಆನಂದ ಪಡುವುದು ಈ ಮಾನವ ಜನ್ಮದ ಸಾಮಾನ್ಯ, ಸಹಜ ಗುಣವೆಂಬ ಅನುಮಾನವೂ ಚರಿತ್ರೆಯುಂದ ತೋರಿ ಬರುತ್ತದೆ. ಅನುಮಾನವಿದ್ದರೆ, ಹಿಟ್ಲರ್, ಬಾಬರ್, ಔರಂಗ್ಜೇಬ್, ಯೆನ್ಸ್ಯಮೊ, ಗಡಫ್ಫಿ, ಸದ್ದಾಂ ಹುಸ್ಸೈನ್ ಇತ್ಯಾದಿ, ಇತ್ಯಾದಿ ಜನಗಳ ಬಗ್ಗೆ ಓದಿ ನೋಡಿ. ಆ ಬಾಬತ್ತು ತತ್ವಜ್ಞಾನಿಗಳಿಗೊ, ಜ್ಞಾನ ಪೀಠ ಪ್ರಶಸ್ತಿ ಪಡೆದ ಬುದ್ಧಿಜೀವಿಗಳಿಗೊ, ಮನಶ್ಶಾಸ್ತ್ರಿಗಳಿಗೋ ಬಿಟ್ಟ ವಿಚಾರ.

ಬರೆಯುವಾಗ, ಏನನ್ನು ಬರೆಯಬೇಕು, ಎಷ್ಟು ಬರೆಯಬೇಕು ಮತ್ತು ಎಂಥಹ ಓದುಗನನ್ನು ಗಮನವಿಟ್ಟುಕೊಂಡು ಬರೆಯಬೇಕೆಂದು ತೀರ್ಮಾನಿಸಬೇಕಲ್ಲವೆ? ಅದು ನನ್ನ ತುಡಿತ ಯಾರಿಗೆ ಇಷ್ಟವಾಗಬಹುದು ಎನ್ನುವುದನ್ನು ನಿರ್ಧರಿಸಿದೆ. ಅಲ್ಲಿಂದ ಪ್ರಾರಂಭ ನನ್ನ ಕೊರೆತ. ಬರೆದೇ ಬರೆದೆ ಇಲ್ಲ ಗೀಚಿದೆ. ಹೊಡೆದು ಮತ್ತೆ ಬರೆದೆ. ಮತ್ತೆ ಕೊರೆದೆ ಇನ್ನಷ್ಟು ಬರದಂತೆಲ್ಲಾ ಇನ್ನಷ್ಟು ಹಾಳೆಗಳಿಗೆ ಮಸಿ ತುಂಬಿದೆ. ಹರಿದೆ ಸರಿಯಿಲ್ಲ ಎಂದು, ನಿಟ್ಟುಸಿರು ಬಿಟ್ಟೆ ನನಗೆ ತಿಳಿದ, ನಾನು ಓದಿದ ಪುಸ್ತಕಗಳನ್ನೆಲ್ಲಾ ಜ್ಞಾಪಿಸಿಕೊಂಡೆ. ತಿರುವು ಹಾಕಿದೆ. ಸ್ಫೂರ್ತಿ ಬರಲೆಂದು ಹೆಂಡತಿಯಿಂದ ಕಾಫಿ ಅನೇಕ ಸಲ ಮಾಡಿಸಿ, ಕುಡಿದೆ. ಅವಳಿಗೆ ರೇಗಿ, ಇದೇ ಅಭ್ಯಾಸವಾಗಬಿಡಬಹುದೆಂದು, ಪಕ್ಕದ ಮನೆಗೆ, ಹರಟಲು ಅಲ್ಲಿಂದ ಕಳಚಿಕೊಂಡಳು. ಕುಮಾರವ್ಯಾಸನಿಗೇನೋ ಗದುಗಿನ ವೀರನಾರಾಯಣ 'ಹಲಗೆ ಬಳಪವ ಪಿಡಿಯದೊಂದಗ್ಗಳಿಕೆ, ಪದವಿಟ್ಟಳುಪದೊಂದಗ್ಗಳಿಕೆ ಪರರೊಡ್ಡವದ ರೀತಿಯ ಕೊಳ್ಳದೊಂದಗ್ಗಳಿಕೆ' ಎಂದೆಲ್ಲ ವರವ ಕೊಟ್ಟಿರಬಹುದೇನೊ. ಅದೆಲ್ಲಾ ಮಿಲ್ಟನ್, ಬೈರೊನ್, ಶೆಲ್ಲಿ, ಶೇಕ್ಸ್‌ಪೀಯರ್, ಭಾಸ, ಕಾಳಿದಾಸ, ಭರ್ತೃಹರಿ, ಕುವೆಂಪು, ಬೇಂದ್ರೆ, ಕಾರಂತ, ಅ.ನಾ.ಕೃ.ತ.ರಾಸು. ಇತ್ಯಾದಿ, ಇತ್ಯಾದಿ ಮಂದಿಗಷ್ಟೆ ಸರಸ್ವತಿಗೂ ಕೂಡ ಎಂತಹ ಪಕ್ಷಪಾತ? ನಮ್ಮಂತಹ ಸಾಮಾನ್ಯರ ಬಳಿ ಒಮ್ಮೆಯೂ ಸುಳಿಯುವುದಿಲ್ಲ! ಇನ್ನು ನನಗೆಲ್ಲಿಯ ಹೆಗ್ಗಳಿಕೆ, ಹೇಗೆ ತಾನೆ ಸಾಧ್ಯ ಅದೂ ಈ ವಯಸ್ಸಿನಲ್ಲಿ? ಅ ಶಕ್ತಿ ಬಜಾರಿನಲ್ಲಾದರೂ ಸಿಕ್ಕುವ ವಸ್ತು ಆಗಿರುತ್ತಿದ್ದರೆ, ಗಲ್ಲಿ ಗಲ್ಲಿಗೂ ಕುಮಾರ ವ್ಯಾಸರುಗಳಿರುತ್ತಿದ್ದರೇನೋ! ಆಗ ಅವರದೇ ಒಂದು ಜಾತಿ ಸೃಷ್ಟಿಯಾಗಿ, ಸರ್ಕಾರದ ಶಾದಿ ಭಾಗ್ಯ, ತಾಳಿ ಭಾಗ್ಯ, ಪೆನ್ ಭಾಗ್ಯ, ಮಸಿ ಭಾಗ್ಯ, ಮಸಣ ಭಾಗ್ಯ ಮತ್ತಿನ್ನೇನೋನೋ ಭಾಗ್ಯಕ್ಕಾಗಿ ಪಕ್ಷಕಟ್ಟಿ ಕರುಬುತ್ತಿದ್ದರೇನೊ. ಅಥವಾ ಆ ಶಕ್ತಿ ನನಗಿರುತ್ತಿದ್ದರೆ, ಇದೇ ನಾರಣಪ್ಪ ಕವಿ ರಾಮಾಯಣ ಕಾವ್ಯದ ಬಗ್ಗೆ 'ತಿಣಿಕಿದನು ಫಣಿರಾಯ ರಾಮಾಯಣ ಕವಿಗಳ ಭಾರದಲಿ, ತಿಂತಿಣಿಯ ರಘುವರ ಚರಿತೆಯಲಿ ಕಾಲಿಡಲು ತೆರಪಿಲ್ಲ' ಎಂದೋ ಅಥವಾ ರಾಘವಾಂಕನಂತೆ 'ನಡೆವರೆಡಹದೆ ಕುಳಿತರೆಡಹುವರೆ ಕಾವ್ಯಮಂ ನಡೆಸುವಾತಂ..... ಕಡೆತನಕ ಬಂದ ಲೇಸಿಂಗೆ ತಲೆದೂಗೆ ತಲೆಯೊಡೆವುದೇ ಬೇನೆಯರಿಯದ ನೀರಸರನೇಕೆ ಪುಟ್ಟಿಸಿದನಬುಜಭವನು' ಎಂದು ಜರಿದೋ, 'ಅರಸುಗಳಿಗಿದು ವೀರ, ದ್ವಿಜರಿಗೆ ಪರಮ ವೇದದ ಸಾರ.... ವಿದ್ಯಾಪರಿಣತರಲಂಕಾರ ಕಾವ್ಯಕೆ ಗುರು' ಎಂಬಂತೆ, ನಾನೂ ಕೂಡಾ – ''ಈ ನನ್ನ ಬರಹಕೆ ಸರಿಸಾಟಿ ಮರ್ತ್ಯಲೋಕದಲಿ ಎಲ್ಲೂ ಇಲ್ಲ, ಇದನೋದಿ ಆನಂದ ಭಾಷ್ಪ ಸುರಿವ ಮಂದಿಗೆ ಕೊನೆಯಿಲ್ಲ, ಹಾಗೊಬ್ಬ ಹೀಗೊಬ್ಬ ಆದರಿಸದೆ ಕರುಬುವ ಲೇಖಕನಿಗೆ ಮತಿ ಇಲ್ಲ, ನನ್ನೀ ಲೇಖನಗಳನೆಲ್ಲಾ ಪ್ರಿಂಟಿಸಿ ನಿಟ್ಟುಸಿರ ಬಿಟ್ಟ ಸಂಪಾದಕನೆಲ್ಲೂ ಇಲ್ಲ'' ಎಂದು ಚತುಷ್ಪದಿಯನ್ನು ನನ್ನದೇ ಪ್ರಾಸ, ಶೈಲಿಯಲ್ಲಿ ಬರೆದು, ನನ್ನ ಭುಜವನ್ನ ನಾನೇ ತಟ್ಟಿಕೊಳ್ಳಬಹುದಿತ್ತೇನೋ!

ಇನ್ನು, ಬರೆಯಲು ವಸ್ತು ದೊರಕಿದ ನಂತರ, ಮುಂದಿನ ಹೆಜ್ಜೆ ಏನೆಂದು ಯೋಚಿಸ ಹೊರಟರೆ ಅದು ಎಲ್ಲಿಗೆ ಕೊಂಡಯ್ಯುವುದೋ? ಎಲ್ಲಿ ದಾರಿ ತಪ್ಪಿಯೇನೋ ಎಂಬ ಆತಂಕ ಮೂಡಿದರೆ, ಬರಹ ಅಲ್ಲಿಗೆ ನಿಂತಂತಯೆ ಎನ್ನುವುದು ನನ್ನ ಅನುಭವ. ಇದೀಗ ಲಲಿತ

ಪ್ರಬಂಧವನ್ನ ರಚಿಸಲು ಹೊರಟರೆ, ಅದಕ್ಕೆ ಬರೆಯಲು ಸಾಮಗ್ರಿ ಏನಾದರೂ ಆಗಬಹುದು. ಅದು ವಿಚಾರ ಹಾಗು ಮನೋವಿಹಾರ ಸಾಹಿತ್ಯದ ಒಂದು ಭಾಗವಷ್ಟೆ. ಅದು ಎಲ್ಲಿಯೂ ನಿಂತೂ ನಿಲ್ಲದಂತೆ, ಕ್ಷಣಿಕವಾಗಿ ನಿಂತರೂ, ಡೊಂಕು ಡೊಂಕಾಗಿ ಚಲಿಸುವ ಹಾವಿನಂತೆ, ಝುಳಝುಳ ನಿನಾದನೊಡನೆ, ಬೆಳಕನ್ನು ಫಳ ಫಳ ಮಿಂಚುತ್ತಾ ಹರಿಯುವ ಹೊಳೆಯಂತೆ, ಲಲಿತ, ಸುಂದರ ವಾಕ್ಯಗಳಿಂದ ಮನಸ್ಸಿಗೆ ಮುದಕೊಡುವಂತಿರಬೇಕು. 'ವಾರ್ ಆಫ್ ದಿ ವರ್ಲ್ಡ್, ಟೈಮ್ ಮಷಿನ್, ದಿ ಇನ್ವಿಸಿಬಲ್ ಮ್ಯಾನ್', ಇತ್ಯಾದಿ ಕಾದಂಬರಿಗಳ ಕರ್ತೃ, ಸುಪ್ರಸಿದ್ಧ ಎಚ್.ಜಿ. ವೆಲ್ಸ್ ಒಂದೆಡೆ 'ಪ್ರಬಂಧ ರಚನೆ ಅತ್ಯಂತ ಸರಳ, ಪ್ರಬಂಧಕ್ಕೆ ವಸ್ತು ಮುಖ್ಯವೇ ಅಲ್ಲ, ಮೂಡ್ ಅಥವಾ ಭಾವವೇ ಮುಖ್ಯ. ಯಾವುದೇ ವಿಷಯಕ್ಕೆ ಅಂಟಿಕೊಂಡಿರಲು ತಿಣುಕಾಡಬಾರದು. ಪ್ರಬಂಧ ಆ ಕ್ಷಣದ 'ಲಿಲ್ಲಿ'ಯಂತಿರಲುಬೇಕು. ವ್ಯಾಖ್ಯಾನವನ್ನೊಂದನ್ನು ಬಿಟ್ಟು ಹೇಗಾದರೂ ಆರಂಭಿಸಬಹುದು. ಕಿಟಕಿಯಿಂದ ಒಳ ನುಗ್ಗುವ ವಿದೂಷಕನಂತೆ 'ಧಿಢೀರ್'ಎಂದು ಪ್ರಾರಂಭಿಸಿದರೂ ಸರಿ. ಒಮ್ಮೆಗೇ ಓದುಗನ ಮೇಲೆ ಬಿದ್ದು ಆತನನ್ನು ಕೊಂಡೊಯ್ಯಬೇಕು ಜೊತೆಯಲ್ಲಿ. ಬರೆಯುವವನು ಸಂತೋಷವಾಗಿದ್ದಷ್ಟೂ ಓದುಗನಿಗೂ ಖುಶಿ. ಆದರೆ, ಪ್ರಬಂಧ ಕೊನೆಗೊಳ್ಳುವುದರಲ್ಲಿದೆ ಸ್ವಾರಸ್ಯ.... ನಾಯಿಯ ಬಾಲದಂತೆ ಚಿಕ್ಕದಾಗಿ, ತಮಾಷೆಯಾಗಿದ್ದರೆ ಜನಪ್ರಿಯತೆಗೆ ಒಳ್ಳೆಯದು', ಎಂದು ಒಂದೆಡೆ ಹೇಳಿದ್ದಾನೆ. ಇದೇ ಧಾಟಿಯಲ್ಲಿ ಕಳೆದ ಶತಮಾನದ ಸುಪ್ರಸಿದ್ಧ ಪತ್ರಿಕಾ ಸಂಪಾದಕ 'ಒಸ್ಬೊರ್ನ್' ಕೂಡ ತನ್ನ 'ಪ್ರಬಂಧ ರಚಿಸುವುದು ಹೇಗೆ' ಎಂಬ ಪ್ರಬಂಧದಲ್ಲಿ ಹೇಳಿರುವನು! ಆದರೆ ಬರೆಯಲು ಪ್ರಯತ್ನಿಸಿ ನೋಡಿ,, ಎನೆಲ್ಲ ತೊಂದರೆಗಳು ಉದ್ಭವವಾಗುವುವು. ಅವನು ತಿಳಿಸಿದಷ್ಟು ಸುಲಭವಾಗಿ ಕೈ ಓಡುವುದೇ ಇಲ್ಲ! ಮಂಡೆಗೆ ಬಿಸಿಯೇರುವುದೊಂದು ಬಿಟ್ಟರೆ! ಇಡೀ ವರ್ಷ ಪೂರ್ತಿ ಏನನ್ನೂ ಓದದೆ, ಕ್ಲಾಸಿಗೂ ಚಕ್ಕರ ಹಾಕಿ, ಪರೀಕ್ಷೆಯ ಹಾಲಿನಲ್ಲಿ ಪ್ರಶ್ನೆ ಪತ್ರಿಕೆ ಹಿಡಿದವನ ಸ್ಥಿತಿಯನ್ನು ಹೋಲುವುದು. ಅಥವಾ ಮಂಡೆಗೆ ಬಂದದನ್ನು ಪೇಜಿಗೆ ಇಳಿಸುವಷ್ಟರಲ್ಲಿ ಈ ವೇಳೆಯಲ್ಲೇ ದೂರದ ಬಂಧು, ಬಳಗ, ಇಲ್ಲವೆ ಅಪರೂಪವಾಗಿ ಹಳೆಯ ಸ್ನೇಹಿತರೂ ಬರುವದುಂಟು. ಪಾವತಿಸಬೇಕಾಗುವ ಬಿಲ್ಲುಗಳು ಕೂಡ ಅದೇ ಮುಹೂರ್ತ ಹುಡುಕಿಕೊಂಡು ಬರುತ್ತವೆ! ಆದರೆ ಈ ಮಹಾನುಭಾವರುಗಳು ಅದೆಂತಹ ಉತ್ಕೃಷ್ಟ ಸಾಹಿತ್ಯ ರಚನೆಗಳಿಗೆ ಕಾರಣರಾದರು ನೋಡಿ – ತಿಳಿ ಹಾಸ್ಯದ, ಅರ್ಥಗರ್ಭಿತ ಪ್ರಬಂಧಗಳ 'ಸಿಟಿಜನ್ ಆರ್ಫ್ ದಿ ವರ್ಲ್ಡ್'ನ ಆಲಿವರ್ ಗೋಲ್ಡ್‌ಸ್ಮಿತ್ ಹೇಗೆ ಪ್ರಸಿದ್ಧಿಯೋ, ಹುಲಿ, ಚಿರತೆ ಇತ್ಯಾದಿ ಬೇಟೆಯ ಬಗ್ಗೆ ಜಿಂಮ್ ಕಾರ್ಬೆಟ್ ಎಷ್ಟು ಸುಲಲಿತವಾಗಿ ಬರೆಯಬಲ್ಲನೊ, ಅಷ್ಟೇ ಸಾಮರ್ಥ್ಯದ, ವಿಚಾರ ಪೂರಿತ ಲೇಖನಗಳ ವಿಲಿಯಂ ಹ್ಯಾಸ್ಲಿಟ್, ರಾಬರ್ಟ್‌ಲಿಂಡ್, ನಕ್ಕು ನಗಿಸುವ ಡಿಕೆನ್ಸ್, ವುಡ್ ಹೌಸ್, ಸ್ಟೀಫನ್ ಲಿಕಾಕ್ ಇತ್ಯಾದಿ ಮಂದಿಗಳ ಪ್ರಬಂಧ ಸಾಹಿತ್ಯದ ಸೊಗಸನ್ನು ಯಾರು ತಾನೆ ಅನುಕರಿಸಲು ಸಾಧ್ಯ? ಇನ್ನು ಕನ್ನಡಕ್ಕೇ ಬರೋಣ. 'ನೆಗಡಿ'ಯ ಬಗ್ಗೆ ಸೀನುಗಳ ಮಧ್ಯೆಯ ಚರ್ಚಿಸುವ, 'ಸಿಗರೇಟಿನ ಧೂಮ ವರ್ತುಲ ವರ್ತುಲ'ದ 'ಪಾವೆಂ'ರ ಹಾಸ್ಯ, ದೋಸೆಯ ಬಗ್ಗೆ 'ವಿಸೀ'ಯವರ, ಬಾಯಲ್ಲಿ ನೀರೂರಿಸುವ, ವಿಚಾರ ಮಂಥನ, 'ಆತ್ಮಹತ್ಯೆ'ಯ ಬಗ್ಗೆ

ಪು.ತಿ.ನ. ಅವರ 'ಗರಳ ರಕ್ಷೆ'ಯ ಪತ್ರ, ನಾಡಿಗೇರರ 'ಆತ್ಮ ವಿಮರ್ಶೆ'ಯ ನಗೆ ರಸಾಯನ, ಮಹಾರಾಜ ಕಾಲೇಜಿನ 'ಕಾಮನ್ ರೂಮ್'ನಲ್ಲಿಯ ವಿದ್ವಾಂಸರುಗಳ ಮಧ್ಯೆ ನಡೆಯುತ್ತಿದ್ದ ಪ್ರಸಂಗಗಳನ್ನು ನೆನಸಿ, ನಗಿಸುವ ಎ.ಎನ್. ಮೂರ್ತಿರಾಯರ ಲಲಿತ ಪ್ರಬಂಧಗಳು, ತೀ.ನಂ.ಶ್ರೀಯವರ 'ಕಾಸಿನ ಸಂಘ'ದ ಪ್ರೊಫೆಸರುಗಳ ಕನ್ನಡ ಪ್ರೇಮದ ಗೊಂದಲ, ಡಿವಿಜಿಯವರ 'ಜ್ಞಾಪಕ ಚಿತ್ರ ಶಾಲೆ'ಯ ನೈಜ ವ್ಯಕ್ತಿ ಚಿತ್ರಣಗಳು, ಅತಿ ಆವಸರವಾಗಿ ನಮ್ಮನ್ನಗಲಿದ ದ.ಬಾ. ಕುಲಕರ್ಣಿ, ಧಾರವಾಡ ಬಾನುಲಿಯ 'ನಾಕ', 'ಬೀಚಿ'ಯ ಹರಿತ ಆದರೂ ಹಾಸ್ಯ ಭರಿತ ತಿಮ್ಮಾಮೃತ, 'ಕೊರವಂಜಿ, ಅಪರಂಜಿ'ಗಳ ದಿವಂಗತ ಕೇಫ, ರಾಮಿ, ಕಸ್ತೂರಿ, ರಾ.ಶಿ. ದಾಶರಥಿ, ಸುನಂದಮ್ಮ, ಇತ್ಯಾದಿ. ನಮ್ಮ ಮಧ್ಯೆದಲ್ಲಿಯೇ ಇರುವ, 'ಸೆಕೆಂಡ್ ಹ್ಯಾಂಡ್ ಪುಸ್ತಕ'ಗಳ ಬಗ್ಗೆ ಅತ್ಯಂತ ನವಿರಾಗಿ, ಅಚ್ಚುಕಟ್ಟಾಗಿ ಬರೆದ ಪ್ರೊ. 'ಅ.ರಾ. ಮಿತ್ರ,' ಅತ್ಯಂತ ಹಿರಿಯ, ಗೌರಾವನ್ವಿತ 'ಕೊರವಂಜಿ/ಅಪರಂಜಿ'ಯ ಅ.ರಾ. ಸೇತುರಾಮರಾವ್, ಅಡ್ವೋಕೇಟ್ ಹಾ.ರಾ. ರಾಮ ಮೂರ್ತಿ ಹಾಗೂ ಇಲ್ಲಿ ಬಿಟ್ಟುಹೋಗಿರುವ ಮತ್ತಿತ್ತರನೇಕ ಬರಹಗಾರರ (ಅವರೆಲ್ಲರ ಕ್ಷಮೆಯಿರಲಿ) ತಿಳಿ ಹಾಸ್ಯವೇ ಆಗಲಿ, ವಿಚಾರ ಪೂರಿತ ಬರಹಗಳೇ ಆಗಲಿ, ನಾ ಹೇಗಾದರೂ ಅವರ ಸಮ ಸಮಕ್ಕಲ್ಲದಿದ್ದರೂ, ಓದುಗನು 'ಆಯಿತು, ಇನ್ನೂ ಚೆನ್ನಾಗಿ ಬರೆಯಲಿ' ಎಂಬ ಅಭಿಪ್ರಾಯಕ್ಕೆ ಬಂದರೆ ಅದೇ ಎನಗೆ 'ಶ್ರೀರಕ್ಷೆ'. ಈ ಬಗ್ಗೆ ಗೋವಿಂದ ಪೈ ಅವರ ಲೇಖನ 'ಬರಹಗಾರನ ಹಣೆಬರಹ' ಹೊಸ, ಬರಹಗಾರರಿಗೆ ಮಾರ್ಗದರ್ಶಿಯಾಗಿದೆ. ಸ್ಥಳಾಭಾವದ ನಿಮಿತ್ತ, ಇಲ್ಲಿ ಆ ಲೇಖನದ ಒಂದು ತುಣಕನ್ನು ಮಾತ್ರ ಸೇರಿಸುತ್ತಿದ್ದೇನೆ.

ಅವರೊಮ್ಮೆ ತಮ್ಮ ಬರಹವೊಂದನ್ನು ಬರೆದು ಕಳುಹಿಸಿದ್ದ ಪತ್ರಿಕೆಯ ಸಂಪಾದಕರೊಡನೆ ಸಮಾಲೋಚನೆಯಲ್ಲಿದ್ದ ವೇಳೆ, ಅಲ್ಲಿಗೊಬ್ಬ ಯುವಕ ಬಂದು ತನ್ನ ಕವಿತೆಯನ್ನು ಆ ಪತ್ರಿಕೆಯಲ್ಲಿ ಪ್ರಕಟಿಸದಿದ್ದಕ್ಕೆ ಕಾರಣವನ್ನು ಕೇಳವನು. ಆ ಸಂಪಾದಕರು ಅದು ತಮ್ಮ ಪತ್ರಿಕೆಯ ಗುಣಮಟ್ಟಕ್ಕೆ ಸರಿಯಿಲ್ಲವೆಂದು ಹೇಳಿ ತಿರುಗಿಸುವರು. ಆತ, ಆ ಒಂದು ಕವಿತೆಯನ್ನು ದಯವಿಟ್ಟು ಪ್ರಕಟಿಸಿದರೆ ಮತ್ತೆ ಅವರನ್ನು ಪೀಡಿಸುವುದಿಲ್ಲವೆಂದು ಹೇಳಿ ಗೋಗೆರೆಯುತ್ತಾನೆ. ಸಂಪಾದಕರು ಅವನ ಬಿನ್ನಹವನ್ನು ತಿರಸ್ಕರಿಸುತ್ತಾ ಪೈ ಅವರೊಡನೆ ಪುನಃ ಮಾತಿಗೆ ತೊಡಗುವರು. ಆ ಯುವಕ ತನಗಾದ ನಿರಾಶೆಗಿಂತಲೂ ಹೆಚ್ಚಾಗಿ, ಮತ್ತೊಬ್ಬರೆದುರಿಗೆ ಆದ ತೇಜೋಭಂಗದಿಂದಾಗಿ, ತಲೆ ತಗ್ಗಿಸಿ ಹೊರಟು ಹೋಗುವನು. ಮಾತು ಮುಗಿಸಿ, ಪೈ ಅವರು ಹೊರಬಂದಾಗ, ಅಲ್ಲಿಯೆ ನಿಂತಿದ್ದ ಆ ಬಾಡಿದ ಮುಖದ ಯುವಕನನ್ನು ಕಂಡಾಗ, ಇವರಿಗೆ ಹಾವು ಹಾದಂತಾಗಿ, ಅವನ ಲೇಖದ ಬಗ್ಗೆ ಬಗ್ಗೆ ವಿಚಾರಿಸುವರು. ಇವರ ಬರಹ ಅಚ್ಚಿಗೆ ಹೋಗುವುದಿದೆಯೆಂದು ಹೇಳಿದಾಗ, ಅವನು ಮತ್ತಷ್ಟು ಕಳೆಗುಂದಿದ್ದನ್ನು ನೋಡಿ ಕರುಳು ಚುರುಕ್ಕೆನುತ್ತದೆ. ಅವನ ಕವಿತೆಯನ್ನು ಪಡೆದು ಇವರು ಓದಿದಾಗ, ಅದು ಅಂಥಾ ಕಳಪೆಯಾಗಿಲ್ಲದೆ ಇರುವುದನ್ನು ಗ್ರಹಿಸಿ, ಅವನಿಗೆ ಹೇಳುವ ಮಾತು ಅರ್ಥಗರ್ಭಿತವಾಗಿದೆ ''ಹಿಟ್ಟು ಕೊಂಚ ಹಳವಾಗಿರಬಹುದೇ ಹೊರತು, ಹಿಟ್ಟು ಹಿಟ್ಟೇ. ಮರಳಲ್ಲ, ಬೂದಿಯಲ್ಲ, ಆ1ನೇ ತರಗತಿಯದಲ್ಲ ಎಂಬುದೇನೋ

ನಿಜವಾದರೂ – ಅವನೇನು? ಅವನ ವಯಸ್ಸೇನು? – ಬೆಳೆಯ ಗುಣ ಮೊಳೆಯಲ್ಲಿ ಕಾಣುತ್ತದೆ. ಆದರೆ, ಅದಕ್ಕಿಂತ ಎಷ್ಟೋ ನೂನವಾದ ಕವಿತೆಗಳು ಅದೇ ಪತ್ರಿಕೆಯಲ್ಲಿ, ಅದರ ಇತ್ತೀಚೆಯ ಸಂಚಿಕೆಯಲ್ಲಿ ಕೂಡ ಪ್ರಕಟವಾಗಿದೆ. 'ತಮ್ಮಾ ಮರುಗಬೇಡ, ಇಂದಿನ ಲೇಖಕರು ರೋಗಿಗಳು, ಸಂಪಾದಕರು ವೈದ್ಯರು. ವೈದ್ಯನು ರೋಗಿಯನ್ನು ತಿದ್ದಬಹುದೇ ಹೊರತು ಆಯುಸ್ಸನ್ನು ಈಯಲಾರ.... ಯಾವ ವಿಷಗಳಿಗೆಯಲ್ಲೋ ಈ ಕವಿತೆಯನ್ನು ರಚಿಸಿ ಒಮ್ಮೆ ಹತಾಷರಾದಿರಿ ಎಂದರೆ, ಈ ಆಶಾಭಂಗ ಎಂದಿಗೂ ತಾಳದು. ಕೊಕ್ಕರೆಗೆ ಒಂದೇ ಕೆರೆಯೇ? ದೇವರನ್ನು ನೆನೆದು ಇದನ್ನು ಇತರತ್ರ ಕಳುಹಿಸಿರಿ. ಎಳೆತಾದ ಕೇದಗೆಯ ಗರಿಗಂತೆ ನಿಮ್ಮ ಎಳೆಯ ಕವಿತೆಗಳು ಬೇಗನೆ ಮುಡಿಹೋದಾವು.''

ಕನ್ನಡದ ಪ್ರಖ್ಯಾತ ಹಿರಿಯ ಸಾಹಿತಿ, ಪ್ರಾತಃಸ್ಮರಣೀಯ ದಿ. ಗೋವಿಂದ ಪೈರವರ ಈ ಧಿೀಮಂತ ನುಡಿಯೇ ಎನಗೂ ಮಾರ್ಗ ದರ್ಶಿಯಾಗಲಿ, ನನ್ನ ಗರಳ ರಕ್ಷೆಯೂ ಮತ್ತು ಅದೇ ನನ್ನ ಲೇಖನಕ್ಕೆ ಬುನಾದಿಯೂ ಆಗಬಾರದೇಕೆ? ಇಗೋ, ಇಂದೇ, ಈಗಲೇ, ಇಲ್ಲೇ ಷುರುವಾಗಲಿ ನನ್ನ ರಚನೆ. ಇದನ್ನು ನಾನು ಬರೆದು ಕಳಿಸುವ ಪ್ರತಿಕೆಯ ಸಂಪಾದಕರಿಗೆ ಪ್ರಕಟಿಸುವ ಅಗೋಚರ ಮನೋಸ್ಥೈರ್ಯ, ಪತ್ರಿಕಾಲಯದ ಕಸದ ಬುಟ್ಟಿಯ ದೃಷ್ಟಿ ತಾಕದಂತೆ, ಓದಲೇಬೇಕಾದ ವಾಚಕರಿಗೆ ನೇರ ತಲುಪಿ, ಅವರಿಗೆ ಸಹನೆ ಹಾಗೂ ಧೈರ್ಯ ಭಗವಂತನು ದಯಪಾಲಿಸಲೆಂದು ಕೋರುತ್ತಾ ಬಿಳಿ ಹಾಳೆಗಳು, ಷಾಯಿ ಹಾಗು ಲೇಖನಿಯನ್ನು ಸಿದ್ಧಪಡಿಸಿರುವೆ. ಇಗೋ, ಇಂದೇ, ಇಲ್ಲೇ – ಆದರೆ ಆದರೆ ಎಲ್ಲೋ ಏನೋ ಸಮಸ್ಯೆ. ಹಾ! ಅದೇ, ಹಳೆ ಸಮಸ್ಯೆ, ಏನೂ ಹೊಳೆಯುತ್ತಲೇ ಇಲ್ಲವೇ? ವೇರೀಸ್ ಮೈ ಎಗೋ...? ಓಹ್, ಮೈ ಗಾಡ್!

❖

## ಭುವನೇಶ್ವರಿ ಹೆಗಡೆಯವರಿಗೆ ಪ್ರಶಸ್ತಿಯ ಗರಿ

ಅಪರಂಜಿಯ ಅಭಿಮಾನಿಗಳೂ, ಅಪರಂಜಿಯ ಬಳಗದ ಹಿರಿಯ ಲೇಖಕಿಯೂ ಆದ ಶ್ರೀಮತಿ ಭುವನೇಶ್ವರಿ ಹೆಗಡೆಯವರಿಗೆ ಅವರು ಹಾಸ್ಯ ಸಾಹಿತ್ಯಕ್ಕೆ ಸಲ್ಲಿಸಿದ ಸೇವೆಗಾಗಿ ಈ ಸಾಲಿನ ಬಿ.ಎಚ್. ಶ್ರೀಧರ ಅವರ ನೆನಪಿನಲ್ಲಿ ನೀಡುವ ಬಿ.ಎಚ್. ಶ್ರೀಧರ ಪ್ರಶಸ್ತಿ ಲಭಿಸಿದೆ. ಏಪ್ರಿಲ್ 24ರಂದು ಪ್ರಶಸ್ತಿಯನ್ನು ನೀಡಲಾಗುವುದು. ಅಪರಂಜಿಯ ಎಲ್ಲ ಓದುಗರ ಪರವಾಗಿ ಶ್ರೀಮತಿ ಭುವನೇಶ್ವರಿ ಹೆಗಡೆಯುವರಿಗೆ ಅಭಿನಂದನೆಗಳು


# ಅರವತ್ತರ ನಂತರ ಹೆಂಡ್ತಿಗೊಂದು ಪ್ರೇಮಪತ್ರ

**- ಸುಕೇಶವ**

**ಪ್ರೀ**ತಿಯ ಹೆಂಡ್ತಿ

ನೀನು ಮಗಳ ಮನೆಗೆ ಹೋಗಿ ಕೂತು ಒಂದು ತಿಂಗಳಾಗಿದೆ ಆದರೆ ನನಗೆ ಒಂದು ವರ್ಷವಾಯಿತು ಅನಿಸಿದೆ. ಇಷ್ಟು ದೀರ್ಘವಾಗಿ ನಿನ್ನನ್ನು ಬಿಟ್ಟಿದ್ದೇ ಇಲ್ಲ. ಮೊದಮೊದಲು ನೀನೂ ನನಗೆ ಪ್ರೇಮಪತ್ರ ಬರೀತಿದ್ದೆ. ನಾನೂ ಬರೀತಿದ್ದೆ. ಆದರೆ ಸುದೀರ್ಘ 36 ವರ್ಷಗಳ ದಾಂಪತ್ಯದಲ್ಲಿ ಇಷ್ಟು ದೀರ್ಘವಾಗಿ ನೀನು ನನ್ನನ್ನು ಬಿಟ್ಟಿರೋ, ನಾನು ನಿನ್ನ ಬಿಟ್ಟಿರೋ ಸಂದರ್ಭವೇ ಬಂದಿಲ್ಲವಾದ್ದರಿಂದ ಈ ಪ್ರೇಮಪತ್ರಗಳಿಗೆ ನಮ್ಮ ಸಂಸಾರದಲ್ಲಿ ಜಾಗವೇ ಇರಲಿಲ್ಲ. ಈಗ ಅಂಥಾದ್ದೊಂದು ಅವಕಾಶ ಸಿಕ್ಕಿದೆ. ನಾನು ಬರೆದಿದ್ದೀನಿ ನೀನು ಓದು. ನೀನು ಬರಿ ನಾನು ಓದ್ತೀನಿ. ಹಿರಿಯರ ಒಪ್ಪಿಗೆಯ ಮೇರೆಗೆ ನಾನೂ ನೀನೂ ಬಾಳಸಂಗಾತಿಗಳಾದೆವು.. ಮದುವೆಗೆ ಮೊದಲು ನಮ್ಮನೆಯವರ ಜೊತೆ ನಾನು ನಿನ್ನನ್ನು ನೋಡಲು ಬಂದಿದ್ದಾಗ ನೀನು ನಿಮ್ಮಪ್ಪನ ಪಕ್ಕ ತಲೆ ಎತ್ತದೆ ಕೂತಿದ್ದೆ. ಆದರೆ ಆಗಾಗ ತಲೆ ಎತ್ತಿ ಎಲ್ಲೋ ನೋಡುವಂತೆ ನಟಿಸುತ್ತಾ ಕಳ್ಳ ನೋಟದಿಂದ ನನ್ನನು ನೋಡುತ್ತಿದ್ದೆ. ಮೊದಲ ನೋಟದಲ್ಲೇ ನೀನು ಇಷ್ಟವಾದೆ. ಏಕಾಂತದಲ್ಲಿ ಒಂದಿಷ್ಟು ಮಾತುಕತೆ ನಂತರ ನಾವಿಬ್ಬರೂ ಮದುವೆ ಮಾಡ್ಕೊಳ್ಳೋ ತೀರ್ಮಾನಕ್ಕೆ ಬಂದೆವು. ಮುಂದೆ ಒಂದೇ ವಾರದಲ್ಲಿ ನಿಶ್ಚಿತಾರ್ಥ. ಆ ದಿನದಿಂದಲೇ ನಿನ್ನ ಮೇಲೆ ನನಗೆ ಆಕರ್ಷಣೆ, ಆಸೆ, ತುಡಿತ, ಭವಿಷ್ಯದ ಕನಸು ಎಲ್ಲ ಪ್ರಾರಂಭವಾಗಿತ್ತು. ನಿಶ್ಚಿತಾರ್ಥಕ್ಕೆ ಬಂದಾಗ ನೀನೇ ಮುಗುಳು ನಗೆಯಿಂದ ಸ್ವಾಗತಿಸಿದೆ. ಆ ನಿನ್ನ ನಗು ಒಂದು ಕ್ಷಣ ನನ್ನನ್ನು ಕಂಪಿಸಿತು. ಆ ನಿನ್ನ ಕಣ್ಣುಗಳ ಕಾಂತಿ ನನ್ನನ್ನು ಬಹಳವಾಗಿ ಆಕರ್ಷಿಸಿತು. ನೀನು ಉಟ್ಟಿದ್ದ ಆ ನೀಲೀ ಸೀರೆ ನಿನಗೆ ಹೇಳಿ ಮಾಡಿಸಿದ ಹಾಗಿತ್ತು. ನಿನ್ನ ಸಂಭ್ರಮ ಇಡೀ ಮನೆಯಲ್ಲಿ ಪ್ರತಿಫಲಿತವಾಗಿತ್ತು. ಬನ್ನಿ ಅಂತ ನಮ್ಮನ್ನು ಕರೆದ ನಿನ್ನ ಧ್ವನಿ ವೀಣೆಯ ನಾದದಂತಿತ್ತು. ನಿನ್ನ ನಡಿಗೆ ಮನೆಯಲ್ಲೆಲ್ಲಾ ಮಿಂಚಿನ ಸಂಚಾರ ಮೂಡಿಸುತ್ತಿತ್ತು.. ನಿನ್ನ ಸಾಮೀಪ್ಯ ನನ್ನ ಹೃದಯದಲ್ಲಿ ನಿರಂತರ ಗೆಜ್ಜೆನಾದದ ಅನುಭವ. ನೀನು ನನ್ನನ್ನು ನೋಡಿ ಅದೊಂಥರಾ ನಕ್ಕೆಯಲ್ಲ ಆ ನಗುವಿಗೆ ನಾನು ಇನ್ನೂ ಅರ್ಥವನ್ನು ಹುಡುಕುತ್ತಿದ್ದೇನೆ. ನೀನು ರಿಲ್ಯಾಕ್ಸ್ ಮಾಡ್ಕೊಳ್ಳಿ ಕಾಫಿ ತರ್ತೀನಿ ಅಂತ ಹೊರಟೆ.. ನೀನು ಹೊರಟಾಗ ನಾನು ಥ್ಯಾಂಕ್ಸ್ ಅಂದು ಕೈ ನೀಡಿದೆ. ನಿಜವಾಗಿ ನಿನಗೆ ಥ್ಯಾಂಕ್ಸ್ ಹೇಳೋ ಉದ್ದೇಶ ಇರಲಿಲ್ಲ. ಆದರೆ ಆಸೆ ಇದ್ದದ್ದು ನಿನ್ನ ಕೈ ಮುಟ್ಟಬೇಕು ಅಂತ. ಆಗ ನೀನು ನಕ್ಕೆಯಲ್ಲ ಅದಕ್ಕೇನು ಅರ್ಥ ಇತ್ತು ಗೊತ್ತಾ. ಏನಪ್ಪಾ ಈ ಹುಡುಗನಿಗೆ ನನ್ನ ಕೈ ಮುಟ್ಟೋ ಆಸೆ, ಆತುರ ಅಂತ. ನೀನು ನಿನ್ನ ಕೈ ನೀಡಿ ನನ್ನ ಕೈಯಲ್ಲಿ ಸೇರಿಸಿ ಕುಲುಕಿ ನಕ್ಕೆ. ಸಾಕಾ ಅಂತ ಕೇಳೋ ಹಾಗಿತ್ತು ಆ ನಿನ್ನ

ತುಂಟನಗುವಿನ ಭಾವ. ನಮ್ಮಪ್ಪ ಅಮ್ಮನನ್ನು ನಿಮ್ಮಪ್ಪ ಅಮ್ಮ ವಿಚಾರಿಸಿಕೊಳ್ಳುತ್ತಿದ್ದರು. ಕ್ಷಣಾರ್ಧದಲ್ಲಿ ನೀನು ಕಾಫಿ ಕಪ್ ಕೈಲಿ ಹಿಡಿದು ನನ್ನ ಮುಂದೆ ನಿಂತೆ. ಆಗ ಇನ್ನೊಂದು ತರಹ ಕಂಡೆ. ನಾನು ಕಾಫಿ ಕುಡಿದಾದ ಮೇಲೆ ಕಾಫಿ ಕೊಟ್ಟಿದ್ದಕ್ಕೆ ಥ್ಯಾಂಕ್ಸ್ ಹೇಳೋಲ್ವ ಅಂತ ಕೇಳಿದೆ. ನನಗೆ ಮೈಯೊಳಗೆಲ್ಲ ಮಿಂಚು ಸಂಚಾರವಾಗಿ ನನ್ನ ಕೈ ನೀಡಿದೆ.



ನೀನು ಮತ್ತೆ ನನ್ನ ಕೈ ಕುಲುಕಿದೆ. ನಾನು ನಿನ್ನನ್ನು ಸ್ವಲ್ಪ ತೀಟೆ ಮಾಡೋಕೆ ಇಂಥಾ ಚಂದದ ಕಾಫಿ ಮಾಡಿದ ಕೈಗೆ ಏನಾದರೂ ಬಹುಮಾನ ಕೊಡಬೇಕು ಅನಿಸ್ತಿದೆ ಅಂದೆ. ನೀನು ಕಣ್ಣರಳಿಸಿ ಹೌದಾ ಹಾಗಾದರೆ ಇರಿ ನಮ್ಮನೆ ಅಡಿಗೆ ಜಯಮ್ಮನನ್ನು ಕರೀತೀನಿ ಅಂದೆ. ನಾನು ಗಲಿಬಿಲಿಗೊಂಡೆ. ನನ್ನ ಗಲಿಬಿಲಿತನ ನಿನ್ನಲ್ಲಿ ಅದೆಷ್ಟು ನಗು ತರಿಸಿತು ಎಂದರೆ, ಅದು ನಿನ್ನ ಎಲ್ಲಾ ಹಾವಭಾವಗಳನ್ನೂ ನನಗೆ ಪರಿಚಯಿಸಿತು. ನೀನೇ ನಗು ಕಡಿಮೆ ಮಾಡಿಕೊಂಡು ಗಾಬರಿಯಾಗಬೇಡಿ, ಕಾಫಿ ಮಾಡಿದ್ದೂ, ಕೊಟ್ಟಿದ್ದೂ ಎರಡೂ ಈ ಕೈಗಳೇ, ಆದರೆ ಇವಿಕ್ಕೆ ಈಗಲೇ ಬಹುಮಾನ ಬೇಡವಂತೆ ಅಂದೆ. ಹಾಗಂದರೆ ನಾವಿಬ್ಬರೂ ಸಂಯಮದಿಂದ ಇರೋಣ ಎನ್ನೋ ಸೂಚನೆ ನಿನ್ನದು. ನನಗೆ ಯಾವ ಸೀರೆ ತಂದಿದೀರ ತೋರಿಸಿ ಅಂತ ಕೇಳಿದೆ. ನಿಶ್ಚಿತಾರ್ಥಕ್ಕೆ ತಂದಿರೋ ಸೀರೆ ನೋಡಿ ಸಣ್ಣ ಮಗುವಿನಂತೆ ತುಟಿಯೂದಿಸಿ ಓ, ಮತ್ತೆ ಹಸಿರು ಬಣ್ಣನಾ, ಅಂದೆ. ನನಗೆ ನಗು ಬಂತು. ಮತ್ತೆರಡು ಸೀರೆ ತೋರಿಸಿದೆ. ನಿನ್ನ ಕಣ್ಣುಗಳು ಅರಳಿದವು. ತೆಳು ಹಳದೀ ಬಣ್ಣದ ರೇಷ್ಮೆ ಸೀರೇನ ಭುಜದ ಮೇಲೆ ಸೆರಗಿನ ಹಾಗೆ ಹಾಕಿಕೊಂಡು ಚೆನ್ನಾಗಿದೆ ಅಲ್ವಾ ಅಂದು ನಿಲುಗುಗನ್ನಡಿಯಲ್ಲಿ ನಿನ್ನನ್ನು ನೀನೇ ನೋಡಿಕೊಂಡು, ಐ ಲೈಕ್ ಇಟ್ ಅಂತ ಉಪೇಂದ್ರನ ಸ್ಟೈಲಲ್ಲಿ ಹೇಳಿದೆ. ಹುಬ್ಬೇರಿಸಿ ನಿಮ್ಮ ಡ್ರೆಸ್ಸು ಅಂತ ಕೇಳಿದೆ. ನಾನು ಪ್ಯಾಂಟು ಷರ್ಟು ತೋರಿಸಿದಾಗ ತುಟಿಯೂದಿಸಿ, ಕತ್ತು ಕೊಂಕಿಸಿ ಸ್ವಲ್ಪನೂ ಚೆನ್ನಾಗಿಲ್ಲ ಅಂದು ಒಂದು ಕವರ್ ಕೊಟ್ಟು ಇದು ಹಾಕ್ಕೊಳಿ ಅಂದು ನೀನು ನನಗಾಗಿ ತಂದಿದ್ದ ಕುರ್ತಾ ಪೈಜಾಮ ತೋರಿಸಿದೆ. ಸ್ವಲ್ಪ ಹತ್ತಿರ ಬಂದು ಇನ್ನೇನು ನಿನ್ನ ತುಟಿಗಳು ನನ್ನ ಕಿವಿ ತಾಕಿದವು ಅನ್ನೋ ಹಾಗೆ ಇದು ನಾನು ನಿಮಗೆ ತಂದಿರೋದು, ಅಪ್ಪ ಅಮ್ಮ ಬೇರೆ ತಂದಿದಾರೆ ಅಂದೆ. ನನಗೆ ಮೈಯಲ್ಲಿ ಒಂಥರಾ ಛಳಿ ಬಂದ ಹಾಗಾಯಿತು. ನೀನು ತಂದ ಡ್ರೆಸ್ ನನಗೆ ಚೆನ್ನಾಗಿ ಕಾಣಿಸಿತು. ಥ್ಯಾಂಕ್ಸ್ ಹೇಳಲ್ವ ಅಂದು ಕಣ್ಣು ಮಿಟುಕಿಸಿ ಮತ್ತೆ ತುಂಟತನದ ನಗೆ ನಕ್ಕೆ. ನಾನು ಕೈ ನೀಡಿದೆ. ನೀನು ಮತ್ತೆ ಕೈ ಕುಲುಕಿದೆ. ನಂತರ ನೀನು

ಬಂದು ನನ್ನ ಪಕ್ಕ ಕೂತೆ. ಎದುರಿನ ಕನ್ನಡಿಯಲ್ಲಿ ನಾವಿಬ್ಬರೂ ಕಾಣುತ್ತಿದ್ದೆವು. ನಿನ್ನ ಭುಜದ ಮೇಲೆ ಹಳದೀ ಸೀರೆ ಇತ್ತು. ನಾವಿಬ್ರೂ ಹೇಗೆ ಕಾಣ್ತೇವಿ ಅಂತ ನೀನು ಕಣ್ಣರಳಿಸಿದೆ. ನಂತರ ಏನು ಮೂರು ಸೀರೆ ತಂದಿದೀರಾ ಅಂತ ಕೇಳಿದೆ. ಅದಕ್ಕೆ ನಾನು ಹಸಿರು ಸೀರೆ ಅಪ್ಪ ಅಮ್ಮನ ಸೆಲೆಕ್ಷನ್ನು, ಅವರಿಗೆ ಗೊತ್ತಾಗದ ಹಾಗೆ ತಂದಿರೋ ಈ ಎರಡು ಸೀರೆ ನನ್ನ ಸೆಲೆಕ್ಷನ್ನು ಅಂದು ನೀನು ಈ ಮೂರನ್ನೂ ಇಟ್ಕೊ ಅಂದೆ. ಅದಕ್ಕೆ ಮತ್ತೆ ನೀನು ನಗುತ್ತಾ ಹಾಗಾದರೆ ನೀವು ಒಂದು ಕೇಳಿದರೆ ಮೂರು ಮೂರು ಕೊಡೋ ದೇವರು ಅಂದೆ. ಈಗ ನಗೋ ಸರದಿ ನನ್ನದು. ಬರೀ ನಾನು ಮಾತ್ರ ಅಲ್ಲ ನೀನೂ ಅಷ್ಟೆ ನಾನು ಒಂದು ಕೇಳಿದಾಗ ನೀನು ಮೂರು ಮೂರು ಕೊಡೋ ದೇವತೆ ಆಗಬೇಕು ಅಂದೆ. ಸ್ವಲ್ಪ ನಾಚಿಕೆ ಮೂಡಿದರೂ ತೋರಿಸಿಕೊಳ್ಳದೇ ಆಹಾ, ಆಸೆ ನೋಡು ಅಂತ ನೀನು ತುಂಟತನದಲ್ಲಿ ನಕ್ಕ ಆ ನಿನ್ನ ಭಾವ ಈ ಕ್ಷಣಕ್ಕೂ ನಾನು ಮರೆತಿಲ್ಲ. ನಿನ್ನ ಮುಖದಲ್ಲಿ ಮೂಡಿದ ನಾಚಿಕೆ ನಿನ್ನ ಸೌಂದರ್ಯವನ್ನು ಹೆಚ್ಚಿಸಿತು. ನೀನು ನಿಶ್ಚಿತಾರ್ಥಕ್ಕೆ ಸಿದ್ದವಾಗೋಕೆ ಹೊರಡೋ ಮುಂಚೆ ನನ್ನ ಹತ್ತಿರ ಬಂದು ಕೆನ್ನೆ ಚಿವುಟಿ ಬಲಗಡೆ ಮೀಸೆನ ಸ್ವಲ್ಪ ಜಾಸ್ತಿ ತೆಕ್ಕೊಂಬಿಟ್ಟಿದೀರ ಅಂದು ಓಡಿದೆ. ನಿಶ್ಚಿತಾರ್ಥದ ಶಾಸ್ತ್ರ ಮನೆಯವರು ಮಾಡ್ಕೊತಿದ್ದರು. ಅವತ್ತು ನನ್ನ ಕಣ್ಣುಗಳು ನೋಡಿದ್ದು ಬರೀ ನಿನ್ನನ್ನೇ. ನಿನ್ನ ಕಣ್ಣುಗಳೂ ಅಷ್ಟೆ ನನಗೀಗ ಎಪ್ಪತ್ತು ನಿನಗೆ ಅರವತ್ತೈದು ಆದರೂ ನೆನ್ನೆ ಮೊನ್ನೆ ನನ್ನಲ್ಲಿ ಪ್ರೀತಿ ಹುಟ್ಟಿದ ಹಾಗಿದೆ. ಮಗಳ ಮನೆಗೆ ಹೋಗಿ ಕೂತುಬಿಟ್ಟಿದೀಯ. ಬೇಗ ಬಾ ಅಂತ ಈ ಪತ್ರ ಬರೀತಿದೀನಿ. ಇದನ್ನು ಓದಿದ ಮೇಲೆ ನಿನಗೂ ಪತ್ರ ಬರೀಬೇಕು ಅನಿಸುತ್ತೆ. ಬರಿ, ನಿನ್ನ ಪ್ರೇಮಪತ್ರಕ್ಕೆ ನಾನು ಕಾಯ್ತಿರ್ತೀನಿ ಹಾಗೇ, ನೀನು ಬೇಗ ಓಡೋಡಿ ಬರ್ತೀಯ ಅಂತ ನನಗೆ ಗೊತ್ತು. ನಿನ್ನ ಬರುವಿಕೆಗೂ ಕಾಯ್ತಾ ಇರ್ತೀನಿ. ಇತಿ ನಿನ್ನ ಪ್ರೀತಿಯ ಪತಿ.

❖

---

## ಐನ್‌ಸ್ಟೈನ್ ಮತ್ತು ಚಾಪೆಲ್ ನಡುವಿನ ಸಂಭಾಷಣೆ

ಐನ್‌ಸ್ಟೈನ್ – ನೀವು ಒಂದು ಪದವನ್ನೂ ಮಾತಾಡದಿದ್ದರೂ ಇಡೀ ಪ್ರಪಂಚ ನಿಮ್ಮ ಕಲೆಯನ್ನು ಅರ್ಥ ಮಾಡಿಕೊಂಡು ನಿಮ್ಮನ್ನು ಶ್ಲಾಘಿಸುತ್ತದೆ.

ಚಾಪೆಲ್ – ನಿಮ್ಮದೂ ಅಷ್ಟೆ ನೀವು ಏನು ಮಾಡುತ್ತಿದ್ದೀರಿ, ಏನು ಮಾತಾಡುತ್ತಿದ್ದೀರಿ ಎಂದು ಅರ್ಥವಾಗದಿದ್ದರೂ ಇಡೀ ಪ್ರಪಂಚವೇ ನಿಮ್ಮನ್ನು ಕೊಂಡಾಡುತ್ತದೆ, ಹೊಗಳುತ್ತದೆ

# ಮಂಗಳ ಬೇಡ, ಶನಿ ಇರಲಿ

**- ಪ್ರಶಾಂತ ಕೆ. ಅಡೂರ**

**ಸು**ಮ್ಮನ ಪೇಪರ್ ಹೆಡಲೈನ್ಸ್ ಓದ್ಕೋತ ಕೂತಿದ್ದ ನನ್ನ ಹೆಂಡತಿ ಒಮ್ಮಿಂದೊಮ್ಮಿಲೆ ''ರ್ರಿ, ನಂಗೂ ಮಂಗಳ ಗ್ರಹಕ್ಕೆ ಕರಕೊಂಡ ಹೋಗರಿ'' ಅಂದ್ಲು. ನಂಗ ಒಮ್ಮಿಕ್ಕಲೇ ನನ್ನ ಬುಡಕಿನ ಭೂಮಿ ಗ್ರಾವಿಟೇಶನಲ್ ಫೋರ್ಸ್ ಕಳಕೊಂಡಂಗ ಆಗಿ ಜೋಲಿ ಹೋಗಲಿಕತ್ತ. ''ಲೇ, ಹುಚ್ಚಿ ಅದು ಮಂಗಳ ಗ್ರಹ, ನಿನ್ನ ಗೃಹಶೋಭಾ, ಗೃಹಲಕ್ಷ್ಮಿ ಎಕ್ಸಿಬಿಶನ್ ಅಲ್ಲಾ, ಏನೇನರ ಮಾತಾಡ್ತಿಯಲಾ'' ಅಂತ ನಾ ಅಂದರ.

''ನೀವು ಹೋಗರಿ ಬಿಡ್ರಿ ನಾ ಅಂತೂ ಹೋಗೋಕಿ, ನಂದೂರ ಟಿಕೇಟ ಮಾಡಸರಿ'' ಅಂದ್ಲು ಹೆಂಡ್ತಿ.

''ಅಯ್ಯ, ನಂಗ ಗೊತ್ತರಿ. ಇಲ್ಲೇ ನೋಡ್ರಿ, ಮಂಗಳ ಗ್ರಹಕ್ಕೆ ಹೋಗೊರದ ರಿಜೆಸ್ಟ್ರೇಶನ್ ಮಾಡಸಲಿಕತ್ತಾರ, ನಂಬದು ಮಾಡಸರಿ'' ಅಂತ ಪೇಪರ ತೋರಿಸಿದ್ಲು. ಆ ಪೇಪರನಾಗ 'ಒನ್ ವೇ ಟ್ರಿಪ್ ಟು ಮಂಗಳ ಗ್ರಹ 2023' ಅಂತ ಒಂದು ದೊಡ್ಡ ಆರ್ಟಿಕಲ್ ಬಂದಿತ್ತ.

ಅಲ್ಲಾ, ನಾ ಎಲ್ಲೆ ಮಂಗಳ ಗ್ರಹಕ್ಕೆ ಹೊಂಟೇನಿ ಇಕಿನ್ನ ಜೊತಿಗೆ ಕರಕೊಂಡ ಹೋಗಲಿಕ್ಕೆ, ಏನೋ ಸಂಸಾರದಾಗ ಬ್ಯಾಸರಾದಾಗೊಮ್ಮೆ 'ಸಾಕಪ್ಪಾ ಜೀವನಾ, ದೇವರ ಈ ಭೂಮಿ ಮ್ಯಾಲೆ ಇನ್ನ ಇರಬಾರದು' ಅಂತಿರ್ತೇನಿ ಅಂತ ನಾ ಎಲ್ಲೋ ಖರೇನ ಭೂಮಿ ಬಿಟ್ಟ ಮಂಗಳ ಗ್ರಹಕ್ಕೆ ಹೋಗ್ತೇನಿ ಅಂತ ತಿಳ್ಕೊಂಡ್ತೋ ಏನೋ ಈ ಖೋಡಿ ಅಂತ ನಾ ಅಕಿಗೆ... (ಮಂಗಳ ಸುತ್ತುಗದೆಡೆ ಚಿಮ್ಮಿದ ಇಸ್ರೋದ ಬಾನಬಂಡಿ).

''ಅಲ್ಲಲೇ... ನಾನೂ ಹೊಂಟಿಲ್ಲಾ ಇನ್ನ ನಿಂಗೇನ ತಲಿ ಕರಕೊಂಡ ಹೋಗ್ಲಿ'' ಅಂದೆ. ಅದಕ್ಕ ಅಕಿ ''ನೀವು ಹೋಗರಿ ಬಿಡ್ರಿ ನಾ ಅಂತೂ ಹೋಗೋಕಿ, ನಂದೂರ ಟಿಕೇಟ ಮಾಡಸರಿ'' ಅಂದ್ಲು. ಏನ್ಮಾಡ್ತಿರಿ? ನಾ ಅಕಿಗೆ ಮಾತ ಮಾತಿಗೆ 'ನೀ ಭೂಮಿಗೆ ಭಾರ ಆಗಿ ನೋಡ' ಅನ್ನೊದನ್ನ ಬಾಳ ಸಿರಿಯಸ್ ತೊಗೊಂಡಿರಬೇಕು ಅನಸಲಿಕತ್ತ.

ಅಲ್ಲಾ ಈ ವಿಜ್ಞಾನಿಗಳಿಗೆ ಬ್ಯಾರೆ ಏನ ಕೆಲಸ ಇಲ್ಲೇನ್ ಅಂತೇನಿ, ನಮಗ ಛಂದಾಗಿ ಭೂಮಿ ಮ್ಯಾಲೆ ಬದಕಲಿಕ್ಕೆ ಆಗವಲ್ತು, ಹಂತಾದರಾಗ ಇವರ ಮಂಗಳ ಗ್ರಹದಾಗ ಸೆಟ್ಲ್ ಮಾಡೋ ವಿಚಾರ ಮಾಡಲಿಕತ್ತಾರ. ಅದೇನೋ ಮಾರ್ಸ್ ಒನ್ ಪ್ರೊಜೆಕ್ಟ್ ಅಂತ. ಒನ್ ವೇ ಟ್ರಿಪ್ ಟು ಮಂಗಳ ಗ್ರಹ ಅಂತ. ಜಗತ್ತಿನಾಗ ಈಗಾಗಲೇ ಎರಡ ಲಕ್ಷ ಮಂದಿ ರೆಜಿಸ್ಟರ್ ಮಾಡ್ಯಾರ ಅಂತ. ಅದರಾಗ ನಮ್ಮ ದೇಶದವರ ಒಂದ ಇಪ್ಪತ್ತ ಸಾವಿರ ಜನಾ ಇದ್ದಾರಂತ. ಅಲ್ಲಾ ಹಂಗ ನಮ್ಮ ದೇಶದ ಇಪ್ಪತ್ತ ಸಾವಿರ ಮಂದಿ ಒಳಗ 16789 ಗಂಡಂದರ ಇದ್ದಾರಂತ.

ಹೆಂಡ್ತಿ ಕಾಟಾ ತಪ್ಪಿಸಿಕೊಂಡ ಭೂಮಿ ಬಿಟ್ಟು ಮಂಗಳ ಗ್ರಹಕ್ಕೆ ಹೋಗಿ ಸೆಟ್ಲ್ ಆಗಲಿಕ್ಕೆ. ಅಲ್ಲಾ ಹಂಗ ನಾ ಏನರ ಹೋಗೊದ ಇತ್ತಂದರ ಇಕಿನ್ಯಾಕ ಕರಕೊಂಡ ಹೋಗತಿದ್ದೆ ಮಾರಾಯರ, ಇಲ್ಲೇ ಭೂಮಿ ಮ್ಯಾಲೆ ಇಕಿ ಕೈಯಾಗ ಸಿಕ್ಕ ಅನುಭವಿಸಿದ್ದ ಸಾಕಾಗಿಲ್ಲಾ? ಇನ್ನ ಮಂಗಳ ಗ್ರಹಕ್ಕ ಶನಿ ಕಟಗೊಂಡ ಹೋಗಲ್ಯಾ?

ನಾ ಅಕಿಗೆ ರಮಿಸಿ ತಿಳಿಸಿ ಹೇಳಿದರಾತು ಅಂದು ''ನೋಡಿಲ್ಲೆ, ನಾ ಮುಂದ ಏಳೇಳ ಜನ್ಮಕ್ಕು ನೀನ ನನ್ನ ಹೆಂಡತಿ ಆಗಬೇಕು ಅಂತ ಹೋದ ವರ್ಷ ನವರಾತ್ರಿ ಒಳಗ ಬನಶಂಕರಿಗೆ ಹೋದಾಗ ಬೇಡ್ಕೊಂಡೇನಿ, ಇನ್ನ ನೀ ಮಾರ್ಸದಾಗ ಹೋಗಿ ಸೆಟ್ಲ್ ಆದರ ನಾ ಮುಂದಿನ ಜನ್ಮದಾಗ ಬ್ಯಾರೆಕಿನ್ನ ಲಗ್ನಾ ಮಾಡ್ಕೊಬೇಕಾಗ್ತದ, ನೋಡ ಏನ ಮಾಡ್ತಿ'' ಅಂದೆ.

''ಏ, ಹಂಗರ ನಾ ಮೊದ್ಲ ಹೋಗ್ತೇನಿ, ಹೆಂಗಿದ್ದರು ಮಾರ್ಸದಾಗ ಪುನರ್ಜನ್ಮ ಇಲ್ಲ, ಅದೇನಿದ್ದರು ಈ ಸುಡಗಾಡ ಭೂಮಿ ಮ್ಯಾಲೆ ಇಷ್ಟ, ನಿಮ್ಮನ್ಯಾರ ಏಳೇಳ ಜನ್ಮಕ್ಕ ಕಟಗೊಂಡ ಅನುಭವಸಬೇಕು'' ಅಂತ ರೆಡಿ ಆಗೇ ಬಿಟ್ಟಳು. ಹಂಗ ನಾನು ಹೋದರ ಹೋಗಲಿ ಬಿಡ ಶನಿ, ಮಂಗಳಕ್ಕ ನಾ ಇಲ್ಲೆ ಭೂಮಿ ಮ್ಯಾಲೆ ಆರಾಮ ಇದ್ದಾರತು ಅಂತ ವಿಚಾರ ಮಾಡಿದೆ.

ಅಲ್ಲಾ ಹಂಗ ಒಮ್ಮೆ ಅಕಿ ಹೋದ್ಲ ಅಂದರ ಮತ್ತ ವಾಪಸಂತೂ ಬರಂಗಿಲ್ಲಾ, ನಾನು ಪೀಡಾ ಹೋತ ಅಂತ ಸಮಾಧಾನದಿಂದ ಇರಬಹುದು. ಅದು ಈ ಜನ್ಮಕ್ಕ ಇಷ್ಟ ಅಲ್ಲಾ ಮುಂದಿನ ಏಳೇಳ ಜನ್ಮಕ್ಕೂ ಮತ್ತ. ಯಾಕಂದರ ಇಕಿ ಒಮ್ಮೆ ಮಂಗಳ ಗ್ರಹಕ್ಕ ಹೋಗಿ ಮುಕ್ತಿ ಹೊಂದಿದ್ಲಂದರ ಮುಂದಿನ ಜನ್ಮದಾಗ ಅಕಿ ಭೂಮಿ ಮ್ಯಾಲೆ ಎಲ್ಲೆ ಹುಟ್ಟತಾಳ ತಲಿ. ಆದರ ಅಕಿನ್ನ ಮಂಗಳ ಗ್ರಹಕ್ಕ ಕಳಸಬೇಕಂದರ 50 ಲಕ್ಷ ಬೇಕ ಅಂದರು... ಅಯ್ಯ್... ಅಷ್ಟ ರೊಕ್ಕ ನನ್ನ ಕಡೆ ಇದ್ದರ ಇಷ್ಟ್ಯಾಕ ಆಗತಿತ್ತು. ಮ್ಯಾಲೆ ನನ್ನ ಕಡೆ ಅಷ್ಟ ಅದ ಅಂತ ಗೊತ್ತಾದರ ನನ್ನ ಹೆಂಡತಿನರ ಯಾಕ ನನ್ನ ಬಿಟ್ಟ ಮಂಗಳಕ್ಕೆ ಹೋಗೊ ವಿಚಾರ ಮಾಡ್ತಿದ್ಲು ಅಂತ ಅನ್ಕೊಂಡ ಅಕಿಗೆ...

''ಇಲ್ಲಾ, ಹಂಗ ನಂಗೇನ ನಿನ್ನ ಮಂಗಳ ಗ್ರಹಕ್ಕ ಕಳಸಬಾರದಂತ ಇಲ್ಲಾ, ಆದರ ನನ್ನ ಕಡೆ ಸದ್ಯೇಕ ಅಷ್ಟ ರೊಕ್ಕ ಇಲ್ಲಾ. ಅದಕ್ಕ ಈಗ ರೊಕ್ಕ ಕೂಡಿಸಿ ಇಟಗೋತೇನಿ, ಇನ್ನೊಂದ ಹತ್ತ-ಇಪ್ಪತ್ತ ವರ್ಷಕ್ಕ ಮತ್ತ ಯಾರರ ಶನಿ ಗ್ರಹಕ್ಕೆ ಕರಕೊಂಡ ಹೋಗೊರ ಸಿಗತಾರ, ಅಲ್ಲೇ ಹೋಗಲಿಕ್ಕೆ ನಿಂಗ ಕನ್ಸೆಶನ್ ಸಿಕ್ಕರು ಸಿಗಬಹುದು'' ಅಂತ ತಿಳಿಸಿ ಹೇಳಿ ಸಮಾಧಾನ ಮಾಡೋದರಾಗ ನಂಗ ರಗಡ ಆತ....


ಅನ್ನಂಗ ಯಾರರ ಶನಿ ಗ್ರಹಕ್ಕೆ ಕರಕೊಂಡ ಹೋಗೊರಿದ್ದರ ಹೇಳ್ರಿಪಾ ಮತ್ತ, ನಮ್ಮ ಮನೇಯವರು ಬರ್ತಾರ ಅಂತ. ಅದಕ್ಕ ಬೇಕಾದಷ್ಟ ರೊಕ್ಕ ಆಗಲಿ, ಕಿಡ್ನಿ ಒತ್ತಿ ಇಟ್ಟಾದರು ಅಡ್ಡಿಯಿಲ್ಲಾ ನನ್ನ ಹೆಂಡತಿನ್ನ ಶನಿ ಗ್ರಹಕ್ಕ ಕಳಸ್ತೇನಿ ಮತ್ತೆ.

*ಸೌಜನ್ಯ: ಒನ್ ಇಂಡಿಯಾ*

❖

# ಕೊರವಂಜಿ ಪದಬಂಧ – 4

- ವಿದ್ಯಾ ವಿ. ಹಾಲಭಾವಿ




**ಎಡದಿಂದ ಬಲಕ್ಕೆ**

1. ಅಯ್ಯೋ ಇದು ಕಷ್ಟವೇ ಅಲ್ಲ (3)
3. ನರಕಾಧಿಪತಿ ಕೊಟ್ಟ ಸಹಿಸಲಾರದ ನೋವು (5)
5. ಆಕಳ ಮರಿಯ ಮೇಲೇಕೆ ಇಷ್ಟು ದಯೆ? (3)
6. ಹೆಣವನ್ನು ಹೂತಿರುವ ಗೋರಿ (2)
8. ಸರ ಹಿಡಿದ ವರ ನೋಡಿದ ಕೊಳ (4)
9. ಅತ್ತೆಯ ಗಂಡನೇ ಆನೆಯನ್ನು ಹತೋಟಿಯಲ್ಲಿರಿಸಿದ್ದಾನಲ್ಲಾ (4)
11. ಸರದ ಜೊತೆ ತಂದ ಸಾಮಾನು (3)
14. ದರ ಹೇಳಿದ್ದಕ್ಕೇ ಇಷ್ಟು ಸಲಿಗೆಯೇ? (3)
15. ಇದು ನೆತ್ತರಿನ ಹರಿದಾಟ (5)
16. ತುಸು ಕನಸು ಬೀಳುತ್ತಿರುವಾಗಲೇ ಆಯಿತು ಬೆಳಗಿನ ಜಾವ (3)

**ಮೇಲಿಂದ ಕೆಳಕ್ಕೆ**

2. ಭವನದೊಳಗಿದ್ದರೆ ಇದೇ ತೊಂದರೆ (3)
3. ಮನುಷ್ಯನಿಗೆ ಸಂಬಂಧಪಟ್ಟಿದ್ದು ಉಲ್ಟಾ ಆಗಿದೆ (4)
4. ಗಡಿಯ ಬಳಿ ತಲೆದೋರಿದ ಶೀತ (3)
5. ಕಳ್ಳ ಕದ್ದಿದ್ದು, ದೇವಾಲಯದ ಮೇಲಿನ ಗೋಪುರದ ತುದಿ (3)
6. ವಿರಸದ ವಿರುದ್ಧ ಪದ (3)
7. ಸೊಕ್ಕು ಹೀಗೆ ಬಂದಿದೆ (3)
10. ಛಿ! ಟಾರ ರಸ್ತೆಯ ಪಕ್ಕದಲ್ಲೇ ಮೋರಿ ಇದೆ (3)
12. ಸೂಟಿಯಿರುವ ಈ ದಿನವೆಂದರೆ ಎಲ್ಲರಿಗೂ ಇಷ್ಟ (4)
13. ಹೆಂಡತಿಯನ್ನು ಕಳೆದುಕೊಂಡ ಪುಣ್ಯವಂತ! (3)
14. ಮಾನ ಇಲ್ಲದವನಿಗೇ ಈ ಮನ್ನಣೆಯೇ! (3)

*(ಉತ್ತರಕ್ಕೆ 25ನೇ ಪುಟ ನೋಡಿ)*

# ಆಟೋ ಫೇರ್ ಗ್ರಾಫ್

**- ರಮ್ಯ**

**ಬ**ಸವನಗುಡಿಯಿಂದ ಮಲ್ಲೇಶ್ವರಂಗೆ ಯಾವಾಗಲೂ ಬಿಎಂಟಿಸಿ ಬಸ್ಸಿನಲ್ಲೇ ನನ್ನ ಪ್ರಯಾಣ. ಬೆಳಿಗ್ಗೆ ತಿಂಡಿ ತಿಂದು ಬಸ್ಸು ಹತ್ತಿದರೆ ಒಂದು ತಾಸು ಪ್ರವಾಸ; ದಾರಿಯಲ್ಲಿ ಸುಖವಾದ ನಿದ್ದೆ. ಮುಂದೆ ಬನ್ರಿ, ನಿಮಗೇ ಹೇಳ್ತಿರೋದು, ಐದು ರೂಪಾಯಿ ಟಿಕೆಟ್ಗೆ ಐನೂರು ರೂಪಾಯಿ ಕೊಡ್ತೀರಾ, ಯಾಕೆ, ಸಾವಿರದ ನೋಟ್ ಇಲ್ವಾ..? ಪಾಸ್ ಕೈಲೇ ಹಿಡ್ಕೊಂಡಿರ್ಬೇಕು; ನಿಮಗೇ ಹೇಳ್ತಿರೋದು.. ಸೀನಿಯರ್ ಸಿಟಿಜ಼ನ್ ಆದ್ರೇನು ಕೈ ಇಲ್ವಾ.... ಕಂಡಕ್ಟರ್ನ ಈ ತರಹ ಕೂಗು ದಾರಿ ಉದ್ದಕ್ಕೂ ಇದ್ದೇ ಇರುತ್ತೆ... ಇದು ಇದ್ರೇನೆ ನಿದ್ದೆ ಚೆನ್ನಾಗಿ ಬರೋದು, ಜೊಂಪಿಗೆ ಜೋಗುಳ, ತಾಳ ಹಾಕಿದ ಹಾಗೆ..

**ತಿರುಗುತ್ತಿದ್ದುದು ಮೀಟರ್ರೋ ಅಥವಾ ಚಕ್ರವೋ?**

ಅವತ್ತು ಬಸ್ ಮಿಸ್ಸಾಯ್ತು.. ಥೂ ಹಾಳಾದ್ದು. ಬೆಳಗ್ಗೆಯಿಂದ ಯಾವ್ದೂ ಸರಿಯಿಲ್ಲ. ಎದ್ದಾಗ್ಲೇ ಲೇಟು. ಹೆಂಡ್ತಿ ಹಾಲು ಉಕ್ಸೋದಿಂದ ಹಿಡಿದು ಬ್ರೆಡ್ನ ಟೋಸ್ಟ್ನ ಕರಿ ಸ್ಲ್ಯಾಬಾಗಿ ಸುಟ್ಟಿದ್ಲು. ಶೂ ಹಾಕೋಳಕ್ಕೆ ಹೋದ್ರೆ ಕಾಲಿಗೆ ಬೇರೆ ಬೇರೆ ಬಣ್ಣದ್ದು ಸಾಕ್ಸ್ ಹಾಕೊಂಡಿದೀನಿ!

ಈ ರಾಮಾಯಣಾ ಎಲ್ಲಾ ಮುಗಿಸಿ ಸ್ಟಾಪ್ಗೆ ಓಡಿ ಬರೋವಷ್ಟರಲ್ಲಿ ನನ್ನ ಬಸ್ ಕಣ್ಮುಂದೇನೆ ಹೋಯ್ತು. ನೆಕ್ಸ್ಟ್ ಬಸ್ ಇನ್ನು ಅರ್ಧ ಘಂಟೆ ಆದ್ಮೇಲೇನೆ. ಈ ವಾರ ತಿರುಗಿ ಲೇಟಾಗಿ ಹೋದ್ರೆ ಮುಂಗುಸಿ ಬಾಸ್ ದುರುಗುಟ್ಕೊಂಡು ನೋಡ್ತಾನೆ. ಸ್ಟಾಫ್ ಮುಂದೆ ಅವಮಾನ. ಅದ್ರ ಮೇಲೆ ಅರ್ಧ ಘಂಟೆ ಲೆಕ್ಚರ್. ಸರಿ, ಇನ್ನೇನು, ಆಟೋನೇ ಗತಿ. ದುಡ್ಡು ಕಕ್ಕಿದ್ರೂ ಆರಾಮವಾಗಿ ಹೋಗ್ಬಹುದು ಒಂದು ದಿನ. ಏನಾಶ್ಚರ್ಯ? ಕೈ ತೋರ್ಸಿ ಕೇಳ್ತಿದ್ದ ಕ್ಷಣ ಒಪ್ಕೊಂಡನಲ್ಲ ಆಟೋ ಡ್ರೈವರ್, ಇದು ಬೆಂಗಳೂರು ತಾನೆ?

ಮೀಟರ್ ಹಾಕಿದೀನಿ ನೋಡಿ ಸಾರ್ ಅಂದ. ಇದು ಕನಸಾ ಏನು?

ಆಟೋ ಏರಿ ಕುಳಿತ ಮೇಲೆ ಒಳಗೆ ನೋಡಿದೆ. ಬಹಳ ಚೆನ್ನಾಗಿ ಅಲಂಕಾರ ಮಾಡಿರೋ ಆಟೊ. ಮ್ಯಾಗಝೀನ್, ಮ್ಯೂಸಿಕ್ ಸಿಸ್ಟಮ್, ಫ್ಯಾನ್. ಆಟೋದವರ ಹತ್ತಿರ ಹ್ಯಾನ್ಡ್ಸ್ – ಫ್ರೀ ಮೊಬೈಲ್ನಲ್ಲಿ ದಾರಿ ಉದ್ದಕ್ಕೂ ಒಂದೇ ಸಮನೆ ಅವನ ಚ್ಯಾಟ್.

ಸಿಟಿ ಮಾರ್ಕೆಟ್ಗೆ ಬಂದಾಗ ಆಟೋ ಡ್ರೈವರ್, ‘ಸಾರ್! ನಿಮ್ಮ ಫೇರ್ ಮೀಟರ್ಗೆ ಒಂದೂವರೆ ಅಷ್ಟು ಕೊಡ್ಬೇಕು.’

‘ಯಾಕೆ? ಹೊಸಾ ರೇಟು ಹೋದ ತಿಂಗಳೇ ಫಿಕ್ಸ್ ಆಯ್ತಲ್ಲಾ....’

‘ಅದಲ್ಲಾ ಸಾರ್. ಇದೀಗ ವೀರಪ್ಪ ಮೊಯ್ಲಿ ವಿತ್ ಇಮೀಡಿಯೆಟ್ ಎಫೆಕ್ಟ್ ಲೀಟರ್ಗೆ

ರೂ. 1.50 ಜಾಸ್ತಿ ಮಾಡಿದಾರಂತೆ. ಆಟೋ ಯೂನಿಯನ್ ಸೆಕ್ರೆಟರಿ ಎಲ್ಲಾರಿಗೂ ಫೋನ್ ಮಾಡಿ ತಿಳಿಸ್ತಾ ಇದಾನೆ... ಹೊಸಾ ರೇಟ್ ಪ್ರಕಾರ ಎಕ್ಸ್ಟ್ರಾ ಆಗುತ್ತೆ.'

ಆನ್ಲೈನ್ ಶಾಕ್.

ಅವೆನ್ಯೂ ರೋಡ್‌ನಲ್ಲಿ ಟ್ರಾಫಿಕ್ ಬರೀ ಮೂರು ಸ್ಕೂಟರ್ ಹೋಗೋದಕ್ಕೆ ಸರಿ. ಅಲ್ಲಿ ಕಾರು, ತಳ್ಳೋ ಗಾಡಿ, ಕಣಿ ಹೇಳೋ ದಾಸಯ್ಯ, ಕೋಲೇಬಸವ, ಬುಟ್ಟಿಯಿಂದ ಇಳಿದು ಮಾರ್ನಿಂಗ್ ವಾಕಿಂಗ್ ಬಂದ ದೊಂಬಿ ಕೋಳಿಗಳು; ಅದರ ಮಧ್ಯೆ ನುಸುಳಿಕೊಂಡು ಹೋಗುವ ನಮ್ಮ ಆಟೋ ಮೆಜಸ್ಟಿಕ್ ಸೇರೋಷ್ಟರಲ್ಲಿ ಆವಾಗ್ಲೆ ಒಂಬತ್ತೂವರೆ. ಆಫೀಸ್ ಇವತ್ತು ಹತ್ತು ಘಂಟೆಗೆ ಸೇರಿದ ಹಾಗೆ ಇದೆ.

ಟ್ರಿಂ ಟ್ರಿಂ...... ಡ್ರೈವರ್ ಮೊಬೈಲ್ಗೆ ಎಸ್ಸೆಮೆಸ್ ಮೆಸೇಜ್. ದಾರೀಗೆ ಅಡ್ಡಾ ಬರೋ ಎಮ್ಮೆ ಮೇಲೆ ಒಂದ್ಕಣ್ಣಿಟ್ಟು ಹಾಗೇ ಮೆಸೇಜ್ ಓದ್ದ. 'ಸಾರಿ ಸಾರ್! ಇವತ್ತು ನಿಮ್ಮ ಅದೃಷ್ಟ ಚೆನ್ನಾಗಿಲ್ಲಾಂತ ಅನ್ಸುತ್ತೆ. ಇನ್ನು ಇಪ್ಪತ್ತು ರೂಪಾಯಿ ಜಾಸ್ತಿ ಕೊಡಬೇಕಾಗುತ್ತೆ. ಚಿದಂಬರಂ ಎಕ್ಸೈಝ್ ಡ್ಯೂಟಿ ಹೆಚ್ಚು ಮಾಡಿದ್ದಾರೆ. ಬೇಕಾದ್ರೆ ನ್ಯೂಸ್ ಕೇಳಿ.' ಸುಬ್ರಮಣ್ಯ ಭಾರತಿ, ತಿರುವಳ್ಳುವರ್ ಅವರ ಶ್ಲೋಕ ಹೇಳ್ತಾ, ಎಕ್ಸೈಝ್ ಡ್ಯೂಟಿ ಜಾಸ್ತಿ ಮಾಡ್ತಿನಿ ಅಂದ್ರು ಚಿದಂಬರಂ. ಇದರಿಂದ ಭಾರತದ ಆರ್ಥಿಕ ಸ್ಥಿತಿ ಮುಂದೆ ನಾಗಾಲೋಟದಿಂದ ಓಡುತ್ತೆ ಅಂತ ಉಡಾಫೆ ಹೊಡೀತಿದ್ರು.

ನಾವು ಮೆಜಸ್ಟಿಕ್‌ನ ಮೈಸೂರು ಸ್ಟೇಟ್ ಬ್ಯಾಂಕ್ಗೆ ಬಂದಾಗ ಟ್ರಾಫಿಕ್ ಜಾಮ್. ಏನೆಂದು ವಿಚಾರಿಸಿದಾಗ, ಆನಂದ ರಾವ್ ಸರ್ಕಲ್ ಹತ್ತಿರ ಅಹಿಂದ ಮತ್ತು ಆಮ್ ಆದ್ಮಿ ಪಾರ್ಟಿಯವರ ಲಟಾಪಟಿ, ಪೊಲೀಸರಿಂದ ಲಾಠಿ ಚಾರ್ಜ್ ಅಂತ ನ್ಯೂಸ್ ಬಂತು. ಟ್ರಾಫಿಕ್‌ನ ವಿಧಾನ ಸೌಧದಕಡೆ ತಿರುಗಿಸಿದ್ದರು. 'ಸಾರ್! ನಿಮಗೆ ಬೆಳಿಗ್ಗೆಯಿಂದ ಒಂದಲ್ಲ ಒಂದು ಶಾಕ್ ಆಗಿದೆ. ಎಫೆಮ್ ಹಾಕ್ತೀನಿ.. ಮುಂಗಾರು ಮಳೆ ಹಾಡು ಬರ್ತಿದೆ.. ಹಾಯಾಗಿ ಕೇಳಿ' ಅಂದ. ನಾವು ಹನುಮಂತಯ್ಯನವರ ಗುಡಿ – ವಿಧಾನ ಸೌಧದ – ಹತ್ತಿರ ಬರುತ್ತಲೇ ಪ್ರಾದೇಶಿಕ ವಾರ್ತೆಗಳು ಶುರುವಾಯಿತು. ಪೆಟ್ರೋಲ್ ದರ ಮತ್ತೆ ಏರಿಕೆ ಅಂತ ಹೆಡ್ಲೈನ್ಸ್ ಬಂತು. ಮೊಯ್ಲಿ, ಚಿದಂಬರಂ ಅವರ ಟ್ಯಾಕ್ಸಿನ ಮೇಲೆ ರಾಜ್ಯದ ಹಣಕಾಸಿನ ಹಾಗೂ ಮುಖ್ಯ ಮಂತ್ರಿ ಸಿದ್ದರಾಮಯ್ಯನವರು ಸ್ಟೇಟ್ ಟ್ಯಾಕ್ಸ್ 5% ಹೆಚ್ಚಿಸಿದ್ದರು. 'ನಿಮ್ಮ ಫೇರ್ ಇನ್ನು ಹದಿನೈದು ರೂಪಾಯಿ ಹೆಚ್ಚುತ್ತೆ' ಅಂದ ಆಟೋ ರಾಜ. ಹೀಗೇ ಹೋದ್ರೆ ನನ್ನ ಪರ್ಸನ್ನೇ ಅವನ ಕೈಗೆ ಕೊಟ್ಟು ಹೋಗಬೇಕೇನೋ; ಅದಕ್ಕೂ ಅವನು ಒಪ್ಪದಿದ್ದರೆ ಏನು ಮಾಡೋದು? ಷರ್ಟು, ಪ್ಯಾಂಟು ಮುಟ್ಟಿ ನೋಡ್ಕೊಂಡೆ.........

ಅಂತೂ ಇಂತೂ ಮಲ್ಲೇಶ್ವರಂ ಸರ್ಕಲ್‌ಗೆ ಬಂದ್ವಿ. ಅದು ಐದನೇ ಕ್ರಾಸು। ನಮ್ಮ ಆಫೀಸು ಇರೋದು 18ನೇ ಕ್ರಾಸ್‌ನಲ್ಲಿ, 13ನೇ ಕ್ರಾಸಿನಲ್ಲಿದ್ದಾಗ ಮತ್ತೆ ಟ್ರಿಂ ಟ್ರಿಂ ಎಸ್ಸೆಮೆಸ್. ಅವನು ಅದು ನೋಡುವಷ್ಟರಲ್ಲಿ ಅವನ ಮೊಬೈಲ್‌ನಲ್ಲಿ 'ನಿನ್ನಿಂದಲೇ' ಹಾಡು ಟ್ಯೂ ಗುಟ್ಟುತು. ಫೋನ್‌ನಲ್ಲಿ ಮಾತನಾಡುತ್ತಾ, ಅಯ್ಯೋ! ಹೌದಾ, ನಿಜಾನಾ! ಅಂತ ಹೌಹಾರಿದ.

ಏನಪ್ಪಾ, ಏನಾಯಿತು ಅಂದೆ. 'ನಿಜವಾಗಿಯೂ ನಿಮಗೆ ಲಕ್ ಇಲ್ಲ ಸಾರ್. ನೀವು ನನ್ನ ಆಟೋದಿಂದ ಇಳಿದರೆ ನಮ್ಮಿಬ್ಬರಿಗೂ ಕ್ಷೇಮ. ನೀವು ಕೂತಾಗಿನಿಂದ ಫೇರ್ ಜಾಸ್ತಿ ಆಗ್ತಿದೆ ಅಂತ ಖುಷಿಯಾಗಿದ್ದೆ. ಅತಿಯಾಸೆ ಗತಿ ಕೆಡಿಸ್ತೂಂತ ಏನಾದ್ರೂ ಆಕ್ಸಿಡೆಂಟ್ ಆಗ್ಬಾರ್ದು. ಆಟೋ ತೊಗೋಳಕ್ಕೆ ಮೈ ತುಂಬಾ ಸಾಲ ಮಾಡೀದೀನಿ... ಈಗ ಬಂದ ಸುದ್ದಿ ಪ್ರಕಾರ, ಒಪೆಕ್‌ನವರು ಪೆಟ್ರೋಲ್ ಬ್ಯಾರೆಲ್ಲ ಬೆಲೆ 5 ಡಾಲರ್ ಹೆಚ್ಚಿಸಿದ್ದಾರೆಂದು ವರದಿ ಬರ್ತಾ ಇದೆ. ಇದು ಬಿಬಿಸಿಯಿಂದ ಬಂದ ಬಿಸಿ ಬಿಸಿ ಸುದ್ದಿ. ಇದರ ಮೇಲೆ ಮೊಯ್ಲಿಯ ಕುಯ್ಲು, ಚಿದಂಬರಂರ ಟ್ಯಾಕ್ಸ್ ಬಾಂಬು, ಸಿದ್ದು ಗುದ್ದು ಬಿದ್ದೇ ಬೀಳುತ್ತೆ. ನೀವು ಮೀಟರ್ ಮೇಲೆ 50 ರೂಪಾಯಿ ಕೊಡಬೇಕು. ಅದರ ಮೇಲೆ ನಿಮ್ಮ ಖುಶಿ. ದಯವಿಟ್ಟು ನೀವು ಇಲ್ಲೇ ಇಳಿದು ಬಿಡಿ. ಇನ್ನೈದು ಕ್ರಾಸಷ್ಟೇ 18ನೇ ಕ್ರಾಸು. ಹತ್ತು ರೂಪಾಯಿ ಕಡಿಮೆ ಕೊಡಿ ಪರವಾಗಿಲ್ಲ... ಇಬ್ಬರೂ ಸೇಫಾಗಿ ಮನೆ ಸೇರೋಣ. ಒಟ್ಟು 250 ಆಯ್ತು. 300 ಕೊಟ್ರಾ?... ಬೆಳಿಗ್ಗೆ ಬೆಳಿಗ್ಗೆ ನೂರಕ್ಕೆ ಚಿಲ್ರೆ ಎಲ್ಲಿಂದ ತರ್ಲಿ? ನಿಮ್ಮ ಖುಶಿ ಅಂದ್ನಲ್ಲಾ...'

---

## ಪೊರಕೆ

ದೇಶದ ಕಸ ಗುಡಿಸಲು
ಸಿಕ್ಕಿತ್ತೊಂದು ಹೊಸಾ ಪೊರಕೆ
ಜನ ಆಶಾವಾದಿಗಳಾಗಿದ್ದರು
ಗುಡಿಸಿಯೇ ಬಿಡುತ್ತದೆ ಇಡೀ
ದೇಶದ ಕೊಳಕನ್ನು ಎಂದು
ಗುಡಿಸಲು ಹೊರಟ ಪೊರಕೆ
ಗೊತ್ತುಗುರಿಯಿಲ್ಲದೇ
ಕಾಲೆಡವಿ ಬಿದ್ದು ತಾನೇ
ಹೊರಟಿತು ಹೊರಕ್ಕೆ

## ಪದಬಂಧದ ಉತ್ತರ

**ಎಡದಿಂದ ಬಲಕ್ಕೆ**

1. ಸುಲಭ 3. ಯಮಯಾತನೆ 5. ಕರುಣೆ 6. ಸಮಾಧಿ 8. ಸರೋವರ 9. ಮಾವಟಿಗ 11. ಸರಕು 14. ಸದರ 15. ರಕ್ತಸಂಚಾರ 16. ನಸುಕು

**ಮೇಲಿಂದ ಕೆಳಕ್ಕೆ**

2. ಭವಣೆ 3. ಯವೀನಮಾ 4. ನೆಗಡಿ 5. ಕಳಸ 6. ಸರಸ 7. ಧಿಮಾಕು 10. ಗಟಾರ 12. ರವಿವಾರ 13. ವಿಧುರ 14. ಸನ್ಮಾನ

# ಮೂಗು

**– ಜಿ.ಬಿ. ಕೋಟೆ ಅನಂತ**

**ಕಿ**ವಿ ಕೊಂಚ ಕೇಳೋದು ಕಡಿಮೆ ಆದರೆ ಕಿವಿ ಮಂದ ಅಂತಾರೆ. ಹಾಗೇ ಕಿವಿ ಚುರುಕಾಗಿದ್ದರೆ ಹಾವಿನ ಕಿವಿ, ಮಾರು ದೂರದಲ್ಲಿ ಸೂಜಿ ಕೆಳಗೆ ಬಿದ್ದರೂ ಶಬ್ಧ ಕೇಳಿಸತ್ತೆ ಅಷ್ಟು ಸೂಕ್ಷ್ಮಕಿವಿ ಅಂತಾರೆ. ಹಾಗೆ ಕಣ್ಣು ಕಾಣೋದು ಕೊಂಚ ಮಂಜಾದರೆ ದೃಷ್ಟಿ ಮಂಜು ಅಂತಾರೆ, ಅದೇ ದೃಷ್ಟಿ ಚುರುಕಾಗಿದ್ದರೆ ಹದ್ದಿನ ಕಣ್ಣು ಅಂತಾರೆ. ಅದೇನೋ ಸರಿ ಈಗ ಮೂಗಿನ ವಿಚಾರಕ್ಕೆ ಬರೋಣ ಬೀದಿ ಕೊನೆ ಮನೇಲಿ ಪಕೋಡ ಮಾಡ್ತಾ ಇದ್ರೆ ಬೀಸೋ ಗಾಳೀಲಿ ವಾಸನೇನ ದೀರ್ಘವಾಗಿ ಒಳಗೆಳ್ಕೊಂಡು ಆನಂದಿಸಿ ಮೂಲೆ ಮನೇಲಿ ಪಕೋಡ ಅಂತ announce ಮಾಡ್ತಾರೆ.

ತುಪ್ಪದ ದೋಸೆ ಹೋಟೆಲ್ ಫರ್ಲಾಂಗ್ ದೂರ ಇದ್ದರೂ ಗುರುತು ಹಿಡಿತಾರೆ. ರಸ್ತೇಲಿ ಓಡಾಡೋವಾಗ ಎಲ್ಲಿಂದಲೋ ಬೆಳ್ಳುಳ್ಳಿ ವಾಸನೆ ಮೂಗಿಗೆ ಬಡಿದರೆ, ಓ ಸ್ಪೆಷಲ್ ತಯಾರಿ ಯಾರದೋ ಮನೇಲಿ ಅಂತಾರೆ. ವಾಸನೆ ಇಷ್ಟು ಚೆನ್ನಾಗಿ ಗ್ರಹಿಸೋ ಜನಗಳನ್ನ ನಾಯಿಥರ ವಾಸನೆ ಹಿಡಿತಾನೆ ಅನ್ನಬಹುದು.... ಅನ್ನಕ್ಕಾಗಲ್ಲ, ಮನಸಿನಲ್ಲಿ ಅನ್ಕೊಬೋದು ಅಷ್ಟೇ.

ಈ ಮೂಗಿನ ಕಥೆ ಬಲು ದೊಡ್ಡದು, ರಾಮಾಯಣದಲ್ಲಿ ಲಕ್ಷ್ಮಣ ಶೂರ್ಪನಖಿ ಮೂಗು ಕತ್ತರಿಸಿದ್ದು ಮುಂದೆ ಎಂತೆಂತ ಘಟನೆಗಳಿಗೆ ಕಾರಣ ಆಯ್ತು ಅನ್ನೋದು ಪುರಾಣ. ನಮ್ಮ ಹೆಂಡ ಕುಡಕರತ್ನ ಭಗವಂತ ಭೂಮಿಗಿಳಿದು ಬಂದು, ಪರೀಕ್ಷೆ ಮಾಡಕ್ಕೆ ''ಹೆಂಡ ಕುಡಿಯೋದು ಬಿಡು ರತ್ನ'' ಅಂದ್ರೆ... ''ಮೂಗು ಮೂರು ಚೂರಾಗಿ ಮುರಿಸ್ಕೊಂತೀನಿ'' ದೊಡ್ಡೋನ ಮಾತಿಗಡ್ಡ ಬಂದ್ರೆ ಅಂತಾನೆ.

ಮೂಗು ನಾನಾ ರೂಪು, ಶೇಪು, ಚೂಪು. ಗಿಣಿ ಮೂಗು, ಗರುಡನ ಮೂಗು, ಉದ್ದನೇ ಮೂಗು, ಮೊಂಡು ಮೂಗು, ಸಂಪಿಗೆ ನಾಸಿಕ, ನೀಳನಾಸಿಕ.. ಹೀಗೆ ಥರಥರವಾದ ಮೂಗು.

''ಮೂಗಿಲ್ಲದೆ ಇದ್ರೆ ಏನಾಗತ್ತೆ ಮಕ್ಕಳೇ?''

ಇನ್ನು ಮೂಗಿನ ಮೇಲಿನ ಈ ಪ್ರಶ್ನೆಗೆ ಮಕ್ಕಳ ಉತ್ತರ:

1. ಕಣ್ಣು ಕಾಣಲ್ಲ ಅಂತ, ಹೇಗೆ ಅಂದ್ರೆ.. ದೃಷ್ಟಿ ಮಂದವಾಗಿರೋರು ಕನ್ನಡಕ ಹಾಕ್ಕೊಬೇಕು ಮೂಗಿಲ್ಲ ಅಂದ್ರೆ ಕನ್ನಡಕ ಜಾರಿ ಬಾಯಿಗೆ ಬರತ್ತೆ. ಅಂತ
2. ಒಡವೆ ಮಾರೋ ಅಂಗಡಿಯವರಿಗೆ ನಷ್ಟ ಆಗತ್ತೆ. ಹೇಗೆ ಅಂದ್ರೆ... ನತ್ತು, ಮೂಗ ಬಟ್ಟು ಯಾರೂ ಮಾಡಿಸಲ್ಲ.
3. ನಶ್ಯದ ವ್ಯಾಪಾರ ಮಾಡೋರು. ವ್ಯಾಪಾರ ಇಲ್ಲದೆ ಅಂಗಡಿ ಬಾಗಿಲು ಹಾಕಬೇಕಾಗುತ್ತೆ ಅಂತ.

ಈ ಮೂಗಿನ ಮುಖ್ಯ ಕಾರ್ಯ ಮೂಸಿ ನೋಡೋದು. ಆದರೆ ಇದು Two in one

ಅಂತ ಮಾತುಕೂಡ ಆಡತ್ತೆ. ಗಾಭರಿ ಆಗಬೇಡಿ ಕೆಲವರು ಮಾತಾಡೋದು, ಹಾಡೋದು ಕೇಳಿದರೆ ಅವರು ಮೂಗಲ್ಲಿ ಮಾತಾಡ್ತಾರೆ, ಹಾಡ್ತಾರೆ ಅಂತ ಜನ ತೀರ್ಪು ಕೊಡುತಾರೆ.

ಕೆಲವರ್ನ ಗುರ್ತಿಸೋದು ಅವರ ಮೂಗು ನೋಡೆ. ಮೂಗು ಉದ್ದದ ಮಂಜಣ್ಣ, ಗಿಣಿ ಮೂಗು ಗಿರಿಜಕ್ಕ... ಹೀಗೆ ಮೂಗಿನ ಹೆಸರಲ್ಲಿ ಬೈಗಳು ಕೂಡ ಇದೆ... ಅವನು/ಅವಳು ಎಲ್ಲಾ ವಿಷಯದಲ್ಲೂ ಮೂಗು ತೂರಿಸ್ಕೊಂಡು ಬರ್ತಾನೆ, ಬರ್ತಾಳೆ ಅಂತ. ಇನ್ನು ಗಾದೆ ''ಮೂಗಿರೋವರೆಗೂ ನೆಗಡಿ ತಪ್ಪಿದ್ದಿಲ್ಲ''. ಮೂಗಿಗಿಂತ ಮೂಗುತಿ ಬಾರ ... ಹೀಗೆ.

ಹೊಡೆದಾಟದಲ್ಲಿ ಈ ಮೂಗು ಸುಮ್ಮನಿರದೆ ಮುಂದೆ ಚಾಚಿ ಮೊದಲನೆ ಹೊಡೆತ ತಿನ್ನತ್ತೆ... ಗ್ರೇಟ್ ಅಲ್ಲವಾ?

ಹೀಗೆ ಈ 'ನಾಸಿಕ ಪುರಾಣ'ದ ಒಂದು ಅಧ್ಯಾಯ ಇಲ್ಲಿಗೆ ಮುಕ್ತಾಯ.

---

# ಪತ್ನಿಯರ ಕತೆ

ಇಡೀ ರಾಮಾಯಣ ಪತ್ನಿಯರ ಕತೆ ಎಂದರೆ ನಂಬುವಿರಾ?

ಲಕ್ಷ್ಮಣ ತನ್ನ ಹೆಂಡತಿಯನ್ನು ಮನೆಯಲ್ಲಿ ಬಿಟ್ಟು ಹೋದ.

ರಾವಣ ಇನ್ನೊಬ್ಬರ ಹೆಂಡತಿಯನ್ನು ಕದ್ದು ತಂದು ತನ್ನ ಬಳಿ ಇರಿಸಿಕೊಂಡ.

ಸುಗ್ರೀವ ರಾಮನಿಗೆ ಸಹಾಯ ಮಾಡಲು ಕಾರಣ? ವಾಲಿ ಬಳಿ ಇದ್ದ ತನ್ನ ಹೆಂಡತಿಯನ್ನು ಅವನು ವಾಪಸ್ ಪಡೆಯಬೇಕಿತ್ತು.

ಹನುಮಾನ್ ತನ್ನ ಹೆಂಡತಿಯನ್ನಲ್ಲ ಇನ್ನೊಬ್ಬರ ಹೆಂಡತಿಯನ್ನು ಹುಡುಕಲು ಲಂಕೆಗೆ ಹಾರಿದ.

ಯಾವ ಕಾರಣಕ್ಕೆ ರಾಮಾಯಣ ನಡೆಯಿತೋ ಆ ಪತ್ನಿ ಭೂಗತಳಾದಳು.

ಇದಕ್ಕೆಲ್ಲಾ ಕಾರಣ?

ದಶರಥನಿಗೆ ಮೂವರು ಹೆಂಡತಿಯರು ಇದ್ದಿದ್ದು.

**ನೀತಿ:** ಪುರಾಣ ಕಾಲದಿಂದಲೂ ಹೆಂಡತಿಯ ಕಾಟ ಇದ್ದಿದ್ದೇ. ದೇವರಿಗೇ ಹೆಂಡತಿಯಿಂದ ಬಚಾವಾಗಲು ಸಾಧ್ಯವಾಗದಾಗ ಇನ್ನು ಹುಲು ಮಾನವರ ಪಾಡೇನು.

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**- ದಂನಆ**

- ಆತ್ಮೀಯರಿಗೆ ನಮ್ಮ ಡ್ರೆಸ್‌ಗಿಂತ ನಾವು ಮುಖ್ಯ.
- ನಮಗೆ ಇಷ್ಟ ಇರುವಂತೆ ನಾವು ಜೀವಿಸುವುದಿಲ್ಲ. ನಮಗೆ ಸಾಧ್ಯ ಇರುವಂತೆ ನಾವು ಜೀವಿಸುತ್ತೇವೆ.
- ಕಾಮನ ಬಿಲ್ಲು ನೋಡಬೇಕು ಎಂದರೆ ಒಂದಿಷ್ಟು ಮಳೆಯನ್ನು ಸಹಿಸಲೇಬೇಕು.
- ಜನ ಸಾಯುವುದಿಲ್ಲ. ಚಮಚ ಮತ್ತು ಫೋರ್ಕ್‌ಗಳಿಂದ ತಮ್ಮನ್ನು ತಾವೇ ಕೊಲ್ಲುತ್ತಾರೆ.
- ನಿಮ್ಮ ಡಯಾಬಿಟಿಸ್ ನೀವು ಬೇಕರಿ ಮತ್ತು ಬಸ್‌ಸ್ಟಾಪ್‌ಗಳಿಂದ ಎಷ್ಟು ದೂರ ಇದ್ದೀರಿ ಎಂಬುದನ್ನು ಅವಲಂಬಿಸಿದೆ.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- *The system is not corrupt; the people who run it can be.*
- ನೀವು ಇತರರನ್ನು ಬದಲಾಯಿಸಲು ಸಾಧ್ಯವಿಲ್ಲ. ಆದರೆ ಅವರಿಂದ ಕಲಿಯಲು ಸಾಧ್ಯ.

- ಆರೋಗ್ಯಕರ ಬೊಜ್ಜು ಎಂಬುದಿಲ್ಲ.
- ಮಾತು ಉಳಿಸಿಕೊಳ್ಳುವ ಅತಿ ಶ್ರೇಷ್ಠ ವಿಧಾನ ಎಂದರೆ ಅದನ್ನು ಕೊಡದೇ ಇರುವುದು.
- ದುಡ್ಡು ಇಲ್ಲದೇ ಇದ್ದಾಗ ಅದಕ್ಕಿರೊ ಬೆಲೆ ದುಡ್ಡು ಬಂದ ಮೇಲೆ ಇರೊಲ್ಲ.
- ಪ್ರತಿಯೊಬ್ಬರೂ ಒಂದು ಎಕ್ಸ್‌ಪೈರಿ ಡೇಟ್ ಇಟ್ಟುಕೊಂಡೇ ಈ ಜಗತ್ತಿಗೆ ಬರುತ್ತಾರೆ.
- ಬೊಜ್ಜಿರುವ ಕಾಮೆಡಿಯನ್ ಹೊಟ್ಟೆಯಲ್ಲಿ ಲಾಫಿಂಗ್ ಗ್ಯಾಸ್ ತುಂಬಿರುವುದೆ?
- ಸವಿರುಚಿ ಕಾರ್ಯಕ್ರಮ ನೋಡಿ ಹೊಟ್ಟೆ ತುಂಬಿಸಿಕೊಳ್ಳುವುದೇ ನಿಜವಾದ ಡಯಟಿಂಗ್.
- ತಮಗೆ ಎಲ್ಲಾ ಗೊತ್ತಿದೆ ಎಂದುಕೊಂಡಿರುವವರು ಎಲ್ಲಾ ಗೊತ್ತಿರುವವರಿಗೆ ಕಿರುಕುಳ ಕೊಡುತ್ತಾರೆ.
- ನಮ್ಮ ಬದುಕಿನಿಂದ ಬರಹ ಸೃಷ್ಟಿಯಾಗುತ್ತದೆ. ಅದಕ್ಕಾಗಿ ಶ್ರೇಷ್ಠ ಬರವಣಿಗೆ ನಮ್ಮಿಂದ ಹೊರಹೊಮ್ಮುವಂತೆ ನಾವು ಬದುಕಬೇಕು.

# ಸ್ಯಾಂಕಿತೀರದ ವಾಕಥಾನ್....

**- ದೀಪಾ ಫಡ್ಕೆ**

'ಓಹ್, ಕಮಾನ್ ಮಾಹೀ, ಸ್ವಲ್ಪ ಫಾಸ್ಟ್ ನಡಿ, ನೀನು ಮಾಡ್ತಿರೋದು ವಾಕಿಂಗು, ರ್‍ಯಾಂಪ್ ವಾಕ್ ಮಾಡ್ತಿಲ್ಲ ತಿಳ್ಕೊ. ಟ್ರಯ್ ಟು ಮ್ಯಾಚ್ ಮೈ ಸ್ಪೀಡ್....' ಹರಿಯ ಜಂಬದ, ತಿರಸ್ಕಾರಭರಿತ ಮಾತು ಕೇಳಿ ಅವ್ರನ್ನ ಸ್ಯಾಂಕಿ ಕೆರೆಗೆ ದೂಡಿ ಹಾಕೋವಷ್ಟು ಸಿಟ್ಟು ಬಂತು ನಂಗೆ. ಅಬ್ಬಬ್ಬಬ್ಬಾ... ಅದೇನ್ ಜಂಭವೋ! ಭಾರಿ ಸ್ಪೀಡ್ ಅಂತೆ. ಹಿಂಭಾಗಕ್ಕೆ ಬೆಂಕಿ ತಾಕಿದಂತೆ ನಡೆಯೋ ಸ್ಟೈಲಿಗೆ ಭೂಮಿ ಅದುರಬೇಕು. ಕಿವಿಗೆ ಆ ದರಿದ್ರ ಇಯರ್ ಫೋನ್ಸ್ ಬೇರೆ!! ನಿಧಾನಕ್ಕೆ ಅದೂ ಇದೂ ಮಾತಾಡುತ್ತಾ, ಬೆಂಗಳೂರಿನಂಥ ಬೆಂಗಳೂರಿನಲ್ಲಿ, ಸಿಟಿ ಮಧ್ಯೆ ಉಳಿದ ಒಂದೆರಡು ಕೆರೆತೀರದ, ತಣ್ಣಗಿನ ಗಾಳಿ ಹೀರಿಕೊಂಡು, ಉಳಿದ ನೀರಿನ ಅಲೆಗಳಲ್ಲಿ ತೇಲುತ್ತಿರುವ ಬಾತುಗಳನ್ನು, ಇದೇ ಇದೇ ಕಾಶ್ಮೀರದ ದಾಲ್ ಲೇಕ್ ಎಂದುಕೊಂಡು ತೋರು ಬೆರಳಿನ ತುದಿಯಿಂದ ತೋರಿಸುತ್ತಾನೂ ವಾಕ್ ಮಾಡ್ಬಹುದು. ನಂಗೆಲ್ಲಿ ಆ ಪುಣ್ಯ? ಹುಂ ಇವರಿಂದಾಗದು ಅದೆಲ್ಲ, 'ಓಹ್, ಮಾಹಿ ಅದೆಲ್ಲ ಮಾಡ್ಬೇಕಂದ್ರೆ ನೀನು ನಿನ್ನ ಗಾಸಿಪ್ಪ್ ಫ್ರೆಂಡ್ಸ್ ಜೊತೆ ಬಾ ತಾಯಿ' ಅಂತ ಭುಜ ಕುಣಿಸುತ್ತಾರೆ. ಎಷ್ಟು ಜಂಬ ಈ ಗಂಡಸ್ರಿಗೆ? ಇವ್ರ ಇದೇ ಸ್ಪೀಡ್ ಎಷ್ಟು ವರ್ಷ ಇರುತ್ತೋ ನಾನೂ ನೋಡ್ತಿನಿ. ಪಕ್ಕದಮನೆ ಆ ಶಿವಾರೆಡ್ಡಿ ಮತ್ತವರ ಪತ್ನಿ ಶಿವಾಂಗಿ ಜೊತೆಯಾಗಿ, ಹಿತವಾಗಿ ಎಂದು ಹೇಗೆ ಜೊತೆಜೊತೆಯಲಿ ಹೆಜ್ಜೆ ಹಾಕುತ್ತಾ ಹೋಗ್ತಾರೆ! ಎಲ್ಲದಕ್ಕೂ ಪುಣ್ಯವಿರಬೇಕು. ಯಾವಾಗ್ಲೂ ನನ್ನಿಂದ ಈ ಮನುಷ್ಯ ಹತ್ತಡಿ ಮುಂದೆ. ನಡುನಡುವೇ ಹಿಂದಿರುಗಿ 'ಓ' ಎಂದು ವಿಚಿತ್ರವಾಗಿ ನೋಡಿ ನಿನ್ನಿಂದ ಇಷ್ಟೇ ಆಗೋದು ಎನ್ನುವಂಥ ನೋಟ ಬೇರೆ. ಹೇ ಭಗವಂತ, ಈ ಸ್ಯಾಂಕಿ ಕೆರೆಗೆ ಒಂದಾದರೂ ಮೊಸಳೆ ತಂದು ಬಿಡಬೇಕು. ಖಂಡಿತಾ ಒಂದಿನ ಹರೀನ ತಳ್ಳಿ ಹಾಕಿ ಓಡ್ ಹೋಗ್ತಿನಿ, ಬೆವರು ಒರ್ಸ್ಕೊಂಡು ದುಮುಗುಟ್ಟಿಕೊಂಡು ಇವ್ರ ಸ್ಪೀಡಿಗೆ ಮ್ಯಾಚ್ ಮಾಡಲು ಓಡಿದೆ.

ಸಂಜೆ 'ಸವಿ' ಆಂಟಿ ಮನೆಗೆ ಹೋದೆ. ಸ್ವೀಟ್ ಆಂಟಿಯದು. ಯಾವಾಗ್ಲೂ ನೀಟ್ ಆಗಿ ಡ್ರೆಸ್ ಮಾಡಿಕೊಂಡು ಯಂಗ್ ಆಗಿ ಆಲೋಚನೆ ಮಾಡೋ ಆಂಟಿಯದು. ಗುರುರಾಜ್ ಅಂಕಲ್ ಕೂಡ ಅಷ್ಟೇ ನನ್ನಲ್ಲಿ ಅದೆಷ್ಟು ಪ್ರೀತಿಯಿಂದ ಮಾತಾಡಿಸ್ತಾರೆ ಎಂದುಕೊಳ್ಳುತ್ತಾ ಬೆಲ್ ಮಾಡಿದೆ. ಬಾಗಿಲು ತೆಗೆದ ಅಂಕಲ್ 'ಓಹ್ ಮಾಹೀ, ಬಾಮ್ಮಾ ಹೇಗಿದ್ದೀಯಾ' ಎಂದು ಒಳಕರೆದರು. 'ಲೇ ಸಾವೂ ಎಲ್ಲಿದ್ದೀಯಾ?' ಎಂದು ನನ್ನ ನೋಡಿ ತಮಾಶೆಯೆನ್ನುವಂತೆ ಕಣ್ಣುಹೊಡೆದರು. 'ಯಾಕ್ ಅಂಕಲ್, ಅಷ್ಟೊಳ್ಳೆ ಹೆಸರಿದ್ರೂ ಹಾಗ್ ಕರೀತೀರಾ? ನಾವೆಲ್ಲ ಕರೆಯೋ ಹಾಗೆ ಸವಿ ಅಂತನೂ ಕರಿಯೋದಲ್ವೇ?' ನನ್ನ ಪ್ರಶ್ನೆಗೆ 'ನೋಡು ಮಾಹೀ, ಇವಳ್ನ ಮದ್ವೆ ಆದ್ ಕೂಡ್ಲೆ ನನ್ನ ಸ್ವಾತಂತ್ರದ ಸಾವಾಯ್ತು. ಹಾಗಾಗಿ ನಾ ಹೇಗೆ ಸವಿ ಅಂತ ಕರೀಲಿ. ಅದ್ಕೆ ಸಾವಿತ್ರಿನ ಸಾವೂ ಅಂತ ಪ್ರೀತಿಯಿಂದನೇ ಕರೆಯೋದು' ಎನ್ನಬೇಕೆ? ಅಯ್ಯೋ ದೇವ್ರೆ ಈ ಗಂಡಸ್ರು ಹೆಂಡ್ತಿರ್ನ ಗೇಲಿ ಮಾಡೊದೇ ಆಕ್ಸಿಜನ್ ಅಂದುಕೊಂಡು ಉಸಿರಾಡ್ತಿದ್ದಾರಲ್ವೇ

ಅನಿಸಿತು. ಅಷ್ಟರಲ್ಲಿ ಹೊರ ಬಂದ ಸವಿ ಆಂಟಿ, ಮಾಹೀ ನಿಂಗೊತ್ತಾ, 'ಈ ನಿನ್ನ ಗುರ್ ಅಂಕಲ್ಗೆ ನನ್ನ ಕಂಡ್ರೆ ಸ್ವಲ್ಪ.... ಸ್ವಲ್ಪವೇನು ಆಕ್ಚುವಲಿ ಜಾಸ್ತಿನೇ ಹೊಟ್ಟೆಯುರಿ ಕಣೆ.' ಹು... ಹು... ನಗುತ್ತಾ 'ನಾನು ಇ-ಮೇಲ್ ಮಾಡೋದನ್ನ ಕಲ್ತಿದೀನಿ, ಅಮೇರಿಕದಲ್ಲಿರೋ ಮೊಮ್ಮಕ್ಕಳ ಫೋಟೋಸ್ ಎಲ್ಲ ನೋಡೋಕೆ ಅಂತ ಫೇಸ್ಬುಕ್ನಲ್ಲೂ ಇದೀನಿ. ಸ್ಕೈಪ್‌ನಲ್ಲಿ ಅರುಣನ ಮಗನಿಗೆ ಕನ್ನಡಾನೂ ಹೇಳ್ಕೊಡ್ತೀನಿ. ಅದಕ್ಕೆ ನಿನ್ನ ಅಂಕಲ್ ಫ್ರೆಂಡು ಶ್ಯಾಮಣ್ಣ ಇದಾರಲ್ವ, ಅವ್ರು ನನ್ನ 'ಟೆಕ್ ಸಾವಿ' ಅಂತ ಹೊಗಳ್ತಾರೆ ನೋಡು. ಅದೇ ನಿಮ್ಮ ಅಂಕಲ್ಗೆ ಉರ್ದಿರೋದು ಅಂತ ನಗಲಾರಂಭಿಸಿದರು. ನಂಗೂ ನಕ್ಕು ನಕ್ಕು ಸುಸ್ತಾಯಿತು. ಇರಲಿ ಯಾರಾದ್ರೂ ಸರಿ ಈ ಗಂಡಂದ್ರಿಗೆ ಉರಿಸ್ತಾ ಇದಾರಲ್ವ, ಇನ್ನೂ ಲೋಕ ಕೆಟ್ಟಿಲ್ಲವೆಂದು ಸ್ವಲ್ಪ ಸಮಾಧಾನವಾಯ್ತು.

'ಗುರ್' ಅಂಕಲ್ಗೆ ಏನನ್ನಿಸಿತೋ, ಇಲ್ಲೇ ಇದ್ರೆ ಈ ಸಾವೂ ನಿಜವಾಗ್ಲೂ ತಂ ಮರ್ಯಾದೇನಾ ಚಟ್ಟ ಕಟ್ಟಿಸ್ತಾಳೆ ಎಂದುಕೊಂಡು, 'ಓಕೆ ಮಾಹೀ ಯು ಪೀಪಲ್ ಕ್ಯಾರಿ ಆನ್ ವಿದ್ ಯುವರ್ ಗಾಸಿಪ್ಸ್' ಎನ್ನುತ್ತಾ ವಾಕಿಂಗೆಂದು ಜಾಗ ಖಾಲಿ ಮಾಡಿದ್ರು. ಅಷ್ಟರವರ್ಗೂ ಸಹಿಸಿಕೊಂಡಿದ್ದ ನಾನು ಅಲ್ಲ ಆಂಟಿ, ಈ ಗಂಡಸ್ರು ಏನ್ ತಿಳ್ಕೊಂಡಿದ್ದಾರೆ? ನಾವ್ ಹೆಂಗಸ್ರು ಏನ್ ಮಾತಾಡಿದ್ರೂ ಅದು ಗಾಸಿಪ್ಪಂತೆ. ಫನ್ನಿ ಕ್ರಿಚರ್ಸ್ ಅಲ್ವೇ? ಬೈ ದಿ ವೇ, ಆಂಟಿ, ಮಂಜುಳಾ ಸೀರೆ ನೋಡಿದ್ರಾ? ಸಕ್ಕತ್ತಾಗಿತ್ತು. ಆಂಟಿನೂ ಹೂಂ ನಾನೂ ನನ್ನ ಫ್ರೆಂಡ್ಸ್ ಏನ್ ಮಾತಾಡಿದ್ರೂ ಅದು ಒಗ್ಗರಣೆ ಅಂತೆ, ಅದೂ ಇಂಗ್ಲೀಷ್ನ ಸೀಝುನಿಂಗ್ ಅಂತೆ, ಯಾಕಂದ್ರೆ ಸೀಝುನ್ನಿಂದ ಸೀಝುನ್ನಿಗೆ ನಾವ್ ಮಾತಾಡೋ ಟಾಪಿಕ್ಕು ಚೇಂಜ್ ಆಗುತ್ತಂತೆ. ಇವ್ರು ವಾಕಿಂಗ್ನಲ್ಲಿ ಏನ್ ಮಾತಾಡ್ತಾರೆ ಗೊತ್ತಾ? ಅದೇ ಡಬ್ಬಾ ಪೊಲಿಟಿಕ್ಸ್, ಹಾಗಂತ ಅಂದ್ಕೊಂಡಿದ್ದೆ! ಜೊತೆಲೇ ಮೊನ್ನೆ ಇವ್ರೂ ಶ್ಯಾಮಣ್ಣನೂ ಸಂಜೆ ನೀನ್ ಏನೇ ಹೇಳು ಶ್ಯಾಮೂ ಆ ಪ್ರಿಯಾಂಕ ವಾದ್ರಾ ಅದೇನು ಬ್ಯೂಟಿಫುಲ್ ಹುಡ್ಗಿ ಆಂಡ್ ಶೀ ವೇರ್ಸ್ ಪ್ರೆಟಿ ಗುಡ್ ಸಾರೀಸ್. ಆ ಸೋನಿಯಾ ಗಾಂಧಿಗೆ ಸಿಕ್ಸ್ಟಿಫೋರ್ ಅಂತೆ, ಯಾರಾದ್ರೂ ನಂಬ್ತಾರಾ. ಸ್ವಲ್ಪ ನೂ ಬೊಜ್ಜಿಲ್ಲ ಅಂತಾ ಮಾತಾಡಿಕೊಳ್ತಿದ್ರು. ನಂಗೂ ಮಾಹೀ ಆಗ, ಕಿರುಚಿ ಹೇಳ್ಬೇಕು ಅಂತನ್ನಿಸಿತು... ಹುಂ, ಸೋನಿಯಾಳ ಗಂಡ ರಾಜೀವ್ ಗಾಂಧಿ, ಸುರಸುಂದರಾಂಗ ರಾಜೀವ್ ಗಾಂಧಿ ಎಂದು. ಇರಲಿ ಬಿಡು, ನೀ ಹೇಳು, ಮತ್ತೇನು ಸಮಾಚಾರ? ಹೇಗಿದಾನೆ ಹರೀಶ? ಮಂಜುಳಾ ಸೀರೆ ಚೆನ್ನಾಗಿತ್ತು ಎಂದು ಹೇಳಿದಾಗ ಅದುವರೆಗೂ ಮರೆತಿದ್ದ ಹರಿಯ ವಾಕಾಥಾನ್ ನೆನಪಾಗಿ ಅರಿವಿಲ್ಲದೆ ಹಲ್ಲು ಕಚ್ಚಿದೆ.

'ಯಾಕ್ ಮಾಹೀ ಹಲ್ಲು ಕಚ್ಚುತ್ತಿದ್ಯಾ? ಜಗಳ ಆಯ್ತೇನೆ ಹರೀಶ್‌ನ ಜೊತೆ?' ಎಂದಾಗ, ಬಂದಿರೋದೇ ಅದನ್ನ ಹೇಳೋದಕ್ಕೇ ಅಂತಿದ್ದ ನಾನು ಕ್ಷಣನೂ ವೇಸ್ಟ್ ಮಾಡದೆ, ಏನ್ ಜಂಬ ಆಂಟಿ ಈ ಗಂಡಸ್ರಿಗೆ? ಇವ್ರು ವಾಕಿಂಗ್ ಹೋಗೋದಾ ಅಲ್ಲಾ ಮಾರಥಾನ್ ಓಡೋದಾ? ವಾಕಿಂಗ್ ಹೋಗ್ತಿನಲ್ಲ ಹರೀ ಜತೆ, ನಾ ಅವ್ರ ಸ್ಪೀಡ್ಗೆ ಮ್ಯಾಚ್ ಮಾಡೋ ಹಂಗೆ ನಡೀಬೇಕಂತೆ. ನಂಗೆ ಇಡೀ ದೇಹ ಅದುರಿದಂತೆ ನಡಿಯಕ್ಕಾಗಲ್ಲ, ಮೈಮೇಲೆ ಭೂತ ಬಂದಂತೆ ನಡೀತಾರೆ. ಅದೂ ನಾಲ್ಕು ಹೆಂಗಸರು ಮುಂದಿನಿಂದ ಬರ್ತಿದ್ರೆ ಅಂತೂ ಹೇಳೋದೇ ಬೇಡಾ! ಕೊಹ್ಲಿ ಗ್ರೌಂಡಿನಿಂದ ಸ್ಟೇಡಿಯಮ್ ಕಡೆ ಸ್ಟೈಲಿನಲ್ಲಿ ನೋಡ್ತಾನಲ್ಲ, ಹಂಗಿರುತ್ತೆ ಇವ್ರ

ಸ್ಟೈಲು! ನಾನು ಅವ್ರ ಜೊತೇನೇ ಇಲ್ಲ ಅನ್ನೋ ಹಾಗೆ ನಡೀತಾರೆ ಕೈ ಕೈ ಹಿಸುಕಿಕೊಂಡೆ, ಅಲ್ಲಿ ಹರಿಯೇನಾದ್ರೂ ಇದ್ದಿದ್ದರೆ...

ಕಣ್ಣು ಕಿರಿದಾಗಿಸಿ ನಕ್ಕ ಆಂಟಿ, 'ಮಾಹೀ ನಿಂಗೆ ಅವ್ನ ಸ್ಪೀಡ್ ಪ್ರಾಬ್ಲಮ್ಮಾ ಅಲ್ಲ ಹೆಂಗಸ್ರ ಮುಂದಿನ ಸ್ಟೈಲು ಪ್ರಾಬ್ಲಮ್ಮಾ?' ಎಂದು ಕೇಳಿದಾಗ ಸಿಕ್ಕಿ ಬಿದ್ದಗಾಯ್ತು. 'ಏನ್ ಸ್ಟೈಲು ಮಣ್ಣಂಗಟ್ಟಿ, ಗುಂಡಗೆ ಇರೋ ಹೊಟ್ಟೇನ ಯಾರಾದ್ರೂ ಬಂದ್ರೆ ಒಳಕ್ಕೇ ಎಳ್ಕೊತಾರೆ. ಡಬಲ್ ಎಕ್ಸ್‌ಎಲ್ ಟೀ ಶರ್ಟ್ ಹಾಕೋದು ಯಾಕಂದ್ರೆ ಹೊಟ್ಟೆ ಟೈರ್ ಕಾಣ್ಬಾರ್ದಲ್ವೇ?' ಎಂದುಬಿಟ್ಟೆ, ಬಿಟ್ಟು ಕೊಡಬಾರದೆಂದು. ಆಂಟಿ ಆಗ, 'ಭಾರಿ ಕೋಪ ಬಂದಿದೆ ನಂ ಮಾಹೀಗೆ' ಎಂದಾಗ ನಾನು ಅಲ್ವೇ ಮತ್ತೆ, 'ನಾತಿಚರಾಮಿ' ಎಂದು ಮದ್ವೆಲೀ ಮಾಡಿದ ಪ್ರಾಮಿಸ್‌ಗಾದ್ರೂ, ಕೊನೇ ಪಕ್ಷ ವಾಕಿಂಗ್ನಲ್ಲಾದ್ರೂ ಸಾಥ್ ಕೊಡಬಾರ್ದಾ? ಹೇಳಿಯೇ ಬಿಟ್ಟೆ.

ಆಗ ಆಂಟಿ ಪಕ್ಕಾ ಅನುಭವಿಯಂತೆ ಕುರ್ಚಿಯಲ್ಲಿ ಕೂತು, ಒಂದು ನಿಟ್ಟುಸಿರು ಬಿಟ್ಟು ಗೀತೋಪದೇಶ ಮಾಡೋ ಸ್ಟೈಲಿನಲ್ಲಿ 'ತಾಳ್ಮೆ, ತಾಳ್ಮೆ ಮಾಹೀ, ಇವೆಲ್ಲ ಸ್ವಲ್ಪ ವರ್ಷವಷ್ಟೆ! ಆಮೇಲೆ ನೋಡು ಈ ಸ್ಪೀಡ್ ಹೇಗೆ ರೂಪಾಯಿ ಬೆಲೆಯಂತೆ ಇಳಿಯುತ್ತೆ ಅಂತ.' ಈ ನಿನ್ನ ಸ್ವೀಟ್ ಅಂಕಲ್ ಇದಾರಲ್ವೇ? ಅವ್ರೂನೂ ವಯಸ್ಸಲ್ಲಿ ಹೀಗೇ ಇದ್ರು! ಆ ಕಾಲದಲ್ಲಿ ವಾಕಿಂಗೆಲ್ಲ ಸ್ವಲ್ಪ ಕಡಿಮೆನೇ. ಆದ್ರೂ ನಾವು ವಾಕ್ ಹೋಗ್ತಿದ್ವಿ. ನಿನ್ನ ಈ ಗುರ್ ಅಂಕಲ್ ಮತ್ತು ನಾನು ವಾಕ್ ಮಾಡ್ತಿದ್ರೆ ಹೇಗಿರ್ತಿತ್ತು ಅಂದ್ರೆ ಪಾರ್ಕಿನ ಆ ತುದೀಲಿ ಅಂಕಲ್ ಇದ್ರೆ ಈ ತುದೀಲಿ ನಾನು! ಸ್ವಲ್ಪ ನಿಧಾನ ಹೋಗಿ ಅಂದ್ರೆ, ನಿನ್ನ ಅಂಕಲ್ ''ನಿಧಾನ ನಡೆಯಲು ಇದೇನು ಸಪ್ತಪದೀನಾ? ನೋಡು, ನೀನು ಪರ್ಮಿಶನ್ ಕೊಟ್ರೆ ಬೇಕಾದ್ರೆ ಮತ್ತೊಮ್ಮೆ ನಿಧಾನಕ್ಕೆ ನಡೀತೀನಿ'' ಎಂದು ಬಾಯಿ ಮುಚ್ಚಿಸುತ್ತಿದ್ರು. ಈಗ ನೋಡು ಮಾಹೀ, ನಾನೂ ವಾರದಲ್ಲಿ ನಾಲ್ಕೈದು ದಿನ ವಾಕ್ ಮಾಡ್ತೀನಿ. ಅವ್ರ ಸಮಕ್ಕೇ ನಡೀತೀನಿ ಅಂದ್ರೆ ಅವ್ರ ಸ್ಪೀಡ್ ಕಡಿಮೆಯಾಗಿದೆ.... ಹೀ ಹೀ ನಕ್ಕರು. ಆಂಟಿಗೆ ಬೈ ಹೇಳಿ, ನಾನೂ ಹರಿ ಜೊತೇಲೇ ವಾಕ್ ಮಾಡಕ್ಕೆ ಕನಿಷ್ಠ ಇನ್ನು ಎಷ್ಟು ವರ್ಷ ಬೇಕಾದೀತು ಎಂದು ಲೆಕ್ಕ ಹಾಕುತ್ತಾ ಮನೆ ತಲುಪಿದೆ.

ಮರುದಿನ, 'ಇವತ್ತಿಂದ ಸಂಜೆ ವಾಕ್ ಹೋಗೋಣಾರೀ, ಬಂದು ತುಂಬಾ ಸುಸ್ತಾಗುತ್ತೆ ಏನೂ ಕೆಲ್ಸ ಮಾಡಾಕಾಗೋಲ್ಲ' ಎಂದೆ. ಅಟ್‌ಲೀಸ್ ಸಂಜೆಗಾದ್ರೂ ಇವ್ರ 'ಉರಿಪಾತ'ದ ವಾಕಾಥಾನ್ನ ಸ್ಪೀಡ್ ಸ್ವಲ್ಪ ಕಡಿಮೆ ಆಗಬಹುದೆಂದು ಊಹಿಸಿ ಹೇಳಿದೆ. ಯಾವತ್ತೂ ನನ್ನ ಮಾತನ್ನು ಕೇಳದೇ ಇದ್ದ ಮನುಷ್ಯ 'ಹೂಂ' ಅನ್ನಬೇಕೇ! ಹೋ, ನನ್ನ ಗಂಡಂಗೆ ವಯಸ್ಸಾಗುತ್ತಿದೆ, ಆಂಟಿ ಮಾತಲ್ಲಿ ಸ್ವಲ್ಪ ನಂಬ್ಕೆ ಬಂತು. ಹಿಪ್, ಹಿಪ್ ಹುರ್ರೇ!!! ಅರಿವಿಲ್ಲದೆ ಕೈ ಮೇಲೇ ಹೋಗಿದ್ದನ್ನು ನೋಡಿ ಹರಿ ಏನು ಎನ್ನುವಂತೆ ನೋಡಿದರು. ಖುಷಿಯಲ್ಲಿ ವೈಬ್ರೆಟಿಂಗ್ ಮೋಡ್ನಲ್ಲಿ ಇದ್ದಂಗಾಗಿತ್ತು. ಸಂಜೆ ಶುರು ಆಯಿತು, ಸ್ಯಾಂಕಿಯ ಗೇಟಿಂದ.... ವಾಕಾಥಾನ್!!! ಸ್ವಲ್ಪ ದೂರ ಹೋಗೋ ಅಷ್ಟರಲ್ಲಿ 'ಮಾಹೀ ನೀನು ಕಂಟಿನ್ಯೂ ಮಾಡು, ನಾನು ಸ್ವಲ್ಪ ಯೋಗ ಮಾಡ್ತೀನಿ' ಎಂದು ನನ್ನ ಹೂಂ ಗೂ ಕಾಯದೆ ಹೋದರು. ಓಹ್ ನಾನೊಬ್ಬಳೇ... ತಂಗಾಳಿಯಲ್ಲಿ ನಾನು ತೇಲಿ ಹೋದೆ... ಎಂದುಕೊಳ್ಳುತ್ತಾ, ಅಲ್ಲಲ್ಲಿ ಸಿಟಿ ಬಸ್ಸು ನಿಲ್ಲುವಂತೆ ನಿಂತು, ಇದುವರೆಗೂ ನಾನು ಬಾತುಕೋಳಿಗಳನ್ನು ನೋಡೇ

ಇಲ್ಲವೆನ್ನುವಂತೆ ಕಣ್ತುಂಬ ನೋಡಿ, ವಾಕ್ ಮಾಡಿದೆ. ಓಹ್ ಎದುರಲ್ಲಿ ಸುರಸುಂದರಿಯರ ದಂಡು, ಅಬ್ಬಾ ಎಫ್ ಚಾನಲ್ಲಿನಿಂದಲೇ ಹೊರಬಂದವರಂತಿದ್ದ ಡ್ರೆಸ್!! ನಮ್ಮಂತೆ ವಾಕ್ ಮಾಡಲು ಸಾಧ್ಯವೇ ಇಲ್ಲ ಅನ್ನುವಂಥ, ಕೆರೆದಂಡೆಗೆ ಕಟ್ಟಿದ ಕಲ್ಲುಗಳು ಥರಥರ ನಡುಗಬೇಕು ಆರೀತಿಯ ನಡಿಗೆ, ತಲೆಗಿರ್ ಎಂದಿತು. ಸೈಡಿಗೆ ಬಂದೆ, ಪುಣ್ಯಕ್ಕೆ ಕೆರೆನೀರಿಗೆ ಬಿದ್ದಿಲ್ಲ, ಬೀಳ್ತಿದ್ರೂ ಯಾರೂ ಎತ್ತೋ ಕಷ್ಟ ತಗೋತಿರಲಿಲ್ಲ ಎನ್ನುವಷ್ಟು ಬಿಝಿ!! ಕಿರುಚಿದರೂ ಯಾರಿಗೂ ಖಂಡಿತಾ ಕೇಳುತ್ತಿರಲಿಲ್ಲ, ಏಕೆಂದರೆ ಕಿವಿ ತುಂಬಾ ಇಯರ್ ಫೋನ್ಸ್.... ಧೂಂ ಮಚಾಲೆ... ಎಂದು. ಎಲ್ಲದಕ್ಕಿಂತ ದೊಡ್ಡ ಪುಣ್ಯವೆಂದ್ರೆ ಈ ತ್ರಿಪುರಸುಂದರಿಯರನ್ನು ಹರೀ ನೋಡಲಿಲ್ಲ, ನೋಡ್ತಿದ್ರೆ ಸುಮ್ನೆ ಕೋಪ್ಲಿ ಸ್ಟೈಲಿನಲ್ಲಿ ಪೋಸ್ ಕೊಡ್ಬೇಕಿತ್ತು. ಸಮಾಧಾನ ಪಟ್ಟುಕೊಂಡೆ. ಭಗವಂತ ಎಲ್ಲ ಟೈಮ್‌ನಲ್ಲೂ ಕೈ ಕೊಡೊಲ್ಲ ಅಂತ. ನನ್ನ ಸ್ಟೈಲಿನ ಒಂದು ರೌಂಡ್ ವಾಕ್ ಮುಗ್ಸಿ ಸ್ಯಾಂಕಿ ಕೆರೆಯ ಗೇಟಿನ ರೈಟ್ ಸೈಡಿನೆಡೆ ಸಾಗಿದೆ. ಸೂರ್ಯ ಡ್ಯೂಟಿ ಮುಗ್ಸಿ ಪ್ಯಾಕ್ ಅಪ್ ಹೇಳ್ತಿದ್ದ. ಬೇಗ, ಬೇಗ ನಡೆದೆ. ಹರಿ ಕಾಣ್ತಿಲ್ಲಲ್ವೇ ಎಂದುಕೊಳ್ತಾ ಮುಂದೆ... ಮುಂದೆ... ಹೋದಂತೆ ಕತ್ತಲು, ಪಕ್ಕದ ರಸ್ತೆಯಲ್ಲಿ ಸಾಗೋ ವಾಹನಗಳ ಲೈಟ್ ಪಾರ್ಕಿನಲ್ಲಿ ಕೂತವರ ಮೇಲೆ ಬಿದ್ದಾಗ ಒಂದಷ್ಟು ಮನುಷ್ಯರಿದ್ದಾರೆ ಎಂದು ಕಾಣ್ತಿತ್ತು. ಪ್ರತೀ ಬೆಂಚಿಗೊಂದು ಜೋಡಿ. ಕೆಲ ಜೋಡಿಗಳದ್ದು ತಬ್ಬುಗೆಯ ಪ್ರೀತಿ ನೋಡಿ ತಬ್ಬಿಬ್ಬಾದೆ, ದೇವ್ರೆ ನನ್ನ ಯಾರೂ ನೋಡಿಲ್ಲ ಅಂದ್ಕೊಕೊತೀನಿ, ದುರುಗುಟ್ಟಿದ ಜೋಡಿಯೊಂದಕ್ಕೆ, ದೇವ್ರಾಣೆಗೂ ನೀವು ತಬ್ಬಿಕೊಂಡು ಮುತ್ತಿಕ್ಕಿದ್ದನ್ನು ನಾ ನೋಡೇ ಇಲ್ಲ ಎಂದು ಕಣ್ಣಿನಲ್ಲೇ ಬೇಡಿದೆ. ಅಮ್ಮನ ಮಾತು ನೆನಪಾಯಿತು. ಕತ್ತಲೇಲಿ ಎಲ್ಲ ಕೆಟ್ಟ, ಅಸಭ್ಯ ಕೆಲ್ಸಗಳು ನಡೆಯೋದು, ಜಾಗ್ರತೆಯಿರಬೇಕು... ಎಂದದ್ದು. ಓಹ್ ಈ ಜೋಡಿ, ಬೆಂಚಿನ ಆ ಮೂಲೆಯಲ್ಲಿ ಹುಡುಗ, ಈ ಮೂಲೇಲಿ ಹುಡುಗಿ, 'ಮುನಿಸು ತರವೇ ಮುಗುದೆ ಹಿತವಾಗಿ ನಗಲು ಬಾರದೇ' ಸುಬ್ರಾಯ ಚೊಕ್ಕಾಡಿ ಬರೆದ ಪ್ರೇಮಗೀತೆಯನ್ನು ಕನಿಷ್ಠ ಗುನುಗಿಸಲೂ ಕೂಡ ಗೊತ್ತಿರದ ಅವಿವೇಕಿ ಹುಡುಗ ಎನಿಸಿತು. ಮುಂದೆ ಇಬ್ಬರು ಬರುತ್ತಿದ್ದರು, ಅರೇ ಇವ್ರು ಖಂಡಿತಾ ಗಂಡಹೆಂಡ್ತಿನೇ ಇರಬೇಕು, ಗಂಡ ವಿಚಿತ್ರ ಮುಖಭಾವದಿಂದ ಹೆಂಡ್ತಿನ ನೋಡಿದರೆ ಈ ಪಾಪದವ್ಳು ಅವನ ಸ್ಪೀಡಿಗೆ ಮ್ಯಾಚ್ ಮಾಡಲು ಹರಸಾಹಸ ಮಾಡುತ್ತಿದ್ದಾಳೆ. ಸವಿ ಆಂಟಿಯಂತೆ 'ತಾಳ್ಮೆ, ತಾಳ್ಮೆ ಸ್ವಲ್ಪ ವರ್ಷದಲ್ಲೇ ಜೊತೇಲೆ ವಾಕ್ ಮಾಡಿವಿಯಂತೆ... ಜಸ್ಟ್ ಚಿಲ್ ಒಕೆ...' ಎಂದು ಹಾರೈಸುತ್ತಾ ಮುಂದೆ ಹೋದರೆ ಪೂರಾ ಕತ್ತಲು. ಛೇ ಎಂಥ ಅವಸ್ಥೆ. ಈ ಕತ್ತಲೇಲಿ ಹರೀ ಇರಲಿಕ್ಕಿಲ್ಲ ಎಂದು ಹಿಂತಿರುಗಲು ನೋಡಿದಾಗ ಕಾರೊಂದರ ಬೆಳಕಿನಲ್ಲಿ ಮುಖವೊಂದು ಕಂಡಿತು. ಅರೇ ಹರೀನಾ, ಹೌದಲ್ವೇ... ಹತ್ತಿರ ಹೋದೆ. 'ಹೋಗೋಣ ಬರೀ ಕತ್ತಲು ಇಲ್ಲಿ' ಎಂದೆ. ಪ್ರಾಣಾಯಾಮ ಮಾಡುತ್ತಿದ್ದ ಹರೀ 'ನಂಗೆ ಪ್ರಾಣಾಯಾಮ ಮಾಡಲು ಬೆಳಕು ಬೇಕಿಲ್ಲ' ಪಟ್ಟಂತ ಬಂತು ಮಾತು. ಅಲ್ಲೇ ಕುಕ್ಕುರು ಬಡಿದೆ.... ಯಾವಾಗ ವಯಸ್ಸಾಗುತ್ತೋ? ಯಾವಾಗ ಪೊಗರು ಇಳಿಯುತ್ತೋ? ಮೇಲೆ ನೋಡಿದೆ, ನಕ್ಷತ್ರ ನಕ್ಕಿತು, ತಾಳ್ಮೆ, ತಾಳ್ಮೆ.

❖

# ನೋವು ಹಾಗೂ ಹಾಸ್ಯಪ್ರಜ್ಞೆ

**- ಶೋಭಾ ಪ್ರಮೋದ್**

ನನಗೆ, ಹತ್ತೊಂಭತ್ತು ವರ್ಷದ ಬುದ್ಧಿಮಾಂದ್ಯ ಮಗನಿದ್ದಾನೆ. ಬೇಕಾದಷ್ಟು ಔಷಧ- ಉಪಚಾರ, ಗುರುಗಳು- ಅಧ್ಯಾತ್ಮ ಇತ್ಯಾದಿ ಮಾಡಿಯೂ ಆತ ಅಷ್ಟೇನೂ ಸುಧಾರಿಸಲಿಲ್ಲ. ಅದು ''ಆಟಿಸ್ಟಿಕ್ ಕೇಸ್'' ಎಂದರು ವೈದ್ಯರು. ಅಂದರೆ ''ಸ್ವಮಗ್ನ ಮಗು'' ಎಂದು ಅರ್ಥ. ಖ್ಯಾತ ವಿಜ್ಞಾನಿ ಎಡಿಸನ್ ''ಆಟಿಸ್ಟಿಕ್'' ಆಗಿದ್ದನಂತೆ. ಅಭ್ಯಾಸದಲ್ಲಿ ಲಕ್ಷ್ಯವಿಲ್ಲದಿದ್ದರೂ, ಆತ ವಿದ್ಯುತ್ ಕಂಡುಹಿಡಿದನು. ಹೀಗೆ, ಈ ''ಆಟಿಸ್ಟಿಕ್'' ಮಕ್ಕಳಿಗೆ ತರಬೇತಿ ನೀಡಿದರೆ, ಬಹಳ ಪ್ರತಿಭಾವಂತರಾಗುತ್ತಾರೆ. ನಮಗಿನ್ನೂ ಆ ರೀತಿಯಾದ ಉತ್ತಮ ಶಾಲೆಗಳು ಮಹಾರಾಷ್ಟ್ರದಲ್ಲಿ ದೊರಕಲಿಲ್ಲ.

ಒಮ್ಮೆ ನನ್ನ ಸ್ಥೂಲಕಾಯದ ಮಗನಿಗೆ ತೀವ್ರ ಅನಾರೋಗ್ಯವಾದಾಗ ಸರ್ಕಾರೀ ವೈದ್ಯರಲ್ಲಿ ಕರೆದುಕೊಂಡು ಹೋದೆವು. ''ಬೆಡ್'' ಕೂಡ ನೀಡಿದರು. ಆತನ ವರ್ತನೆ, ಒಂದು ಕ್ಷಣ, ಒಂದೇ ಕಡೆಗೆ ಇರದ ಚಂಚಲತೆ, ಇದೆಲ್ಲವನ್ನೂ ಕಂಡು, ಅಕ್ಕಪಕ್ಕದ ''ಬೆಡ್'' ವಾಸಿಗಳು ಅಚ್ಚರಿಗೊಂಡು, ತೀರಾ ಕಾಳಜಿ ವಹಿಸಿದರು. ''ಬಿದ್ದು-ಗಿದ್ದು ಹೋಗುವೆ'' ಎಂದರು. ನಾನಾಗ ನಗುತ್ತ, ''ನೋಡು ಪ್ರಸನ್ನ, ಕೆಲ ಹೊತ್ತಿನಲ್ಲಿಯೇ, ನೀನಿಲ್ಲಿ ಪ್ರಸಿದ್ಧ ವ್ಯಕ್ತಿಯಾಗಿಬಿಟ್ಟಿರುವೆ. ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸು. ಈ ಎಲ್ಲ ಹಿತೈಶಿಗಳೂ, ಖಂಡಿತ ನಿನಗೇ ಮತ ಹಾಕುತ್ತಾರೆ!'' ಎಂದೆ. ಎಲ್ಲರೂ ಹೊಟ್ಟೆ ಹುಣ್ಣಾಗುವಂತೆ ನಕ್ಕರು. ಅವರಲ್ಲಿ ಒಬ್ಬ ''ನೀನು ಮನೆ-ಮನೆಗೆ ತಿರುಗಿ ಮತವನ್ನು ಬೇಡಿದರೆ, ನಿನ್ನ ಸ್ಥೂಲಕಾಯ ಕರಗಿ, ಸಪೂರಾಗಿ ಕಂಗೊಳಿಸುವೆ!'' ಎಂದನು.

ನಂತರ, ಒಬ್ಬಾತ ''ಈತನಿಗೆ ಆಟ ಗೊತ್ತಿದೆಯಾ?'' ಎಂದು ಕೇಳಿದನು. ನಾನು ಕೂಡಲೇ, ''ನಿನ್ನೆ, ಸಚಿನ್ ತೆಂಡೂಲ್ಕರ್ ನಿವೃತ್ತಿ ಘೋಷಿಸಿದ್ದಾರೆ. ಈಗ ಅವರ ಜಾಗಕ್ಕೆ ಈ ನನ್ನ ಮಗನ ಸೇರ್ಪಡೆಯಾಗಲಿದೆ!'' ಎಂದೆ. ಮತ್ತೊಮ್ಮೆ ಎಲ್ಲ ರೋಗಿಗಳೂ, ನಕ್ಕು ನಕ್ಕು ಸುಸ್ತಾದರೆನ್ನಿ. (ಹಾಗೆ ನೋಡಿದರೆ ನನ್ನ ಮಗ, (ಸಾಧಾರಣ) ಕ್ರಿಕೆಟ್ ಆಟ ಬಲ್ಲವನಾಗಿದ್ದಾನೆ.)

ಮತ್ತೊಬ್ಬ ರೋಗಿ, ''ಇವನು, ಇಷ್ಟು ಸದೃಢವಾಗಿರಲು ಕಾರಣವೇನು?'' ಎಂದನು. ಆಗ ನಾನು, ''ಹಸಿ ಬಟಾಣಿ, ಈರುಳ್ಳಿ, ಟೊಮೆಟೋ, ಬೀನ್ಸ್, ಕಾಲೀಫ್ಲವರ್ ಇವುಗಳನ್ನು ಹಾಗೆಯೇ ತಿನ್ನುತ್ತಾನೆ ಸ್ವಾಮೀ! ವಿಟಮಿನ್‌ಗಳು, ನೇರವಾಗಿ ದೇಹದಲ್ಲಿ ಪ್ರವೇಶಿಸುತ್ತವೆ. ''ಇಡ್ಲಿ ಮಾತಾಕೀ ಜೈ!'' ಎನ್ನುವ ಪಕ್ಷದವನಿವನು'' ಎಂದೆ.

ಮಗನ ಉಪಚಾರವನ್ನು ಮುಗಿಸಿ ಬಂದಾಗ, ಅನೇಕ ರೋಗಿಗಳು ಆತ್ಮೀಯರಾಗಿದ್ದರು. ''ಇಂತಹ ದುಃಖದಲ್ಲಿಯೂ ನಗುತ್ತಿದ್ದೀರಲ್ಲ'' ಎಂದು ಕೊಂಡಾಡಿದರು. ನಾನು, ಬರೆದ ಎಷ್ಟೋ ಬರಹಗಳು ಪ್ರಕಟವಾಗಿವೆ. ನನಗೆ ''ಹಾಸ್ಯ ಬರಹ'' ಬರೆಯಲು ಸ್ಫೂರ್ತಿ, ಈ ನನ್ನ ಮಗರಾಯ ಕೊಡುವ ಅಪರಿಮಿತ ಕಾಟ. ಎಲ್ಲ ಸುಖಗಳಿದ್ದರೆ, ಖಂಡಿತ ನಾನು ಲೇಖಕಿಯಾಗುತ್ತಿರಲಿಲ್ಲ. ಬಂಗಾರ ಒಡವೆ, ರೇಷ್ಮೆ ಸೀರೆಗಾಗಿ ಆಸೆ ಪಡುವ ಸಾಮಾನ್ಯ ಗೃಹಿಣಿಯಾಗಿರುತ್ತಿದ್ದೆ. ಹಲವು ನೋವು, ಕಷ್ಟಗಳನ್ನೂ ನಗು-ನಗುತ್ತ ಎದುರಿಸಲು, ಈ ಹಾಸ್ಯ ಪ್ರಜ್ಞೆ ಸಹಾಯಕವಾಗಿದೆ. ನನ್ನ ಬಾಳನ್ನು ಸಹ್ಯವಾಗಿಸಿದೆ ಕೂಡ.




Since 1998
**Whisper Hearing Aids**
Pvt. Ltd.
1030/13, 25 main, 39 cross,
4th 'T' block, Jayanagara, Bengaluru

SIEMENS
Authorised Hearing Care Centre

Avail **FREE** supply of batteries for a year on purchase of hearing aids for this week.
10am - 1:30pm, 5pm - 8pm
Appointment : 26640571, 9741765454

ಕಿವಿ – ಕೇಳುವ ಅಂಗವೇ ಆದರೂ ಅದರ ಒಂದು ಭಾಗ ನಮ್ಮ ದೇಹದ ಸಮತೋಲನ ಮಾಡುವ ಕೆಲಸ ನಿಭಾಯಿಸುತ್ತದೆ. ಕೇಳಿಸುವ ಭಾಗಕ್ಕೆ ತೊಂದರೆಯಾದರೆ ಕಿವುಡುತನ ಬರುತ್ತದೆ, ಹಾಗೆಯೇ ಉಳಿದ ಭಾಗಕ್ಕೆ ತೊಂದರೆಯಾದರೆ ತಲೆಸುತ್ತು ಕಿವಿಮೊರೆತ ಉಂಟಾಗುತ್ತದೆ. ಕಿವಿಮೊರೆತಕ್ಕೆ ಉಳಿದಂತೆ ಹಲವಾರು ಕಾರಣಗಳು ಇದ್ದರೂ ಈ ಸೂಕ್ಷ್ಮವಾದ ಅಂಗದ ತೊಂದರೆಯೇ ಬಹುಮಟ್ಟಿನ ಕಾರಣ. ಬಹಳ ಸಲ ಈ ತೊಂದರೆ ಔಷಧಿಗೆ ಒಗ್ಗದು. ಮೊರೆತ ಮುಚ್ಚುವಂತೆ ಶಬ್ದವನ್ನು ಹಿಯರಿಂಗ್ ಏಡ್ ಮೂಲಕ ಕೊಡಬೇಕಾಗುತ್ತದೆ. ಸದ್ಯಕ್ಕೆ ಅದೇ ಉತ್ತರ. ಕಿವಿಯ ಸೂಕ್ಷ್ಮತೆ ಕಡಿಮೆಯಾದ ನಂತರ ಹಿಯರಿಂಗ್ ಏಡ್ ಧರಿಸಿ ಎಲ್ಲರಂತೆಯೇ ಮಾತಿನ ಚಟುವಟಿಕೆಯಲ್ಲಿ ಭಾಗವಹಿಸಬೇಕು, ಅದು ಸಾಮಾನ್ಯ ಜೀವನ.

**ಡಾ|| ಜಿ. ಪುರುಷೋತ್ತಮ** ಇಡಿ.ಡಿ.
ವಾಕ್ – ಶ್ರವಣದೋಷ ತಜ್ಞ, ವಿಸ್ಪರ್ ವಾಕ್ – ಶ್ರವಣ ಕೇಂದ್ರ

# ಕಣ್ಣೀರು ಒರೆಸುವ ಕೈಗಳು....

**- ಎಚ್. ಗೋಪಾಲಕೃಷ್ಣ**

**ಅ**ದೊಂದು ಸಾರ್ವಜನಿಕ ಉದ್ದಿಮೆ. ದೇಶದ ಎಲ್ಲಾ ಕಡೆಯಿಂದಲೂ ಜನ ಇಲ್ಲಿಗೆ ಉದ್ಯೋಗ ಅರಸಿ ಬರುತ್ತಾರೆ. ಸಾರ್ವಜನಿಕ ಉದ್ದಿಮೆಯಾಗಿರುವುದರಿಂದ ನೇಮಕಾತಿ ನಿಯಮಗಳು ಮಿಕ್ಕ ಕಡೆಗಳಿಗಿಂತಲೂ ವಿಭಿನ್ನವಾದದ್ದು. ನೇರವಾಗಿ ಅಧಿಕಾರಿ ಹುದ್ದೆಗೆ ಬರುವವರಿಗೆ ಲಿಖಿತ ಪರೀಕ್ಷೆ, ಮೌಖಿಕ ಪರೀಕ್ಷೆ... ಹೀಗೆ ಹಲವು ಹಂತಗಳು. ಆಯ್ಕೆಯಾದವರು ದೇಶದ ತುಂಬಾ ಹಬ್ಬಿರುವ ಸಂಸ್ಥೆಯ ಕವಲುಗಳಲ್ಲಿ ಕೆಲಸ ಮಾಡಬೇಕಿರುವುದು ಕಡ್ಡಾಯ. ಅದರಿಂದ ಆಯ್ಕೆಯಾದವರು ಒಂದು ಕೇಂದ್ರ ಸ್ಥಳದಲ್ಲಿ ಕೆಲ ಸಮಯ ತರಬೇತಿ ಪಡೆಯುವುದು ಅತ್ಯವಶ್ಯ. ಎರಡು ಮೂರು ತಿಂಗಳು ಮನೆಯಿಂದ ಆಚೆ ಇರುತ್ತಾರೆ ಎಂದು ಇವರ ಬಗ್ಗೆ ವಿಶೇಷ ಗಮನ ಕೊಡುತ್ತೆ ಉದ್ದಿಮೆ. ಹಲವು ಸ್ಥರಗಳಲ್ಲಿ ಯಶಸ್ವೀ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಲು ಅದೇನೇನು ತರಬೇತಿ ನೀಡಬೇಕೋ ಆ ಎಲ್ಲಾ ತರಬೇತಿಯನ್ನೂ ನೀಡಿ ಸ್ಪರ್ಧಾತ್ಮಕ ಜಗತ್ತಿಗೆ ಇವರನ್ನು ಬಿಡುತ್ತದೆ.

ಈ ರೀತಿ ಪರೀಕ್ಷೆಯಲ್ಲಿ ಉತ್ತಮವಾಗಿ ಬರೆದು ಆಯ್ಕೆಯಾಗುವ ಅಭ್ಯರ್ಥಿಗಳೂ ಸಮಾಜದ ವಿವಿಧ ಹಂತಗಳಿಂದ ಬಂದಿರುವವರು. ಸಂಪೂರ್ಣ ಗ್ರಾಮ್ಯ ಪ್ರದೇಶದಿಂದ ಬರುವವರೂ ಇರುತ್ತಾರೆ. ಸುಮಾರು ಹುಡುಗರು ಇದುವರೆಗೂ ರೈಲುಗಳನ್ನೇ ನೋಡಿರುವುದಿಲ್ಲ , ಏರೋಪ್ಲೇನನ್ನು ಹಾರುವಾಗ ನೋಡಿರುವವರು, ಮತ್ತೆ ಕೆಲವರು ಹಳ್ಳಿಯನ್ನೇ ನೋಡಿಲ್ಲದವರು! ಕೆಲವರು ಮನೆಯಲ್ಲಿ ಹಿರಿಯರ ವ್ಯವಹಾರ ನೋಡುತ್ತಿರುವವರು ಮತ್ತು ಈಗಾಗಲೇ ಅಪ್ಪ ಅಮ್ಮ ಸಂಪಾದಿಸಿರುವ ಕೋಟಿ-ಕೋಟಿಗಳನ್ನು ನೋಡಿರುವವರೂ ಇರುತ್ತಾರೆ. ತರಬೇತಿಯ ಮೊದಲೆರಡು ವಾರಗಳಲ್ಲಿಯೇ ಸಾಕು ಇದು ಊರಿಗೆ ಹೋಗಿ ಅಪ್ಪನ ಆಲದ ಮರ ನೋಡುತ್ತೇನೆ ಎಂದು ಹೊರಡುವವರೂ ಇದ್ದಾರೆ.

ಹೀಗೆ ಕಳೆದ ವರ್ಷ ಒಂದು ಗುಂಪು ತರಬೇತಿಗಾಗಿ ಸೇರಿಕೊಂಡಿತ್ತು. ಅದರಲ್ಲಿ ಉತ್ತರ ಭಾರತದವರೇ ಹೆಚ್ಚು, ಅದರಲ್ಲೂ ಉತ್ತರಕಾಂಡದ ಅತಿ ಹಿಂದುಳಿದ ಪ್ರದೇಶಗಳಿಂದ ಬಂದವರೂ ಇದ್ದರು. ಆರೋಗ್ಯದಿಂದ ನಲನಲಿಸುತ್ತಿದ್ದ ಯುವಕರು, ಯುವತಿಯರು....

ಹೀಗೆ ತರಬೇತಿಗೆ ಬರುವವರಿಗೆ ನಮ್ಮ ಸಂಸ್ಥೆಯ ಬಗ್ಗೆ ಕೆಲವು ವಿಷಯಗಳನ್ನು ಸುಮಾರು ಸಲ ಪ್ರಾಸಂಗಿಕವಾಗಿಯೂ ಕೆಲವು ಬಾರಿ ಬೇರೆ ರೀತಿಯಲ್ಲೂ ಹೇಳುವುದು ಪಠ್ಯಕ್ರಮದ ಒಂದು ಭಾಗ. ಸಂಸ್ಥೆಯ ಕಾರ್ಪೊರೇಟ್ ಕಮಿಟ್‌ಮೆಂಟಿನ ಬಗ್ಗೆ ವಿವರಿಸುವುದು ಒಂದು ಪಠ್ಯಕ್ರಮದ ಭಾಗ. ಸಂಸ್ಥೆ ಕಿವುಡು ಮಕ್ಕಳಿಗೆ ಶಾಲೆ ನಡೆಸಲು ಧನಸಹಾಯ ನೀಡುವುದು, ಅತಿ ಹಿಂದುಳಿದ ಪ್ರದೇಶವೊಂದರಲ್ಲಿ ಸ್ಕೂಲು ಕಟ್ಟಿಸಿರೋದು,ಒಂದು ವಿಜ್ಞಾನ ಪ್ರಸಾರಕ್ಕೆ

ಎಂದೇ ಮೀಸಲಿರುವ ಒಂದು ಪ್ರದರ್ಶನಾಲಯ ಒದಗಿಸಿರೋದು.... ಹೀಗೆ ಸಾಮಾಜಿಕ ಬದ್ಧತೆಯನ್ನು ಕುರಿತು ಮಾಡಲಾಗಿದ್ದ ಹಲವು ಕೆಲಸಗಳ ವಿವರ ನೀಡಿಯಾಗಿತ್ತು.

ಶೈಕ್ಷಣಿಕ ಕ್ಷೇತ್ರದ ಬಗ್ಗೆ ಹೇಳುತ್ತಾ ಸಂಸ್ಥೆ ನಡೆಸುತ್ತಿರುವ ದೊಡ್ಡ ವಿದ್ಯಾಸಂಸ್ಥೆ ಅಲ್ಲಿ ಓದುತ್ತಿರುವ ಹಲವು ಸಾವಿರ ಮಕ್ಕಳು, ಇಲ್ಲಿ ಕಲಿತು ದೇಶ, ವಿದೇಶದ ಹಲವೆಡೆ ಸೇವೆ ಸಲ್ಲಿಸುತ್ತಿರುವವರು.... ಹೀಗೆ ವಿವರ ನೀಡಿಯಾಯಿತು. ಅಂದೇ ಸಂಜೆ ಕೊಂಚ ಹೊತ್ತು ಬಿಡುವು ಸಿಕ್ಕಿದ್ದರಿಂದ ತರಬೇತಿ ಪಡೆಯುತ್ತಿದ್ದವರು ಸಂಸ್ಥೆ ನಡೆಸುತ್ತಿದ್ದ ವಿಶೇಷ ಮಕ್ಕಳ ಶಾಲೆಗೂ ಬಂದರು.

ಇವರೆಲ್ಲಾ ವಿಶೇಷ ಮಕ್ಕಳು. ಮೊದಲು ಇವರಿಗೆ ಬುದ್ಧಿ ಮಾಂದ್ಯರು ಅಂತ ಕರೀತಿದ್ದೆವು. ಈಗ ಇವರನ್ನ ವಿಶೇಷ ಮಕ್ಕಳು ಅಂತ ಕೂಗುತ್ತೇವೆ. ವಿಶೇಷ ಮಕ್ಕಳಿಗೇ ಈ ಶಾಲೆ ಮೀಸಲು. ಇಡೀ ನಗರದಲ್ಲಿ ಇಂಥಹ ಶಾಲೆಗಳು ಬಹಳಾ ಕಡಿಮೆ ಇದೆ. ಹಾಗೆ ನೋಡಿದರೆ ಈ ಶಾಲೆಯ ಪ್ರಯೋಜನವನ್ನು ಪಡೆಯುತ್ತಿರುವವರು ಸಂಸ್ಥೆಯ ಸುತ್ತಮುತ್ತಲಿನವರೂ ಸೇರಿದ ಹಾಗೆ ನಗರದ ಎಲ್ಲಾ ಭಾಗದಲ್ಲೂ ಹಬ್ಬಿದ್ದಾರೆ...

ಒಂದು ಹುಡುಗಿ ಮಾತಿನ ಮಧ್ಯೆ ಕೈ ಎತ್ತಿದಳು.

ಯೆಸ್ ಯನಿ ಪ್ರಾಬ್ಲಂ?

ಒಂದು ಪ್ರಶ್ನೆ ಸಾರ್?

ಕೇಳಿ ಕೇಳಿ...

ನಮ್ಮ ಸಂಸ್ಥೆಯ ಉದ್ಯೋಗಿಗಳ ಮಕ್ಕಳೂ ಈ ಶಾಲೆಯಲ್ಲಿದ್ದಾರಾ?

ಸದ್ಯಕ್ಕೆ ಯಾರೂ ಇಲ್ಲ... ಇದ್ದಾಗಲೂ ಅವರ ಸಂಖ್ಯೆ ಶೇ. ಐದನ್ನೂ ಮೀರಿರಲಿಲ್ಲ...

ನಮ್ಮ ಸಂಸ್ಥೆಯ ಮಕ್ಕಳು ಯಾರೂ ಇಲ್ಲ ಅಂದರೂ ಸ್ಕೂಲು ನಡೆಸಿಕೊಂಡು ಬರ್ತಾ ಇದ್ದೀವಾ?

ಸಂಸ್ಥೆಯ ಕಾರ್ಪೊರೇಟ್‌ಕಮಿಟ್ ಮೆಂಟಿನ ಬಗ್ಗೆ ಅಂದರೆ ಸಾಮಾಜಿಕ ಬದ್ಧತೆ ಬಗ್ಗೆ ಮತ್ತೆ ವಿವರಣೆ ನೀಡಿದ್ದಾಯಿತು. ನಮ್ಮ ಸಾಮಾಜಿಕ ಸೇವೆಗಳ ಬಗ್ಗೆ ಹೇಳಿದ್ದಾಯಿತು, ನಮ್ಮವರೇ ಅಂಥಹ ಕಡೆ ಫಲಾನುಭಾವಿಗಳಾಗಿ ಇರಬೇಕೂಂತ ಇಲ್ಲ, ಒಟ್ಟಿನಲ್ಲಿ ನಾವು ನೀಡುವ ನೆರವು ಸೂಕ್ತರಿಗೆ ಸಿಗಬೇಕು.... ಈ ಧಾಟಿಯಲ್ಲಿ ಶಿಕ್ಷಕರು ತಮಗೆ ತೋರಿದ ಹಾಗೆ ವಿವರ ನೀಡಿದರು.

ತರಬೇತಿ ಸಮಯದಲ್ಲಿ ಈ ಹುಡುಗಿ ಯಾವಾಗಲಾದರೂ ಬಿಡುವು ಮಾಡಿಕೊಂಡು ಈ ಶಾಲೆ ಹತ್ತಿರ ಬಂದು ಸುಳಿದಾಡುತ್ತಿದ್ದಳು.

ಮೊದಲನೇ ತಿಂಗಳ ಸಂಬಳ ಬ್ಯಾಂಕಿಗೆ ರವಾನೆಯಾಗಿತ್ತು. ಹುಡುಗಿ ಒಂದೆರೆಡು ದಿವಸದ ನಂತರ ಶಾಲೆ ನಡೆಯುವ ಸಮಯದಲ್ಲಿಯೇ ಬಂದಳು.

ಬ್ಯಾಗಿನಿಂದ ಬ್ಯಾಂಕಿನ ಪಾಸ್ ಬುಕ್ಕು ತೆಗೆದಳು. ಅದರ ಜತೆಗೆ ಚೆಕ್ ಪುಸ್ತಕವನ್ನೂ ಆಚೆ ತೆಗೆದಳು.

ಮೇಡಂ, ನಾನು ಹಳ್ಳಿ ಶಾಲೆಯಲ್ಲಿ ಓದಿ ನಂತರ ಷಹರದಲ್ಲಿ ಕಾಲೇಜು ಓದಿದವಳು. ಪಟ್ಟಣಕ್ಕೆ ಬಂದ ಮೇಲೇನೇ ನಾನು ಮೊದಲ ಸಲ ರೈಲು ನೋಡಿದ್ದು. ನಮ್ಮ ಹಳ್ಳಿಯಲ್ಲೊ ಈ ರೀತಿಯ ಮಕ್ಕಳು ಇದ್ದಾರೆ, ಅವರಿಗೋಸ್ಕರ ಈ ರೀತಿಯ ಸ್ಕೂಲು ಇರುತ್ತೆ ಅಂತಲೇ ನಮ್ಮ ಹಳ್ಳಿಯಲ್ಲಿ ಯಾರಿಗೂ ಗೊತ್ತಿಲ್ಲ. ನನಗೂ ಇಲ್ಲೀಗೆ ಬಂದಮೇಲೇನೇ ಗೊತ್ತಾಗಿದ್ದು. ನಮ್ಮದು ಒಕ್ಕಲಿನ ಕುಟುಂಬ. ನಮ್ಮ ಅಪ್ಪ ಈಗಲೂ ಹೊಲ ನೋಡ್ಕೋತಾರೆ – ಊರಿನ ಜಮೀನ್ದಾರ್ದರದ್ದು. ವರ್ಷಕ್ಕೆ ಒಂದು ಸಲ ಅಪ್ಪನಿಗೆ ಅದೇನೋ ಸಂಬಳ ಅಂತ ಯಜಮಾನರು ಕೊಡ್ತಾರೆ – ಜೀವನ ಸಾಗುತ್ತೆ. ನನಗೆ ಇಲ್ಲಿ ಕೆಲಸ ಸಿಕ್ಕಾಗ ಅಪ್ಪ ತುಂಬಾ ಸಂತೋಷ ಪಟ್ಟ, ಪಗಾರ ಎಷ್ಟು ಅಂತ ಕೇಳಿದ. ಇಷ್ಟು ಸಾವಿರ ಅಂದರೆ ಅವನಿಗೆ ಅರ್ಥವೇ ಆಗಲಿಲ್ಲ. ಅವನಿಗೆ ನೂರರ ಮೇಲೆ ಎಣಿಸೋದಿಕ್ಕೇ ಬರುಲ್ಲ...

ಇಲ್ಲಿ ಒಂದು ಸ್ಕೂಲು ಇದೆ – ಅದರಲ್ಲಿ ನಮ್ಮ ಹಳ್ಳೀಲಿ ಇವೆಯಲ್ಲಾ ಮಾತು ಬರದ ಬುದ್ದಿ ನೆಟ್ಟಗಿಲ್ಲದ ಮಕ್ಕಳು ಅವರ ತರಹವೇ ಇರೋ ಮಕ್ಕಳನ್ನ ನೋಡ್ಕೋತಾರೆ ಅಂತ ಮೊನ್ನೆ ಅವರಿಗೆ ಫೋನು ಮಾಡಿದ್ದಾಗ ಹೇಳಿದ್ದೆ. ಫೋನೂನೂ ನಾನು ಕಾಲೇಜಿನ ಕೊನೆ ವರ್ಷದಲ್ಲಿದ್ದಾಗ ನಾನು ಉಪಯೋಗಿಸಿದ್ದ ಫೋನು ಅವರಿಗೆ ಕೊಟ್ಟಿದ್ದೆ. ನಾನು ಮಾತಾಡಿದರೆ ಕೇಳಿಸಿಕೊಳ್ಳೋದು ಅಷ್ಟೇ ಅದರಲ್ಲಿ... ಅವರು ಫೋನೂ ಮಾಡೋಲ್ಲ – ಅವರಿಗೆ ಅದು ಬರೋಲ್ಲ ಕಲೀಬೇಕು ಅಂತಲೂ ಆಸೆ ಇಲ್ಲ...

ಮಗೂ ಅಂತಹ ಮಕ್ಕಳಿಗೆ ಸ್ಕೂಲು ಬೇರೆ ಇರುತ್ತಾ ಅಂತ ಆಶ್ಚರ್ಯ ಪಟ್ಟ ನಮ್ಮಪ್ಪ. ಸಂಬಳ ಬಂದಕೂಡಲೇ ಆ ಮಕ್ಕಳಿಗೆ ಏನಾದರೂ ಕೊಡಿಸು ಅಂತ ಹೇಳಿದ್ದಾನೆ.

ಮೇಡಂ, ತಿಂಗಳ ಮೊದಲನೇ ಸಂಬಳ ತಗೊಂಡಿದ್ದೀನಿ. ಇದು ನನ್ನ ಮೊದಲನೇ ಸಂಪಾದನೆ. ಇನ್ನೊಂದು ತಮಾಷೆ ಗೊತ್ತಾ ನಿಮಗೆ? ಇದು ನಾನು ಬರೀತಿರೋ ಮೊದಲನೇ ಚೆಕ್ಕು. ಇದುವರೆಗೂ ನಾನು ಚೆಕ್ಕೇ ಬರೆದಿಲ್ಲ.... ತಗೊಳ್ಳಿ ಇದು, ಇದರಲ್ಲಿ ಮಕ್ಕಳಿಗೆ ಉಪಯೋಗವಾಗುವ ಏನಾದರೂ ಕೊಡಿಸಿ... ಇಪ್ಪತ್ತು ಸಾವಿರದ ಚೆಕ್ಕು ಮೇಡಂ ಕೈಗೆ ನೀಡಿದಳು.

ಮಕ್ಕಳಿಗೆ ಸಿಹಿಯನ್ನು ಅವಳೇ ಬ್ಯಾಗಿನಿಂದ ತೆಗೆದು ಹಂಚಿದಳು....

ದೂರ ನಿಂತು ಇಡೀ ಪ್ರಸಂಗವನ್ನು ನೋಡುತ್ತಿದ್ದ ನಮ್ಮ ಹೃದಯಗಳು ನೋವಿನಿಂದ ನಾಲಕ್ಕು ಬಡಿತ ಹೆಚ್ಚು ಮಾಡಬೇಕೇ? ನೋವು ಯಾಕೆ ಅಂದರೆ ಮಕ್ಕಳ ಈ ಸ್ಥಿತಿಯನ್ನು ನೋಡಿ. ನಂತರ ಅದೇ ಹೃದಯ ಖುಷಿಯಿಂದ ಮತ್ತಷ್ಟು ಬಡಿತ ಹೆಚ್ಚು ಮಾಡಕೊಳ್ಳಬೇಕೇ? ಈಗ ಖುಷಿ ಯಾಕೆ ಅಂದರೆ ಜಗತ್ತಿನಲ್ಲಿ ಕಣ್ಣೀರು ಒರೆಸಲು ಕೆಲವು ಕೈಗಳು ಯಾವಾಗಲೂ ಸಿದ್ಧವಾಗಿರುತ್ತಲ್ಲಾ ಅಂತ...!

❖

ಬ್ರೇಕಿಂಗ್ ನ್ಯೂಸ್

# ಶುದ್ಧ ಅಸುದ್ದಿ

- ಎಚ್ಚೆನ್‌ಎ

## ಆರು ಬಗೆ ರುಪಾಯಿ

**ದೇ**ವನೊಬ್ಬ ನಾಮ ಹಲವು ಎಂದಂತೆ ರುಪಾಯಿ ಒಂದೇ ಆದರೂ ಆರು ಬಗೆಯ ಕರೆನ್ಸಿಗಳಿವೆ ಎಂಬ ಸಂಗತಿ ನಿಮಗೆ ಗೊತ್ತೆ? ಅವು ಯಾವುವು ಎಂದರೆ ಕಪ್ಪು ಹಣ, ಬಿಳಿ ಹಣ, ಅಸಲಿ ರುಪಾಯಿ, ನಕಲಿ ರುಪಾಯಿ, ಹಳೆ ರುಪಾಯಿ, ಹೊಸ ರುಪಾಯಿ. ನಿಮಗೆ ಮೊದಲ ನಾಲ್ಕು ಗೊತ್ತು ಎಂದು ನನಗೂ ಗೊತ್ತು. ಮತ್ತೆ ಕೊನೆ ಎರಡು? ಅದೇ 2005ಕ್ಕೆ ಮೊದಲು ಪ್ರಿಂಟಾದದ್ದು ಮತ್ತು 2005ರ ನಂತರ ಪ್ರಿಂಟಾದದ್ದು. ಆರ್‌ಬಿಐ ಸೂಚನೆ ಪ್ರಕಾರ ಇದೇ ಮಾರ್ಚ್ 31ರೊಳಗೆ ನಾವೆಲ್ಲಾ 2005ಕ್ಕೆ ಮೊದಲು ಪ್ರಿಂಟಾದ ನೋಟುಗಳನ್ನೆಲ್ಲಾ ಇಲ್ಲಿ ಖರ್ಚು ಮಾಡಬೇಕು ಅಥವಾ ಬ್ಯಾಂಕಿಗೆ ಕೊಟ್ಟು ಬದಲಾಯಿಸಿಕೊಳ್ಳಬೇಕು. ಅಪರಂಜಿ ಓದುಗರಿಗೆ ಏನೂ ಸಮಸ್ಯೆ ಇರದು ಬಿಡಿ ಏಕೆಂದರೆ ಅವರಾರು ಕಪ್ಪು ಹಣದ ಸರದಾರರಲ್ಲ. ಆದರೆ ನನಗೆ ಪಾಕಿಸ್ತಾನದ್ದೇ ಚಿಂತೆ. ಏಕೆಂದರೆ ಅದು ಭಾರತಕ್ಕೆ ಕಪ್ಪು ಹಣ ಸಪ್ಲೈ ಮಾಡುತ್ತಲೇ ಇದೆ. ಈಗಾಗಲೇ ಅದು ಸರಬರಾಜು ಮಾಡಿರುವ ನೋಟುಗಳ ಬದಲು ಹೊಸ ನೋಟುಗಳನ್ನು ಪ್ರಿಂಟ್ ಮಾಡಿ ಕಳಿಸಬೇಕು. ಪಾಪ! ಆರ್‌ಬಿಐಗೆ ಪ್ರತಿಭಟನೆ ಸೂಚಿಸುವುದೆ?

★★★

## ಎಮ್ಮೆ, ಎಮ್ಮೆಲೆ

**ಕ**ಳೆದ ತಿಂಗಳು ಎರಡು ಘಟನೆಗಳು ನನ್ನ ಗಮನ ಸೆಳೆದವು. ಒಂದು ಉತ್ತರ ಪ್ರದೇಶದ ಮಂತ್ರಿ ಮಹೋದಯ ಅಝಮ್ ಖಾನ್ ಎಂಬಾತನ ಮನೆಯಿಂದ ಏಳು ಎಮ್ಮೆಗಳು ಕಳುವಾದವು. ಇವುಗಳನ್ನು ಹುಡುಕಲು ಪೊಲೀಸರು ಭಾರೀ ಕಾಳಜಿ ವಹಿಸಿ ಕೊನೆಗೂ ಪತ್ತೆ ಮಾಡಿದರು. ಕಳುವಾಗಲು ನೆರವಾಗದಿದ್ದರೂ ರಾತ್ರಿ ಸರಿಯಾಗಿ ನಿಗಾ ವಹಿಸಲಿಲ್ಲ ಎಂದು ಮೂವರು ಬೀಟ್ ಪೊಲೀಸರನ್ನು ಸಸ್‌ಪೆಂಡ್ ಮಾಡಲಾಯಿತು. ಭಾರೀ ಪ್ರಭಾವಶಾಲೀ ಮಂತ್ರಿಗಳ ಮನೆಯಿಂದಲೇ ಎಮ್ಮೆ ಕಳವು ಮಾಡಿದ ಆ ಕಳ್ಳರನ್ನು ಎಮ್ಮೆಲೆಗಳನ್ನಾಗಿ ಮಾಡಬಾರದೇಕೆ ಎಂಬ ಯೋಚನೆ ನನಗೆ ಬಂದರೂ ನನ್ನ ಪ್ರಾರ್ಥನೆ ಮಾತ್ರ ಬೇರೆಯದೇ ಆಗಿದೆ: ದೇವರೇ, ಮುಂದಿನ ಜನ್ಮದಲ್ಲಿ ನನ್ನನ್ನು ಉತ್ತರ ಪ್ರದೇಶದಲ್ಲಿ ಪೊಲೀಸನನ್ನಾಗಿ ಮಾಡಬೇಡ. ಸಾಧ್ಯವಾದರೆ ಅಝಮ್ ಖಾನ್ ಮನೆಯಲ್ಲಿ ಒಂದು ಎಮ್ಮೆಯಾಗಿರುವಂತೆ ಮಾಡು. ಏನಂತೀರಿ?

ಇನ್ನೊಂದು ಘಟನೆ ಹರಿಯಾಣದ್ದು. ಅಲ್ಲಿ ಮುಖ್ಯ ಮಂತ್ರಿ ಹೂಡ ಅವರ ಕೆನ್ನೆಗೇ ಒಬ್ಬ

ಕೈಯೆತ್ತಿ ಹೊಡೆದನಂತೆ. ಹಾಗೆಯೇ, ಉತ್ತರಖಾಂಡಿನ ಹೊಚ್ಚ ಹೊಸ ಮುಖ್ಯ ಮಂತ್ರಿ ಹರೀಶ್ ರಾವತ್ ಕಾರ್ಯಕರ್ತನೊಬ್ಬನಿಗೆ ತಮ್ಮ ಸ್ವ ಹಸ್ತದಿಂದಲೇ ಬಾರಿಸಿದರಂತೆ. ಹೂಡ, ರಾವತ್ ಇಬ್ಬರೂ ಅಚ್ಚ ಕಾಂಗ್ರೆಸ್ಸಿಗರಾಗಿರುವುದರಿಂದ ತಮ್ಮ ಪಕ್ಷದ ಗುರುತಾದ ಹಸ್ತ ಹೀಗೆ ಬಳಕೆಯಾಗಿರಬಹುದೆ ಎಂಬ ಜಿಜ್ಞಾಸೆ ನನ್ನದು.

★★★

## ಬಾಯಿಗೆ ಬರಲಿಲ್ಲ

**ದೋ**ನಿ, ಹೇಮ ಮಾಲಿನಿ, ತೆಂಡೂಲ್ಕರ್, ಶಿಲ್ಪಾ ಶೆಟ್ಟಿ, ವಿಶ್ವನಾಥನ್ ಆನಂದ್, ಮಮ್ಮೂಟಿ ಮುಂತಾದವರೆಲ್ಲ ಈ ಸಾಮಾನು ಉಪಯೋಗಿಸಿ, ಆ ಉತ್ಪಾದನೆ ಬೆಸ್ಟ್ ಎಂದು ರೆಕಮೆಂಡ್ ಮಾಡುವುದನ್ನು ನಾವೆಲ್ಲ ನೋಡಿಯೇ ಇದ್ದೇವೆ. ಅದರಿಂದ ಪ್ರಭಾವಿತರಾಗಿಯೋ ಅಥವಾ ಮರುಳಾಗಿಯೋ ಅದನ್ನು ಕೊಂಡು ಉಪಯೋಗಿಸಿ ಅವರು ಹೇಳಿದಷ್ಟು ಚೆನ್ನಾಗಿಲ್ಲ ಎಂದುಕೊಂಡು ಗೊಣಗುವುದು ಸಾಮಾನ್ಯ. ಆದರೆ ಇನ್ನು ಮುಂದೆ ನಾವು ಬರೇ ಗೊಣಗಬೇಕಿಲ್ಲ. ಅವರ ವಿರುದ್ಧ ಸಹ ದೂರು ಕೊಡಬಹುದು. ದೂರು? ಹೌದು, ನಮ್ಮನ್ನು ಅವರೆಲ್ಲಾ ಮಿಸ್‌ಲೀಡ್ ಮಾಡಿಲ್ಲವೆ? ಅದಕ್ಕಾಗಿ ಈ ಅವಕಾಶ ಗಿರಾಕಿಗಳಿಗೆ ಒದಗಿಸಲಾಗಿದೆ ಎಂದು ಸುದ್ದಿ. ಆದುದರಿಂದಲೇ ಇರಬೇಕು ಇತ್ತೀಚೆಗೆ ಈ ಮಂದಿ ಕಿರುತೆರೆಯ ಮೇಲೆ ಕಾಣಿಸಿಕೊಳ್ಳುವುದು ಕಡಿಮೆಯಾಗುತ್ತಿದೆ. ಆದರೆ ಈಗಷ್ಟೇ ಈ ಜಾಹೀರಾತು ಪ್ರಪಂಚಕ್ಕೆ ಕಾಲಿಡುತ್ತಿರುವ, ಕಾಲಿಡಲು ಹಾತೊರೆಯುತ್ತಿರುವ ಕೊಹ್ಲಿ, ಶಿಖರ್ ಧವನ್ ಮುಂತಾದವರಿಗೆ ಇದೊಂದು ಅಶುಭ ಸುದ್ದಿ. ಕೈಗೆ ಬಂದಿದ್ದು ಬಾಯಿಗೆ ಬರಲಿಲ್ಲ ಎಂದಂತಾಯಿತು.

★★★

## ತೂಕದ ವಿಷಯ

**ಈ** ಸೌದಿ ಅರೇಬಿಯಾದ ವ್ಯಕ್ತಿ ಮೂರು ಹಾಸಿಗೆಗಳ ಮೇಲೆ ಮಲಗುತ್ತಿದ್ದ. ಛೆ! ಅವನಿಗೆ ಮೂವರು ಹೆಂಡರಿರಲಿಲ್ಲ, ಇನ್‌ಫ್ಯಾಕ್ಟ್ ಒಬ್ಬ ಹೆಂಡತಿಯೂ ಇರಲಿಲ್ಲ. ಮತ್ತೆ ಮೂರು ಹಾಸಿಗೆ? ಅವನಿಗೆ ಒಂದು ಹಾಸಿಗೆ ಸಾಲುತ್ತಿರಲಿಲ್ಲ ಏಕೆಂದರೆ ಅವನ ತೂಕ ಬರೋಬ್ಬರಿ 610 ಕಿಲೋ, ಒಂದಿಷ್ಟು ಗ್ರಾಂ ಆ ಕಡೆ ಅಥವಾ ಈ ಕಡೆ. ಆದರೆ ನಾಲ್ಕು ತಿಂಗಳುಗಳಲ್ಲಿ ಅವನ ತೂಕ 320 ಕಿಲೋಗಳಷ್ಟು ಇಳಿದಿದೆ ಅಥವಾ ವೈದ್ಯರು ಇಳಿಸಿದ್ದಾರೆ ವಿಶೇಷ ಚಿಕಿತ್ಸೆ ನೀಡಿ. ಈಗವನ ತೂಕ (ಕೇವಲ?) 290 ಕಿಲೋ. ಆದುದರಿಂದ ಅವನಿಗೆ ಒಂದೇ ಹಾಸಿಗೆ ಸಾಕು. ಅವನಿಗಾಗಿಯೇ ಒಂದು ವಿಶೇಷ ಗಾಲಿಕುರ್ಚಿ ತಯಾರಿಸಲಾಗಿದೆ. ಆಹಾರ ಅಮೆರಿಕದಿಂದ ಆಮದು ಮಾಡಿಕೊಳ್ಳಲಾಗಿದೆ. ಇಷ್ಟೆಲ್ಲಾ ನಿಗಾ ವಹಿಸಲು ಕಾರಣ ರಾಜನ ಕೃಪೆ. ಇವನ ಆರೈಕೆಗೆ ಆಜ್ಞೆ ಮಾಡಿದ್ದರಂತೆ. ನೋಡಿ ರಾಜನ ಕೃಪೆ ಇದ್ದರೆ ರಾಜೋಪಚಾರ!

★★★

## STATEMENT OF OWNERSHIP OF APARANJI (KANNADA MONTHLY) (SEE RULES AND FORM IV)

| | | | |
|---|---|---|---|
| 1. | Place of Publication | : | Bangalore |
| 2. | Periodicity of Publication | : | Monthly |
| 3. | Printer's Name | : | V.R. Nath |
| | Nationality | : | Indian |
| | Address | : | Ravi Graphics<br>49, 4th Cross. SSI Area<br>Rajaji Nagar<br>Bangalore -560010 |
| 4. | Publisher's Name | : | Koravanji Aparanji Trust |
| | Address | : | No 36, 6th Main Road<br>Malleswaram<br>Bangalore- 560003 |
| 5. | Editor's Name | : | M.ShivaKumar |
| | Nationality | : | Indian |
| | Address | : | 36, 6th Main Road<br>Malleswaram<br>Bangalore 560003 |
| 6. | Name and address of Individuals who own the Paper | | Koravanji Aparanji Trust<br>36, 6th Main Road<br>Malleswaram<br>Bangalore 560003 |

I M. Shivakumar hereby declare that the particulars given above are true to the best of my knowledge and belief.

1-3-2014 **M. ShivaKumar**

Bangalore (Signature of the Publisher)